ಮತ್ತೊಮ್ಮೆ ಅವರು ಹೀಗೆ ಹೇಳಿದರು, "ಸ್ವರ್ಗಕ್ಕೆ ಅನೇಕ ದಾರಿಗಳಿವೆ.
ಲೋಕದಲ್ಲಿ ಮಾಡಿದ ಒಳಿತಿನ ಆಧಾರದಲ್ಲಿ ಒಬ್ಬರಿಗೆ ಅವುಗಳ ಮೂಲಕ ಪ್ರವೇಶಿಸಬಹು
ತಾಯಿಯು ಸ್ವರ್ಗಕ್ಕೆ ಮಧ್ಯದ ದಾರಿಯಾಗಿದ್ದಾಳೆ. ನೀನು ಇಚ್ಛಿಸುವುದಿದ್ದರೆ ಆ ದಾರಿಯ
ಭದ್ರಗೊಳಿಸು ಅಥವಾ ಅದನ್ನು ನಾಶಗೊಳಿಸು. ಎಲ್ಲವೂ ನಿನ್ನ ವಿಧಿ ಪ್ರಕಾರ."

ಇಬ್ನು ಉಮರ್‌ರಿಂದ ವರದಿ: ಕ್ಲಪ್ತವಾಗಿ ನಮಾಝ್ ನಿರ್ವಹಿಸಿ, ಉಪವಾಸ
ಆಚರಿಸಿ, ಝಕಾತ್ ನೀಡುವ ಓರ್ವ ಪರಿಪೂರ್ಣ ದೇವ ಭಕ್ತನೆಂದು ವಾದಿಸುವ ಒಬ್ಬ
ಪ್ರವಾದಿಯವರ(ಸ) ಬಳಿಗೆ ಬಂದರು. ಆಗ ಅವರು ಹೇಳಿದರು, "ಹಾಗಾದರೆ ನೀನು ಸ್ವ
ಪ್ರವೇಶಿಸುವೆ. ತಂದೆ ತಾಯಿಗಳಿಗೆ ಕಿರುಕುಳ ಕೊಡದಿದ್ದರೆ."

ಇಸ್ಲಾಮ್ ತಂದೆ ತಾಯಂದಿರ ಆರೈಕೆಗೆ ಅಲ್ಲಾಹನ ಮಾರ್ಗದ ಜಿಹಾದ್‌ಗಿಂತ ಶ್ರೇ
ಮಹತ್ವ ನೀಡುತ್ತದೆ.

ಅಬ್ದುರ್ರಹ್ಮಾನ್, ಅಬ್ದುಲ್ಲಾ ಬಿನ್ ಮಸ್‌ಊದ್‌ರಿಂದ ವರದಿ: ನಾ
ಪ್ರವಾದಿಯವರಲ್ಲಿ(ಸ) ಕೇಳಿದೆ, "ಅಲ್ಲಾಹನಿಗೆ ಅತಿ ಪ್ರಿಯವಾದ ಕರ್ಮ ಯಾವುದು?" ಅ
ಹೇಳಿದರು, "ಐದು ಹೊತ್ತಿನ ನಮಾಝ್" ಅನಂತರ ಯಾವುದೆಂದು ನಾನು ಕೇಳಿದೆ. ತಂ
ತಾಯಿಗಳ ಸೇವೆ ಮಾಡುವುದೆಂದು ಪ್ರವಾದಿಯವರು(ಸ) ಉತ್ತರಿಸಿದರು. ಆ ಒ
ಯಾವುದೆಂದು ನಾನು ಪುನಃ ಕೇಳಿದೆ. ಪ್ರವಾದಿ(ಸ) ತಿಳಿಸಿದರು, "ಅಲ್ಲಾಹನ ಮಾರ್ಗ
ಜಿಹಾದ್."

(ಬುಖಾರಿ, ಮುಸ್ಲಿ

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್‌ರಿಂದ ವರದಿಯಾಗಿದೆ: ಒಬ್ಬರು ಪ್ರವಾದಿಯವ
ಬಳಿ ಬಂದು ಹೇಳಿದರು, "ಅಲ್ಲಾಹನ ಪ್ರತಿಫಲಾಪೇಕ್ಷೆಯಿಂದ ವಲಸೆ ಹೋಗುತ್ತೇನೆ ಮ

; ಮಾರ್ಗದಲ್ಲಿ ಹೋರಾಡುತ್ತೇನೆಂದು ನಾನು ಭಾಷೆ ಕೊಡುತ್ತೇನೆ. ಆಗ ಪ್ರವಾದಿಯವರು(ಸ) ನರು, 'ನಿನ್ನ ತಂದೆ ತಾಯಿಯರಲ್ಲಿ ಯಾರಾದರೂ ಬದುಕಿದ್ದಾರೆಯೇ?' ಅವರು ಹೇಳಿದರು, ನು, ಇಬ್ಬರೂ ಇದ್ದಾರೆ.' ಆಗ ಪ್ರವಾದಿಯವರು(ಸ) ಕೇಳಿದರು, 'ನೀವು ಅಲ್ಲಾಹನ ಸಲವನ್ನೇ ಬಯಸುತ್ತೀರಲ್ಲವೇ?' ಅವರು ಹೌದೆಂದರು. ಹಾಗಾದರೆ ನೀವು ನಿಮ್ಮ ತಂದೆ-ುಗಳ ಬಳಿಗೆ ಹೋಗಿ ಅವರೊಂದಿಗೆ ಉತ್ತಮವಾಗಿ ವರ್ತಿಸಿರಿ." ಪ್ರವಾದಿ(ಸ) ುಸಿದರು.

(ಬುಖಾರಿ, ಮುಸ್ಲಿಮ್)

ಇನ್ನೊಂದು ವರದಿ ಪ್ರಕಾರ ಅವರು ಹೀಗೆ ಆಜ್ಞಾಪಿಸಿದ್ದರು, "ನೀವು ಹೋಗಿ ಅವರ ಕ್ಷಣೆಯ ಕಾರ್ಯದಲ್ಲಿ ಜಿಹಾದ್ ಮಾಡಿರಿ."

(ಬುಖಾರಿ, ಮುಸ್ಲಿಮ್)

ಭೂಮಿಯಲ್ಲಿ ಮಾನವನಿಗೆ ತಾಯಿಯೊಂದಿಗೆ ಅತ್ಯಧಿಕ ಋಣ ಭಾರವಿದೆ. ಅನಂತರ ಯೊಂದಿಗೆ.

ಅಬೂಹುರ್ರೈರಾರಿಂದ ವರದಿ: ಒಬ್ಬರು ಪ್ರವಾದಿಯವರ(ಸ) ಬಳಿ ಬಂದು ಕೇಳಿದರು, ್ಹನ ಪ್ರವಾದಿಗಳೇ, ನನ್ನ ಉತ್ತಮ ಸಹವಾಸಕ್ಕೆ ಯಾರು ಹೆಚ್ಚು ಅರ್ಹರು? ದಿಯವರು(ಸ) ಉತ್ತರಿಸಿದರು, 'ನಿನ್ನ ತಾಯಿ.' ಅನಂತರ ಯಾರು? ಅವರು ಪುನಃ ದರು. ಪ್ರವಾದಿ(ಸ) ಹೇಳಿದರು, 'ನಿನ್ನ ತಾಯಿ.' ಅವರು ಕೇಳಿದರು, 'ಆ ಬಳಿಕ ಯಾರು?' ದಿ(ಸ) ಹೇಳಿದರು, 'ನಿನ್ನ ತಾಯಿ.' ಅವರು ಪುನಃ ಕೇಳಿದರು, 'ಅನಂತರ ಯಾರು?' ತಂದೆ.' ಎಂದು ಪ್ರವಾದಿ(ಸ) ಉತ್ತರಿಸಿದರು.

ತಂದೆ ತಾಯಿಯರನ್ನು ದ್ವೇಷಿಸುವುದು ಮತ್ತು ಪೀಡಿಸುವುದು ಮಹಾ ವಾಗಿದೆ. ಅಬೂಹುರ್ರೈರಾರಿಂದ ವರದಿ: ಪ್ರವಾದಿ(ಸ) ಹೇಳಿದ್ದಾರೆ, "ನೀವು ತಂದೆ ಂದಿರೊಡನೆ ದ್ವೇಷ ತೋರಬೇಡಿರಿ. ಯಾರಾದರೂ ಹಾಗೆ ಮಾಡಿದರೆ ಅದು ಮಹಾ ್ನತೆಯಾಗಿದೆ."

(ಬುಖಾರಿ, ಮುಸ್ಲಿಮ್)

ತಂದೆ-ತಾಯಿಯರನ್ನು ತೆಗಳುವುದು ಮತ್ತು ಶಪಿಸುವುದು ಮಹಾ ಪಾಪವಾಗಿದೆಯೆಂದು ದಿ(ಸ) ಕಲಿಸಿದ್ದಾರೆ. ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್‌ರಿಂದ ವರದಿ: ಪ್ರವಾದಿ(ಸ) ದ್ದಾರೆ, "ಮಾನವನು ತನ್ನ ತಂದೆ-ತಾಯಿಯಂದಿರಿಗೆ ಕೆಟ್ಟ ಮಾತುಗಳನ್ನು ಹೇಳುವುದು ಪಾಪಗಳಲ್ಲಿ ಸೇರಿದೆ. ಅವರು ಕೇಳಿದರು, 'ಅಲ್ಲಾಹನ ಪ್ರವಾದಿಗಳೇ, ಯಾರಾದರೂ ತಂದೆ-ತಾಯಂದಿರನ್ನು ಬಯ್ಯುವರೇ?' ಅವರು ಹೇಳಿದರು, 'ಹೌದು ಒಬ್ಬರು ್ನಬ್ಬರ ತಂದೆಯನ್ನು ಬಯ್ಯುತ್ತಾರೆ, ಆಗ ಅವರು ಇವರ ತಂದೆಯನ್ನೂ ಬಯ್ಯುತ್ತಾರೆ. ು ಇನ್ನೊಬ್ಬನ ತಾಯಿಯನ್ನು ಬಯ್ಯುತ್ತಾನೆ. ಆಗ ಈತನೂ ಆತನ ತಾಯಿಯನ್ನು ್ಯುತ್ತಾನೆ.'

ನಮ್ಮ ಸಮಾಜದಲ್ಲಿ ತಂದೆ ತಾಯಂದಿರನ್ನು ಬಯ್ಯುವುದು, ಶಪಿಸುವ ಸರ್ವಸಾಮಾನ್ಯವಾಗಿದ್ದರೂ ಪ್ರವಾದಿಯವರ(ಸ) ಕಾಲದ ಸಮಾಜದಲ್ಲಿ ಅದು ಅಪರೂಪವಾ ತನ್ನ ತಂದೆತಾಯಿಯರನ್ನು ಇತರರು ಬಯ್ಯುವುದಕ್ಕೆ ಅವಕಾಶ ಒದಗಿಸುವುದನ್ನೂ ಘೋ ಅಪರಾಧವೆಂದು ಇಸ್ಲಾಮ್ ಆ ಮೂಲಕ ಮನವರಿಕೆ ಮಾಡಿಸಿತ್ತು.

ಮರಣವೂ ತಂದೆತಾಯಿಯರ ಬಗೆಗಿನ ಕರ್ತವ್ಯಗಳನ್ನು ಕೊನೆಗೊಳಿಸುವುದಿಲ್ಲ. ಅ ಉಬೈದಾರಿಂದ ವರದಿ, "ನಾವು ಪ್ರವಾದಿಯವರ(ಸ) ಬಳಿ ಕುಳಿತಿದ್ದೆವು. ಆಗ ಬನೂ ಸ ಗೋತ್ರದ ಒಬ್ಬರು ಬಂದು ಪ್ರವಾದಿಯವರೊಡನೆ(ಸ) ಕೇಳಿದರು, "ನನ್ನ ಮರಣ ಹೊಂ ತಂದೆ ತಾಯಿಯರಿಗಾಗಿ ಈಗ ಏನಾದರೂ ಸತ್ಕರ್ಮ ಮಾಡಲು ಸಾಧ್ಯವಿದೆಯೇ?' ಅ ಹೇಳಿದರು, "ಹೌದು, ಅವರಿಗಾಗಿ ಪ್ರಾರ್ಥಿಸಿರಿ. ಅವರೀರ್ವರ ಪಾಪವಿಮೋಚನೆ ಯಾಚಿಸಿರಿ. ಅವರ ಬಳಿಕ ಅವರು ಮಾಡಿದ್ದ ಒಪ್ಪಂದಗಳನ್ನು ಪಾಲಿಸಿರಿ. ಅವರಿಂದ ಹೊ ಸೇರಿಸಲು ಸಾಧ್ಯವಿಲ್ಲದಂತಹ ಕುಟುಂಬ ಸಂಬಂಧಗಳನ್ನು ಸ್ಥಾಪಿಸಿರಿ, ಅವರ ಸ್ನೇಹಿತ ಗೌರವಿಸಿರಿ." (ಅಬೂದಾವ

ಹೀಗೆ ತಂದೆ ತಾಯಿಯರೊಂದಿಗೆ ಯಾವ ರೀತಿ ವ್ಯವಹರಿಸಬೇಕೆಂದು ಇಸ್ಲಾ ಬಹಳ ನಿಖರವಾಗಿ ಮತ್ತು ವಿವರವಾಗಿ ತಿಳಿಸಿದೆ. ಅದನ್ನು ವ್ಯಕ್ತಿಗಳ ಇಷ್ಟಾನಿಷ್ಟ, ಸಮಾ ಧೋರಣೆ, ನಾಡರೂಢಿ ಅಥವಾ ಆಡಳಿತಗಾರರ ಹಿತಾಸಕ್ತಿಗಳಿಗೆ ಒಪ್ಪಿಸಿಲ್ಲ. ಅಲ್ಲಾ ಆರಾಧನಾ ಕರ್ಮಗಳಂತೆಯೇ, ತಂದೆ ತಾಯಂದಿರ ಕರ್ತವ್ಯ ನಿರ್ವಹಣೆಯೂ ಒ ಮಹತ್ವಪೂರ್ಣವಾಗಿದೆ. ಮಾತ್ರವಲ್ಲ, ತಂದೆ ತಾಯಿಯರೊಂದಿಗಿನ ಧೋರಣೆಯು ಕ ಆರಾಧನಾ ಕರ್ಮಗಳೂ ನಿಷ್ಪ್ರಯೋಜಕವಾಗುತ್ತದೆ. ಪ್ರವಾದಿಯವರ(ಸ) ಕಾಲದಲ್ಲಿ ನ ಒಂದು ಘಟನೆಯಿಂದ ಇದು ಸ್ಪಷ್ಟವಾಗುತ್ತದೆ-

ಅನಸ್ ಬಿನ್ ಮಾಲಿಕ್‌ರಿಂದ ವರದಿ: ಪ್ರವಾದಿಯವರ(ಸ) ಸಂಗಾತಿ, ದೇವ ಸಜ್ಜನ ಮತ್ತು ದಯಾಳುವಾಗಿದ್ದ ಅಲ್ಕಮ ಎಂಬವರು ಮಾರಕ ರೋಗದಿಂದ ಬಳಲುತ್ತಿ ಅವರ ಮಡದಿಯು ಪ್ರವಾದಿಯವರ(ಸ) ಬಳಿ ಹೋಗಿ ಪತಿಗಾಗಿ ಪ್ರಾರ್ಥಿಸುವಂತೆ ಅವ ವಿನಂತಿಸಿದರು. ಪ್ರವಾದಿಯವರು(ಸ) ಬಿಲಾಲ್ ಬಿನ್ ರಬಾಹ್, ಅಲೀ ಬಿನ್ ಅಬೀ ತಾ ಮತ್ತು ಉಮರ್ ಫಾರೂಕ್‌ರನ್ನು ಅವರ ರೋಗಸ್ಥಿತಿಯನ್ನು ತಿಳಿದು ಬರಲಿಕ್ಕಾಗಿ ಕಳುಹಿಸಿ ಅವರು ಹೋಗಿ ಅಲ್ಕಮಾರ ಉಪಚಾರ ಮಾಡಿದರು. ಮರಣಾಸನ್ನರಾಗಿದ್ದ ಅಲ್ಕಮ ಅವರು ಪವಿತ್ರ ವಚನವನ್ನು ಹೇಳಿಕೊಟ್ಟರು. ಆದರೆ, ಅದನ್ನು ಉಚ್ಚರಿಸಲು ಅ ಸಾಧ್ಯವಾಗಲಿಲ್ಲ. ಬಿಲಾಲ್ ಬಿನ್ ರಬಾಹ್ ಪ್ರವಾದಿಯವರ(ಸ) ಬಳಿಗೆ ಮರಳಿ ಬ ನಡೆದ ವಿಷಯವನ್ನು ತಿಳಿಸಿದರು.

ಪ್ರವಾದಿ(ಸ) ಕೇಳಿದರು, "ಅವರ ತಂದೆ ತಾಯಂದಿರು ಬದುಕಿದ್ದಾರೆಯೇ?" ಬೀ ಹೇಳಿದರು, "ಅವರ ತಂದೆಯು ಈ ಹಿಂದೆಯೇ ಪರಲೋಕ ಸೇರಿದ್ದಾರೆ. ಈಗ ಅ ವೃದ್ಧ ತಾಯಿಯಿದ್ದಾರೆ."

"ಅವರ ತಾಯಿಯ ಬಳಿ ಹೋಗಿ ನನ್ನ ಶುಭಕೋರಿಕೆಯನ್ನು ತಿಳಿಸಿರಿ. ಸಾಧ್ಯವಿದ್ದರೆ ನನ್ನ ಬಳಿಗೆ ಬರುವಂತೆ ತಿಳಿಸಿರಿ ಅಥವಾ ನಾನೇ ಅಲ್ಲಿಗೆ ಹೋಗುತ್ತೇನೆ" ಪ್ರವಾದಿ(ಸ) ಬಿಲಾಲ್‌ರಿಗೆ ಹೇಳಿದರು.

ಆ ವೃದ್ಧೆಯು ಬಂದಾಗ ಪ್ರವಾದಿಯವರು(ಸ) ಆಕೆಯನ್ನು ಆದರದಿಂದ ಸ್ವಾಗತಿಸಿದರು. ತರುವಾಯ ಅಲ್ಕಮಾರ ವರ್ತನೆಯ ಬಗ್ಗೆ ಕೇಳಿದರು, ಆ ವೃದ್ಧೆ ತಾಯಿ ಹೇಳಿದರು, "ನನ್ನ ಪುತ್ರ ಅಲ್ಕಮಾ, ಅಲ್ಲಾಹನ ಆಜ್ಞೆಗಳನ್ನು ಸರಿಯಾಗಿ ಪಾಲಿಸುವ ದೇವಭಕ್ತನಾಗಿದ್ದಾನೆ. ಆದರೆ, ನನ್ನೊಂದಿಗೆ ಆತನ ವರ್ತನೆಯು ಸರಿಯಾಗಿಲ್ಲ. ಆದ್ದರಿಂದ ನನಗೆ ಆತನ ಬಗ್ಗೆ ದ್ವೇಷವಿದೆ. ಹಲವೊಮ್ಮೆ ಆತನ ಪತ್ನಿಯ ಮುಂದೆ ಆತ ನನ್ನನ್ನು ನಿಂದಿಸುತ್ತಾನೆ. ನಾನು ಆಕೆಯ ಆಜ್ಞೆಯನ್ನು ಪಾಲಿಸಬೇಕಾಗುವುದು."

ಪ್ರವಾದಿ(ಸ) ಹೇಳಿದರು, 'ಅಲ್ಕಮಾರ ನಾಲಗೆಯಿಂದ ಪವಿತ್ರ ವಚನವು ಹೊರಡದಿರುವುದಕ್ಕೆ ಅದೇ ಕಾರಣವಾಗಿದೆ.' ಅನಂತರ ಅವರು ಅಲ್ಕಮಾರನ್ನು ಅಗ್ನಿಕುಂಡಕ್ಕೆ ಎಸೆಯಲಿಕ್ಕಾಗಿ ಸೌದೆ ತರುವಂತೆ ಬಿಲಾಲ್‌ರೊಡನೆ ಆಜ್ಞಾಪಿಸಿದರು. ಇದನ್ನು ಕೇಳಿದ ಆ ವೃದ್ಧೆ ಮಾತೆಯು ಗಟ್ಟಿಯಾಗಿ ಕೂಗಿ ಹೇಳಿದರು, "ಅಲ್ಲಾಹನ ಪ್ರವಾದಿಗಳೇ, ನನ್ನ ಮುಂದೆ ನನ್ನ ಮಗನನ್ನು ಬೆಂಕಿಗೆ ಹಾಕುವುದೇ? ನನ್ನಿಂದ ಅದನ್ನು ಸಹಿಸಲು ಸಾಧ್ಯವಾದೀತೇ?' ಪ್ರವಾದಿ(ಸ) ಹೇಳಿದರು, "ಅಲ್ಲಾಹನ ಶಿಕ್ಷೆಯು ಇದಕ್ಕಿಂತ ಕಠೋರವಾಗಿದೆ. ಸಾಧ್ಯವಿದ್ದರೆ ಆತನಿಗೆ ಕ್ಷಮೆ ನೀಡಿರಿ. ಇಲ್ಲವಾದರೆ ಆತನಿಗೆ ಆತನ ನಮಾಝ್, ಉಪವಾಸ ಇತ್ಯಾದಿ ಸತ್ಕರ್ಮಗಳಿಂದ ಯಾವ ಪ್ರಯೋಜನವೂ ದೊರೆಯಲಾರದು."

ಇದನ್ನು ಕೇಳಿ ಆ ತಾಯಿಯು ಮಗನನ್ನು ಕ್ಷಮಿಸಿದಳು. ಪ್ರವಾದಿಯವರು(ಸ) ಬಿಲಾಲ್‌ರನ್ನು ಪುನಃ ಅಲ್ಕಮಾರ ಬಳಿಗೆ ಕಳುಹಿಸಿದರು. ಆಗ ಅಲ್ಕಮಾ ಬಹಳ ಸ್ಪಷ್ಟವಾಗಿ ಪವಿತ್ರ ವಚನವನ್ನು ಉಚ್ಚರಿಸುತ್ತಿದ್ದರು. ಹೀಗೆ ಅದನ್ನು ಹೇಳುತ್ತಾ ಅವರು ಕೊನೆಯುಸಿರೆಳೆದರು. ಪ್ರವಾದಿಯವರೇ(ಸ) ಸ್ವತಃ ಅವರ ಜನಾಝ ನಮಾಝ್‌ನ ನೇತೃತ್ವ ವಹಿಸಿದರು. ಅಲ್ಲಾಹನಿಗಾಗಿ ಅರ್ಪಿಸುವ ಆರಾಧನಾ ಕರ್ಮಗಳು, ತಾಯಿಯ ಕೋಪದಿಂದ ಭಸ್ಮವಾಗುವುದೆಂದು ಈ ಐತಿಹಾಸಿಕ ಘಟನೆಯು ನಮಗೆ ಕಲಿಸುತ್ತದೆ.

ತಂದೆ ತಾಯಿಯ ಬಗೆಗಿನ ಧೋರಣೆಯನ್ನು ಅಲ್ಲಾಹನು ತನ್ನೊಂದಿಗಿನ ಧೋರಣೆಯಂತೆಯೇ ಪರಿಗಣಿಸಿದ್ದಾನೆ. ಆದ್ದರಿಂದ ಅವರಿಗೆ ತೋರುವ ಕೃತಜ್ಞತೆಯು ಅಲ್ಲಾಹನಿಗೆ ತೋರುವ ಕೃತಜ್ಞತೆಯಾಗಿದೆ. ಅವರ ಅನುಸರಣೆಯು ಅಲ್ಲಾಹನ ಅನುಸರಣೆಯಾಗಿದೆ. ಅವರನ್ನು ಗೌರವಿಸುವುದು ಅಲ್ಲಾಹನಿಗೆ ಗೌರವ ಸಲ್ಲಿಸಿದಂತಾಗಿದೆ. ಅರ್ಥಾತ್ ತಂದೆ ತಾಯಿಯ ಕರ್ತವ್ಯ ನಿರ್ವಹಣೆಯು ಧಾರ್ಮಿಕ ಕರ್ಮವಾಗಿದೆ. ಅಲ್ಲಾಹನ ಅತಿ ಶ್ರೇಷ್ಠ ಆರಾಧನೆಯಾಗಿದೆ.

◆◆

ಮಕ್ಕಳ ಪಾಲನೆ

ಮಕ್ಕಳು ಅನುಗ್ರಹ, ಮನೆಯ ಅಲಂಕಾರ. ಅವರ ಉಪಸ್ಥಿತಿಯನ್ನು ಎಲ್ಲರೂ ಬಯಸುತ್ತಾರೆ. ಪುಟ್ಟ ಮಕ್ಕಳ ತುಂಟಾಟವನ್ನು ಮೆಚ್ಚದವರು ತೀರಾ ವಿರಳ.

ಮಕ್ಕಳು ತಂದೆ-ತಾಯಿಗಳಿಗೆ ಮನಶ್ಶಾಂತಿಯನ್ನು ಒದಗಿಸುತ್ತಾರೆ. ಅವರ ಮುಖದ ಮಂದಹಾಸವು ಮನಸ್ಸನ್ನು ತಣಿಸುತ್ತದೆ. ಸಂತಾನ ಸೌಭಾಗ್ಯವಿಲ್ಲದವರು ನಿರಾಶರು ಮತ್ತು ದುಃಖಿತರಾಗಿರುತ್ತಾರೆ. ತಾಯ್ತನದ ಭಾವನೆ ಮತ್ತು ಪಿತೃತ್ವ ಪ್ರಜ್ಞೆಯು ನೈಸರ್ಗಿಕವಾಗಿರುವುದೇ ಅದಕ್ಕೆ ಕಾರಣವಾಗಿದೆ.

ಆದರೆ ಇಸ್ಲಾಮ್, ಮಕ್ಕಳೊಂದಿಗಿನ ಧೋರಣೆಯನ್ನು ಕೇವಲ ನೈಸರ್ಗಿಕ ಭಾವನೆಗಳಿಗೆ ಒಪ್ಪಿಸುವುದಿಲ್ಲ. ಅದು ಯಾವ ರೀತಿಯಿರಬೇಕೆಂದು ಇಸ್ಲಾಮ್ ವಿವರಿಸುತ್ತದೆ. ಅದರ ಪಾಲನೆಯು ಪುಣ್ಯಕಾರ್ಯವಾಗಿದೆ. ಉಲ್ಲಂಘನೆಯು ಶಿಕ್ಷಾರ್ಹ ಪಾಪ ಕಾರ್ಯವಾಗಿದೆ.

ಅನೇಕ ಮಕ್ಕಳನ್ನು ಕೊಡುಗೆ ನೀಡುವ ಗುಣವಂತೆಯರನ್ನು ಮಡದಿಯಾಗಿ ಸ್ವೀಕರಿಸಬೇಕೆಂದು ಇಸ್ಲಾಮ್ ಅಪೇಕ್ಷಿಸುತ್ತದೆ. ಸಚ್ಚರಿತರಾದ ಮಕ್ಕಳಿಗಾಗಿ ಪ್ರಾರ್ಥಿಸಬೇಕು ಮತ್ತು ಪ್ರವಾದಿಯವರು(ಸ) ಆ ರೀತಿ ಪ್ರಾರ್ಥಿಸಿದ್ದರೆಂದು ಅದು ಕಲಿಸುತ್ತದೆ.

ಮಕ್ಕಳೊಂದಿಗೆ ಕರುಣೆ ತೋರಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಅವರೊಂದಿಗೆ ವಾತ್ಸಲ್ಯದಿಂದ ವರ್ತಿಸಬೇಕು. ಒರಟು ಅಥವಾ ಕಟುವಾಗಿ ವರ್ತಿಸಬಾರದು.

ಒಮ್ಮೆ ಪ್ರವಾದಿಯವರು(ಸ) ಒಬ್ಬ ಮೊಮ್ಮಗನನ್ನು ಚುಂಬಿಸಿದರು. ಅವರ ಬಳಿಯಲ್ಲಿ ಅಕ್ರಲ್ ಬಿನ್ ಹಾಬಿಸ್ ಕುಳಿತಿದ್ದರು. ಅಕ್ರಲ್ ಹೇಳಿದರು, ನನಗೆ ಹತ್ತು ಮಕ್ಕಳಿದ್ದಾರೆ. ಅವರ ಪೈಕಿ ಯಾರನ್ನೂ ಈ ತನಕ ನಾನು ಚುಂಬಿಸಿಲ್ಲ. ಇದನ್ನು ಕೇಳಿ ಪ್ರವಾದಿಯವರು(ಸ) ಅವರತ್ತ ತಿರುಗಿ ಹೀಗೆಂದರು, "ಕರುಣೆ ತೋರಿಸದವನಿಗೆ ಕರುಣೆ ದೊರೆಯಲಾರದು."

(ಬುಖಾರಿ, ಮುಸ್ಲಿಮ್)

ಹಝ್ರತ್ ಆಯಿಶಾ(ರ) ವರದಿ ಮಾಡಿದ್ದಾರೆ: ಓರ್ವ ಹಳ್ಳಿಗನು ಪ್ರವಾದಿಯವರ(ಸ) ಬಳಿ ಬಂದು ಹೇಳಿದ, "ನೀವು ಮಕ್ಕಳನ್ನು ಚುಂಬಿಸುತ್ತೀರಲ್ಲವೇ. ನಾನು ಅವರನ್ನು ಚುಂಬಿಸುವುದಿಲ್ಲ. ಆಗ ಪ್ರವಾದಿಯವರು(ಸ) ಉತ್ತರಿಸಿದರು, "ಅಲ್ಲಾಹನು ನಿನ್ನ ಹೃದಯದಿಂದ ಕರುಣೆಯನ್ನು ತೆಗೆದು ಬಿಟ್ಟರೆ ನಾನೇನು ಮಾಡಲಿ?" (ಬುಖಾರಿ, ಮುಸ್ಲಿಮ್)

ಪ್ರವಾದಿಯವರು(ಸ) ಆಜ್ಞಾಪಿಸಿದ್ವಾರೆ, "ನೀವು ಮಕ್ಕಳನ್ನು ಪ್ರೀತಿಸಿ ಅವರೊಡನೆ ುಣೆ ತೋರಿಸಿರಿ. ಅವರೊಂದಿಗೆ ಒಪ್ಪಂದ ಮಾಡಿದರೆ ಪಾಲಿಸಿರಿ. ನೀವು ಅವರಿಗೆ ಆಹಾರ ಿಡುತ್ತಿರುವಿರಿ ಎಂಬುದರ ಹೊರತು ಬೇರೇನನ್ನೂ ಗ್ರಹಿಸಲು ಅವರಿಗೆ ಸಾಧ್ಯವಿಲ್ಲ."

(ತಹ್ಹಾವಿ)

ಪ್ರವಾದಿ(ಸ) ಹೇಳಿದ್ದಾರೆ, "ಪುಟ್ಟ ಮಕ್ಕಳು ಬಳಿಯಲ್ಲಿರುವಾಗ ನೀವೂ ಮಕ್ಕಳಂತೆ ರ್ತಿಸಿರಿ."

(ಇಬ್ನು ಅಸಾಕರ್)

ಮಕ್ಕಳೊಂದಿಗೆ ಒಡನಾಡಬೇಕು ಮತ್ತು ಅವರಲ್ಲಿ ಸದ್ಗುಣಗಳನ್ನು ಬೆಳೆಸಬೇಕೆಂದು ಸ್ಲಾಮ್ ಆದೇಶಿಸಿದೆ.

ಇಬ್ನು ಅಬ್ಬಾಸ್‌ರಿಂದ ವರದಿ: ಪ್ರವಾದಿ(ಸ) ಆದೇಶಿಸಿದ್ದಾರೆ, 'ನೀವು ನಿಮ್ಮ ಮಕ್ಕಳ ತೆ ಒಡನಾಡಿರಿ. ಅವರಿಗೆ ಸದ್ವರ್ತನೆಯನ್ನು ಕಲಿಸಿರಿ.'

ಅಮ್ರ್ ಬಿನ್ ಶುಐಬ್‌ರ ಮೂಲಕ ಅವರ ಪಿತಾಮಹ ವರದಿ ಮಾಡಿದ್ದಾರೆ: ್ರವಾದಿ(ಸ) ಸಾರಿದ್ದಾರೆ, "ತಮ್ಮ ಮಕ್ಕಳೊಂದಿಗೆ ಕರುಣೆ ತೋರಿಸದವರು ಮತ್ತು ಿರಿಯರನ್ನು ಗೌರವಿಸದವರು ನಮ್ಮವರಲ್ಲ."

(ಅಬೂದಾವೂದ್, ತಿರ್ಮಿದಿ)

ಜಗತ್ತಿನಲ್ಲಿ ಯಾವಾಗಲೂ ಎಲ್ಲೆಡೆಯೂ ಮಹಿಳೆಯರೇ ಹೆಚ್ಚಾಗಿ ಪೀಡಿಸಲ್ಪಡುತ್ತಾರೆ. ಿದ್ದರಿಂದ ಹೆಣ್ಣು ಮಕ್ಕಳನ್ನು ಸಾಕಿ ಸಲಹುವುದಕ್ಕೆ ಇಸ್ಲಾಮ್ ವಿಶೇಷ ಪುಣ್ಯ ಮತ್ತು ಂಹತ್ವವನ್ನು ನೀಡಿದೆ. ಪ್ರವಾದಿ(ಸ) ಹೇಳಿದ್ದಾರೆ, "ಎರಡು ಹೆಣ್ಣು ಮಕ್ಕಳು ದೊರೆತ ಒಬ್ಬ ಮುಸ್ಲಿಮನು ಅವರೊಂದಿಗೆ ಗೌರವದಿಂದ ವರ್ತಿಸಿದರೆ ಆ ಮೂಲಕ ಆತನಿಗೆ ಸ್ವರ್ಗ ಪ್ರಾಪ್ತವಾಗದಿರಲಾರದು."

(ಬುಖಾರಿ)

ಪ್ರವಾದಿಯವರು(ಸ) ಹೇಳಿದ್ದಾರೆ: "ಮೂರು ಹೆಣ್ಣು ಮಕ್ಕಳು ಅಥವಾ ಮೂರು ಹೋದರಿಯರಿಂದಾಗಿ ತಾಪತ್ರಯ ಅನುಭವಿಸುವಾತನಿಗೆ ಪ್ರತಿಫಲವಾಗಿ ಸ್ವರ್ಗ ೂರೆಯದಿರಲಾರದು."

(ತಹ್ಹಾವಿ)

ಮಕ್ಕಳಿಗೆ ನಾಮಕರಣ ಮಾಡುವಾಗಲೂ ಎಚ್ಚರ ವಹಿಸಬೇಕು. ಒಬ್ಬರು ಪ್ರವಾದಿಯವರ(ಸ) ಳಿ ಬಂದು ಕೇಳಿದರು: "ನನ್ನ ಈ ಮಗುವಿನ ಹಕ್ಕುಗಳೇನು?" ಅವರು ತಿಳಿಸಿದರು, "ನೀವು ತನ ಹೆಸರು ಮತ್ತು ವರ್ತನೆಯನ್ನು ಉತ್ತಮ ಪಡಿಸಿರಿ. ಉತ್ತಮ ಸ್ಥಳದಲ್ಲಿ ವಾಸ ೂಡಿಸಿರಿ."

(ತೂಸಿ)

ಸೌಂದರ್ಯವು ಸೊರಗುವುದೆಂಬ ಭೀತಿಯಿಂದ ಇಂದು ಅದೆಷ್ಟೋ ತಾಯಂದಿರು ಮ್ಮ ಮಕ್ಕಳಿಗೆ ಎದೆ ಹಾಲುಣಿಸುವುದಿಲ್ಲ. ಈ ವಿಷಯದಲ್ಲಿಯೂ ಇಸ್ಲಾಮಿಗೆ ತನ್ನದೇ ದ ಧೋರಣೆಯಿದೆ. ಅಲ್ಲಾಹನು ಆಜ್ಞಾಪಿಸಿದ್ದಾನೆ,

"ತಾಯಂದಿರು ತಮ್ಮ ಶಿಶುಗಳಿಗೆ ಎರಡು ವರ್ಷ ಪೂರ್ತಿಯಾಗಿ ಹಾಲುಣಿಸಬೇ ಆಗ ಶಿಶುವಿನ ತಂದೆಯು ಅವರಿಗೆ ನ್ಯಾಯೋಚಿತ ರೀತಿಯಿಂದ ಅನ್ನ, ಬಟ್ಟೆ ಕೊಡ ಬಾಧ್ಯಸ್ಥನಾಗುವನು."

(ಪವಿತ್ರ ಕುರ್‌ಆನ್, 2:2

ಕಷ್ಟ ಅನುಭವಿಸಿ ಹೆತ್ತ ಮಗುವಿನಿಂದ ಹತ್ತಿಪ್ಪತ್ತು ವರ್ಷಗಳ ಬಳಿಕ ಆಗಬಹುದ ಲಾಭ ಅಥವಾ ನಷ್ಟವನ್ನು ಅಂದಾಜಿಸಿ ಅದು ಬದುಕಬೇಕೋ ಬೇಡವೋ ಎಂ ನಿರ್ಧರಿಸುವವರೂ ಇಂದು ನಮ್ಮಲ್ಲಿ ಧಾರಾಳವಾಗಿದ್ದಾರೆ. ಗರ್ಭಕೋಶದಲ್ಲಿ ಬೆಳೆಯುತ್ತಿರ ಮಗು ದಶಕಗಳ ಬಳಿಕ ಲಾಭ ಅಥವಾ ನಷ್ಟದಾಯಕವಾಗುವುದೇ ಎಂಬುದನ್ನು ಪರಿಶೀ ಹೆರಬೇಕೇ ಅಥವಾ ಗರ್ಭಪಾತ ಮಾಡಿಸಬೇಕೇ ಎಂದು ನಿರ್ಧರಿಸುವವರಿದ್ದಾರೆ. ಮನೋಭಾವವನ್ನು ಇಸ್ಲಾಮ್ ಕಟುವಾಗಿ ನಿಷೇಧಿಸಿದೆ.'

"ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿ ಆಹಾರ ನೀಡುವೆವು ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂ ಘೋರ ಅಪರಾಧವಾಗಿದೆ." **(ಪವಿತ್ರ ಕುರ್‌ಆನ್, 17:**

"ನಿಶ್ಚಯವಾಗಿಯೂ ತಮ್ಮ ಮಕ್ಕಳನ್ನು ಅಜ್ಞಾನ ಮತ್ತು ತಿಳಿಗೇಡಿತನದಿ ವಧಿಸಿದವರೂ ಅಲ್ಲಾಹನು ಪ್ರದಾನ ಮಾಡಿದ ಅನ್ನಾಹಾರವನ್ನು ಸುಳ್ಳು ಸೃಷ್ಟನೆಯೊಂ ನಿಷೇಧ ಮಾಡಿಕೊಂಡವರೂ ನಷ್ಟದಲ್ಲಿ ಬಿದ್ದರು. ನಿಶ್ಚಯವಾಗಿಯೂ ಅವ ಪಥಭ್ರಷ್ಟರಾದರು. ಎಷ್ಟು ಮಾತ್ರಕ್ಕೂ ಅವರು ಸನ್ಮಾರ್ಗ ಪಡೆಯುವವರಲ್ಲ."

(ಪವಿತ್ರ ಕುರ್‌ಆನ್, 6:1

ಮಕ್ಕಳೊಂದಿಗೆ ಪಕ್ಷಪಾತದಿಂದ ವರ್ತಿಸುವುದನ್ನು ಇಸ್ಲಾಮ್ ವಿರೋಧಿಸಿದೆ. ನುಅ್‌ಮಾ ಬಿನ್ ಬಶೀರ್‌ರಿಂದ ವರದಿ. ಅವರ ತಂದೆಯು ಅವರನ್ನು ಪ್ರವಾದಿಯವರ(ಸ) ಬ ಕರೆದೊಯ್ದು ಹೀಗೆಂದರು, "ನಾನು ನನ್ನ ಈ ಮಗುವಿಗೆ ಓರ್ವ ಗುಲಾಮನ ಪ್ರೀತಿಯಿಂದ ದಾನ ಮಾಡಿರುತ್ತೇನೆ." ಆಗ ಅವರು ಕೇಳಿದರು: "ನಿಮ್ಮ ಎಲ್ಲ ಪುತ್ರರಿ ಹೀಗೆ ದಾನ ಕೊಟ್ಟಿದ್ದೀರಾ?" ಇಲ್ಲವೆಂದು ಅವರು ಉತ್ತರಿಸಿದಾಗ ಪ್ರವಾದಿಯವರು ಹೇಳಿದರು, "ಹಾಗಾದರೆ ಅದನ್ನು ಮರಳಿ ಪಡೆಯಿರಿ."

ಇನ್ನೊಂದು ವರದಿಯಲ್ಲಿ ಹೀಗಿದೆ: ಪ್ರವಾದಿಯವರು(ಸ) ಕೇಳಿದರು, "ನಿಮ್ಮ ಎ ಮಕ್ಕಳ ವಿಷಯದಲ್ಲಿಯೂ ಹೀಗೆಯೇ ಮಾಡಿದ್ದೀರಾ? 'ಇಲ್ಲ'ವೆಂದು ತಿಳಿಸಿದ ಪ್ರವಾದಿಯವರು(ಸ) ಆದೇಶಿಸಿದರು, "ನೀವು ಅಲ್ಲಾಹನನ್ನು ಭಯಪಡಿರಿ. ಮಕ್ಕಳ ವಿಷಯದ ನ್ಯಾಯಪಾಲಿಸಿರಿ." ಹಾಗೆಯೇ ನನ್ನ ತಂದೆಯವರು ಅಲ್ಲಿಂದ ಮರಳಿ ಬಂದು ಆ ದಾನವ ರದ್ದು ಪಡಿಸಿದರು.

ಪ್ರವಾಧಿಯವರು(ಸ) ಹೇಳಿದ್ದಾರೆ, "ನೀವು ನಿಮ್ಮ ಮಕ್ಕಳ ಮಧ್ಯೆ ದಾನದ ನ್ಯಾಯಪಾಲಿಸಿರಿ. ನಾನು ಯಾರಿಗಾದರೂ ಮಹತ್ವವನ್ನು ನೀಡುತ್ತಿದ್ದರೆ ಮಹಿಳೆಯರಿಗೆ ಆ ನೀಡುತ್ತಿದ್ದೆ." (ತ್ವಬಾ

ವಿಶ್ವಾಸಿಯು ತನ್ನ ಮಕ್ಕಳ ಆಹಾರ ಸಂಪಾದನೆಗಾಗಿ ದುಡಿಯುವುದು ಅಲ್ಲಾಹನ ೋರ್ಗದ ಪರಿಶ್ರಮವಾಗಿದೆಯೆಂದು ಪ್ರವಾದಿಯವರು(ಸ) ಕಲಿಸಿದ್ದಾರೆ.

ಕಅಬ್ ಬಿನ್ ಉಜ್ರಾರಿಂದ ವರದಿ: ಒಬ್ಬರು ಪ್ರವಾದಿಯವರ(ಸ) ಬಳಿಯಿಂದ ಹಾದು ೋದರು. ಅವರ ಶೀವಿ ಮತ್ತು ಉತ್ಸಾಹವನ್ನು ನೋಡಿದ ಪ್ರವಾದಿಯ ಅನುಯಾಯಿಗಳು ೇಳಿದರು, ಪ್ರವಾದಿಯವರೇ, ಅವರು ಅಲ್ಲಾಹನ ಮಾರ್ಗದಲ್ಲಿ ಹೀಗೆ ಹೊರಟಿದ್ದರೆ ಅದೆಷ್ಟು ತ್ತಮವಿತ್ತು! ಆಗ ಪ್ರವಾದಿಯವರು(ಸ) ಹೇಳಿದರು, "ಆತನು ತನ್ನ ಪುಟ್ಟ ಮಕ್ಕಳ ೋಷಣೆಗಾಗಿ ದುಡಿಯಲು ಹೊರಟಿದ್ದರೆ ಅಲ್ಲಾಹನ ಮಾರ್ಗದಲ್ಲಿಯೇ ಇದ್ದಾನೆ. ವೃದ್ಧ ಂದೆ ತಾಯಂದಿರಿಗಾಗಿ ಹೊರಟಿದ್ದರೂ ಆತನು ಅಲ್ಲಾಹನ ಮಾರ್ಗದಲ್ಲಿದ್ದಾನೆ. ತನ್ನ ೇಹದ ನ್ಯಾಯೋಚಿತ ಬೇಡಿಕೆಗಳಿಗಾಗಿ ಹೊರಟಿದ್ದರೂ ಅಲ್ಲಾಹನ ಮಾರ್ಗದಲ್ಲಿಯೇ ದ್ದಾನೆ. ಆದರೆ ಆಡಂಬರ- ಅಹಂಭಾವ ಪ್ರದರ್ಶಿಸಲು ಹೊರಟಿದ್ದರೆ ಆತನು ಪಿಶಾಚಿಯ ಾದಿಯಲ್ಲಿದ್ದಾನೆ." (ತಬ್ರಾನಿ)

ಮಕ್ಕಳ ಪಾಲನೆ, ಪೋಷಣೆ ಮತ್ತು ಕ್ಷೇಮಾಭಿವೃದ್ಧಿಯ ಪ್ರಯತ್ನವು ಪುಣ್ಯ ರ್ಮವಾಗಿದೆ. ಅವುಗಳಲ್ಲಿ ಮಾಡುವ ಲೋಪವು ಪಾಪಕರ್ಮವಾಗಿದೆ. ಹಾಗೆಯೇ ಮಕ್ಕಳ ಣ ನಡತೆಯ ಸಂಸ್ಕರಣೆ ಮತ್ತು ಮೂಲಶಿಕ್ಷಣಗಳ ಬಗ್ಗೆ ಎಚ್ಚರ ವಹಿಸುವುದು ತಂದೆ ಯಂದಿರ ಕರ್ತವ್ಯವಾಗಿದೆ. ಮಕ್ಕಳ ವಿಶ್ವಾಸ, ಜೀವನ ದೃಷ್ಟಿಕೋನ, ನೀತಿ, ನಡವಳಿಕೆ, ಚಾರ, ಕರ್ಮ, ವ್ಯವಹಾರ ರೀತಿ ಮತ್ತು ಸಾಂಸ್ಕೃತಿಕ ಧೋರಣೆಗಳನ್ನು ರೂಪಿಸುವುದರಲ್ಲಿ ಂದೆ ತಾಯಿಗಳ ಪಾತ್ರವು ಮಹತ್ವದ್ದಾಗಿದೆ.

ಹೀಗೆ ತಮ್ಮ ಮಕ್ಕಳ ಸಂಸ್ಕರಣೆ, ಅವರೊಂದಿಗಿನ ಉತ್ತಮ ಧೋರಣೆಯನ್ನು ಸ್ಲಾಮ್, ಧಾರ್ಮಿಕ ಕರ್ಮವೆಂದು ಪರಿಗಣಿಸುತ್ತದೆ. ಅಲ್ಲಾಹನ ಆರಾಧನೆಯೂ ವರೊಂದಿಗಿನ ಕಾರುಣ್ಯದ ವರ್ತನೆಗೆ ಅಡ್ಡಿಯಾಗದಂತೆ ಎಚ್ಚರ ವಹಿಸಬೇಕು. ವಾದಿಯವರು(ಸ) ನಮಾಝ್‌ನ ವೇಳೆಯಲ್ಲಿಯೂ ಮಗುವನ್ನು ಎತ್ತಿಕೊಂಡಿದ್ದರು. ಅವರು ಮ್ಮ ಪುತ್ರಿ ಝೈನಬ್‌ರ ಮಗು ಉಮೈಮಾರನ್ನು ಬೆನ್ನಿನಲ್ಲಿ ಕೂರಿಸಿ ನಮಾಝ್ ಾಡುತ್ತಿದ್ದರು. ನಮಾಝ್ ಮಾಡುವಾಗ ಮಕ್ಕಳ ಅಳು ಕೇಳಿದರೆ ನಮಾಝನ್ನು ೀರ್ಘಗೊಳಿಸದೆ ಹ್ರಸ್ವಗೊಳಿಸುತ್ತಿದ್ದರು. ಕರುಣೆಯ ಈ ಮಾನವೀಯ ಮುಖವನ್ನು ಳೆದುಕೊಂಡರೆ ಧರ್ಮವು ಸತ್ತು ಹೋಗುತ್ತದೆ. ಸಮಕಾಲೀನ ಸಮಾಜದಲ್ಲಿ ಅದುವೇ ಂಭವಿಸುತ್ತಿದೆ.

◆◆

ದಾಂಪತ್ಯದ ಧಾರ್ಮಿಕ ದೃಷ್ಟಿಕೋ

ದಾಂಪತ್ಯವು ಸಾರ್ಥಕ ಮತ್ತು ಸಂತೃಪ್ತವಾಗಬೇಕೆಂದು ಇಸ್ಲಾಮ್ ಬಯಸುತ್ತ ಅದಕ್ಕೆ ಅವಶ್ಯಕವಾದ ಉಪದೇಶ-ನಿರ್ದೇಶಗಳನ್ನು ಅದು ನೀಡಿದೆ. ದಾಂಪತ್ಯವು ಇಬ್ಬ ಸೇರಿ ಒಂದಾಗುವ ಮಹಾ ಪ್ರಕ್ರಿಯೆಯಾಗಿದೆ. ಅಪರಿಚಿತರಾದ ಇಬ್ಬರು ವ್ಯಕ್ತಿ ಸಂಗಮದಿಂದ ಅದು ರೂಪು ತಾಳುತ್ತದೆ. ವಿಭಿನ್ನ ಸ್ವಭಾವ ಮತ್ತು ಅಭಿರುಚಿಯಿರುವ ಸಂಯೋಜನೆಯು ಸುಗಮವಾಗಬೇಕಾದರೆ ಯೋಜಿತ ಮತ್ತು ಪ್ರಜ್ಞಾಪೂರ್ವಕವಾದ ಪ್ರಯ ಅನಿವಾರ್ಯವಾಗಿದೆ.

ಕುಟುಂಬವು ಸಮಾಜದ ಅತಿ ಸಣ್ಣ ಘಟಕವಾಗಿದೆ. ವಿವಾಹದಿಂದ ಅ ಹುಟ್ಟುತ್ತದೆ. ಅದು ದೇವಾಪೇಕ್ಷೆಗೆ ಬದ್ಧವಾಗಿದ್ದರೆ ಸಾಮಾಜಿಕ ವ್ಯವಸ್ಥೆಯ ಬುನಾದಿ ಭದ್ರವಾಯಿತು. ಆದ್ದರಿಂದಲೇ ತೀರಾ ಲೌಕಿಕವೆಂದು ಭಾಸವಾಗುವ ವಿವಾಹವನ್ನು ಇಸ್ಲಾಮ ಧರ್ಮದ ಅರ್ಧಾಂಶವೆಂದು ಪರಿಚಯ ಪಡಿಸಿದೆ. ಪ್ರವಾದಿ(ಸ) ಹೇಳಿದ್ದಾರೆ, "ವಿವಾಹದಿ ಓರ್ವರ ಧರ್ಮದ ಅರ್ಧಾಂಶವು ಪೂರ್ಣವಾಗುತ್ತದೆ. ಉಳಿದ ಅರ್ಧಾಂಶದಲ್ಲಿ ಆತ ಅಲ್ಲಾಹನ ಭಯವಿರಿಸಿಕೊಳ್ಳಲಿ." (ಬೈ

ಜೀವನದ ಇತರ ರಂಗಗಳಂತೆಯೇ ದಾಂಪತ್ಯವನ್ನೂ ಇಸ್ಲಾಮ್ ಸ್ವರ್ಗ-ನರಕದೊಂ ಜೋಡಿಸಿದೆ, ಆ ರಂಗದ ನಿಯಮ ನಿರ್ದೇಶಗಳ ಪಾಲನೆಯು ಧರ್ಮದೊಂದಿಗೆ ಅಭೇ ಸಂಬಂಧ ಹೊಂದಿದೆ.

ಕುಟುಂಬವು ಸಮಾಜದ ಪ್ರಥಮ ಸಂಸ್ಥೆಯಾಗಿದೆ. ಯಾವುದೇ ಸಂಸ್ಥೆಯ ಸುಗ ಮುನ್ನಡೆಗೆ ಓರ್ವ ನಾಯಕನಿರಬೇಕು. ಕುಟುಂಬದಲ್ಲಿ ಪುರುಷನು ಅದರ ನಾಯಕ.

"ಪುರುಷರು ಸ್ತ್ರೀಯರ ಮೇಲ್ವಿಚಾರಕರಾಗಿದ್ದಾರೆ. ಅವರ ಪೈಕಿ ಒಂದು ವಿಭಾ ಇನ್ನೊಂದು ವಿಭಾಗಕ್ಕಿಂತ ಹೆಚ್ಚಿನ ಸಾಮರ್ಥ್ಯವನ್ನು ನೀಡಿರುವುದು ಮತ್ತು ಪುರುಷ ತಮ್ಮ ಸಂಪತ್ತಿನಿಂದ ವ್ಯಯಿಸುವುದೇ ಅದಕ್ಕೆ ಕಾರಣವಾಗಿದೆ." (ಪವಿತ್ರ ಕುರ್‌ಆನ್, 4:

ಮಹಿಳೆಯರ ಸಂರಕ್ಷಣೆಯ ಹೊಣೆಯನ್ನು ವಹಿಸಿಕೊಳ್ಳುವುದರಿಂದ ಈ ನಾಯಕ ಪ್ರಾಪ್ತವಾಗುತ್ತದೆ. ವಿವಾಹಧನ ನೀಡುವುದರಿಂದ ಅದು ಆರಂಭವಾಗುತ್ತದೆ. ಅಲ್ಲಾಹ

ಪಿಸಿರುತ್ತಾನೆ, "ಅವರ ಪೋಷಕರ ಅನುಮತಿಯಿಂದ ನೀವು ಅವರನ್ನು ವಿವಾಹವಾಗಿರಿ. ವಿವಾಹಧನವನ್ನು ನ್ಯಾಯೋಚಿತ ರೀತಿಯಲ್ಲಿ ನೀಡಿರಿ."

(ಪವಿತ್ರ ಕುರ್‌ಆನ್, 4 : 25)

"ಅವರಿಗೆ ಸಲ್ಲಬೇಕಾದ ವಿವಾಹ ಧನವನ್ನು ನೀಡಿದರೆ ನೀವು ಅವರನ್ನು ಹವಾಗುವುದಕ್ಕೆ ಅಡ್ಡಿಯಿಲ್ಲ."

(ಪವಿತ್ರ ಕುರ್‌ಆನ್, 60 : 10)

ತರುವಾಯ, ಮಹಿಳೆಯ ಸಂರಕ್ಷಣೆಯ ಸಂಪೂರ್ಣ ಹೊಣೆಯನ್ನು ಪುರುಷನು ಬೇಕು. ಅದನ್ನು ಮರ್ಯಾದೆಯಿಂದ ನಿರ್ವಹಿಸಬೇಕೆಂದು ಇಸ್ಲಾಮ್ ನಿರ್ಣಯಿಸಿದೆ. ದಿಯವರು(ಸ) ಹೇಳಿದ್ದಾರೆ, "ತಿಳಿದುಕೊಳ್ಳಿರಿ, ಮಹಿಳೆಯರಿಗೆ ಉತ್ತಮ ರೀತಿಯಲ್ಲಿ ರ ಮತ್ತು ಬಟ್ಟೆ ಬರೆ ಒದಗಿಸುವುದು ನಿಮಗೆ ಅವರೊಂದಿಗಿರುವ ಕರ್ತವ್ಯವಾಗಿದೆ."

(ತಿರ್ಮಿದಿ)

ಮುಆವಿಯಾರಿಂದ ವರದಿ: "ನಾನು ಕೇಳಿದೆ- ಅಲ್ಲಾಹನ ಪ್ರವಾದಿಗಳೇ, ನಮಗೆ ನಮ್ಮ ಯರೊಂದಿಗೆ ಯಾವೆಲ್ಲ ಕರ್ತವ್ಯಗಳಿವೆ?" ಪ್ರವಾದಿ(ಸ) ಉತ್ತರಿಸಿದರು: "ನೀನು ವಾಗ ಆಕೆಗೂ ತಿನ್ನಿಸು, ನೀನು ಬಟ್ಟೆ ತೊಡುವುದಿದ್ದರೆ ಆಕೆಗೂ ತೊಡಿಸು. ಆಕೆಯ ಕ್ಕೆ ಹೊಡೆಯಬಾರದು. ಆಕೆಯನ್ನು ಹೀಗಳೆಯಬಾರದು. ಮನೆಯಲ್ಲಿ ಹೊರತು ಂದ ದೂರವಿರಬಾರದು." -

(ಅಬೂದಾವೂದ್)

ಹೀಗೆ ತಮ್ಮ ಮಡದಿಯ ಸಂರಕ್ಷಣೆಯು ಧರ್ಮವೆಂದು ಇಸ್ಲಾಮ್ ಕಲಿಸಿದೆ. ಅಬೂ ಊದ್‌ರಿಂದ ವರದಿ: "ಅಲ್ಲಾಹನ ಪ್ರತಿಫಲಾಕಾಂಕ್ಷೆಯಿಂದ ಯಾರಾದರೂ ತನ್ನ ಬಕ್ಕಾಗಿ ಖರ್ಚು ಮಾಡಿದರೆ, ಅದು ಆತನ ದಾನವಾಗಿ ಪರಿಗಣಿಸಲ್ಪಡುವುದೆಂದು ದಿಯವರು(ಸ) ಹೇಳಿದ್ದಾರೆ."

(ಬುಖಾರಿ, ಮುಸ್ಲಿಮ್)

ಪ್ರವಾದಿ(ಸ) ಹೇಳಿದ್ದಾರೆ, "ನೀನು ವ್ಯಯಿಸುವುದೆಲ್ಲವೂ ನಿನಗೆ ಧರ್ಮವಾಗಿದೆ. ನೀನು ಉಣಿಸುವ ಆಹಾರವೂ."

(ಬುಖಾರಿ)

"ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿದ ಒಂದು ದೀನಾರ್, ಗುಲಾಮನ ವಿಮೋಚನೆಗಾಗಿ ಸಿದ ಒಂದು ದೀನಾರ್, ದರಿದ್ರನಿಗಾಗಿ ವ್ಯಯಿಸಿದ ಒಂದು ದೀನಾರ್, ಪತ್ನಿಗಾಗಿ ಸಿದ ಒಂದು ದೀನಾರ್, ಇದರಲ್ಲಿ ಪತ್ನಿಗಾಗಿ ವ್ಯಯಿಸಿದ ಒಂದು ದೀನಾರಿಗೆ ಹೆಚ್ಚು ಲ ದೊರೆಯುತ್ತದೆ."

(ಮುಸ್ಲಿಮ್)

ಪತಿಯು ನ್ಯಾಯೋಚಿತವಾಗಿ ಖರ್ಚಿಗೆ ನೀಡದಿದ್ದರೆ, ಪತ್ನಿಗೆ ಆತನ ಹಣದಿಂದ ಾಗಿ ತೆಗೆದು ಉಪಯೋಗಿಸುವ ಹಕ್ಕಿದೆ. ಹ. ಆಯಿಶಾರಿಂದ(ರ) ವರದಿ: "ಅಬೂ

ಸುಫ್‌ಯಾನ್‌ರ ಪತ್ನಿ ಹಿಂದ್ ಪ್ರವಾದಿಯವರೊಡನೆ(ಸ) ದೂರು ಹೇಳಿದರು, ಸುಫ್‌ಯಾನ್ ಮಹಾ ಜಿಪುಣರಾಗಿದ್ದಾರೆ. ನನ್ನ ಮತ್ತು ಮಕ್ಕಳ ಬೇಡಿಕೆಗಳನ್ನು ಪೂರೈಸುವ ಅವರಿಗೆ ತಿಳಿಯದಂತೆ ನಾವು ತೆಗೆಯಬೇಕಾಗುತ್ತದೆ." ಆಗ ಅವರು(ಸ) ಹೇಳಿ "ನಿನಗೂ ಮಕ್ಕಳಿಗೂ ನ್ಯಾಯೋಚಿತವಾಗಿ ಅವಶ್ಯಕ ಮತ್ತು ಅನಿವಾರ್ಯವಾಗಿರುವ ತೆಗೆದುಕೊಳ್ಳಿರಿ."

(ಬುಖಾರಿ, ಮುಸ್ಲಿ

ಪುರುಷನು ಮಹಿಳೆಗೆ ಖರ್ಚಿಗೆ ನೀಡದಿರುವುದು ಮಹಾ ಅಪರಾಧವ ಪ್ರವಾದಿಯವರು(ಸ) ಹೇಳಿರುವುದಾಗಿ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್ ಮಾಡಿದ್ದಾರೆ: 'ತಾನು ಖರ್ಚಿಗೆ ನೀಡಲು ಹೊಣೆಗಾರರಾಗಿರುವವರನ್ನು ನಿರ್ಲಕ್ಷಿಸುವುದೇ ಅಪರಾಧವಾಗಿದೆ.'

(ಅಬೂದಾ

ಖಲೀಫಾ ಉಮರ್ ಫಾರೂಕ್(ರ) ಸೇನಾ ನಾಯಕರಿಗೆ ರೂಪಿಸಿದ ಸೂಚನಾ ಪತ್ರ ಹೀಗೆ ತಿಳಿಸಿದ್ದರು: ಪತ್ನಿಯಿಂದ ದೂರವಿರುವ ಪತಿಯರು ಅವರಿಗೆ ಖರ್ಚಿಗೆ ನೀಡ ಅಥವಾ ಅವರಿಗೆ ವಿವಾಹ ವಿಚ್ಛೇದನ ನೀಡಬೇಕು. ಒಂದು ವೇಳೆ ವಿವಾಹ ವಿಚ್ಛೇ ನೀಡಿದರೆ, ಪತ್ನಿಯರೆಂಬ ನೆಲೆಯಲ್ಲಿ ಅವರನ್ನು ತಮ್ಮ ಜತೆಯಲ್ಲಿರಿಸಿದ ಕಾಲಕ್ಕೆ ಬ ಖರ್ಚು ವೆಚ್ಚಗಳನ್ನು ನೀಡುವುದನ್ನು ಪುರುಷರಿಗೆ ಕಡ್ಡಾಯಗೊಳಿಸಬೇಕು.

(ಶಾಫಿಈ,

ಎಲ್ಲಾ ಪರಿಸ್ಥಿತಿಯಲ್ಲಿಯೂ ಸ್ತ್ರೀಯ ಸಂರಕ್ಷಣೆಯು ಪುರುಷನ ಹೊಣೆಯ ಮಹಿಳೆಯರು ಸ್ವತಃ ಶ್ರೀಮಂತರಾಗಿದ್ದರೂ ಜೀವನಾಂಶ ನೀಡುವುದು ಪ ಹೊಣೆಗಾರಿಕೆಯಾಗಿದೆ. ಅದರಲ್ಲಿ ಲೋಪ ತೋರುವುದು ಧಾರ್ಮಿಕ ಅಪರಾಧವಾ

ಇಸ್ಲಾಮ್ ಮಹಿಳೆಯರ ಹಕ್ಕುಗಳನ್ನು ಒತ್ತಿ ಹೇಳಿದೆ:

"ಮಹಿಳೆಯರಿಗೆ ಕೆಲವು ಕರ್ತವ್ಯಗಳಿರುವಂತೆಯೇ ಕೆಲವು ನ್ಯಾಯೋ ಹಕ್ಕುಗಳೂ ಇವೆ."

(ಪವಿತ್ರ ಕುರ್‌ಆನ್, 2

ಏಕೆಂದರೆ, ಮಹಿಳೆಯರೂ ಪುರುಷರಂತೆಯೇ ಗೌರವಾರ್ಹ ಮಾನವರಾಗಿ ಪ್ರವಾದಿ(ಸ) ಹೇಳಿದ್ದಾರೆ, "ಮಹಿಳೆಯರು ಪುರುಷರ ಭಾಗವಾಗಿದ್ದಾರೆ."

(ಅಬೂದಾವೂದ್, ತ

ಪತಿಯರು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕು.

"ನೀವು ಅವರೊಂದಿಗೆ ಉತ್ತಮ ರೀತಿಯಿಂದ ಜೀವನ ನಡೆಸಿರಿ. ಅವರು ಅಪ್ರಿಯರಾಗಿದ್ದರೆ ಒಂದು ವಸ್ತುವು ನಿಮಗೆ ಅಪ್ರಿಯವಾಗಿದ್ದರೂ ಅಲ್ಲಾಹನು ಅದರಲ್ಲಿ ಅತಿ ಹೆಚ್ಚು ಒಳಿತನ್ನಿರಿಸಿರಲೂ ಬಹುದು."

(ಪವಿತ್ರ ಕುರ್‌ಆನ್,

ಅಬೂಹುರೈರಾರಿಂದ ವರದಿ: ಪ್ರವಾದಿ(ಸ) ಹೇಳಿದರು, "ಸತ್ಯವಿಶ್ವಾಸಿಗಳಲ್ಲಿ ಅತ್ಯುತ್ತಮ ಾವದವರೇ ವಿಶ್ವಾಸದ ದೃಷ್ಟಿಯಲ್ಲಿ ಪರಿಪೂರ್ಣರಾಗಿರುತ್ತಾರೆ. ಹಾಗೆಯೇ ಕುಟುಂಬ ಂದಿಗೆ ಅತ್ಯುತ್ತಮವಾಗಿ ವರ್ತಿಸುವವರೇ ನಿಮ್ಮಲ್ಲಿ ಅತ್ಯುತ್ತಮರು."

(ತಿರ್ಮಿದಿ)

ಆಯಿಶಾರಿಂದ ವರದಿ: "ತಮ್ಮ ಕುಟುಂಬದೊಂದಿಗೆ ಉತ್ತಮವಾಗಿ ಬಾಳುವವರೇ ್ಯತ್ತಮರು. ನಾನು ಕುಟುಂಬದೊಂದಿಗೆ ಅತ್ಯುತ್ತಮವಾಗಿ ವರ್ತಿಸುವವನೆಂದೂ ಾದಿಯವರು(ಸ) ಹೇಳಿದ್ದಾರೆ."

(ಇಬ್ನು ಹಿಬ್ಬಾನ್)

ಮಹಿಳೆಯರೊಡನೆ ಗೌರವದಿಂದ ವರ್ತಿಸಬೇಕು. ಒರಟಾಗಿ ವರ್ತಿಸಬಾರದೆಂದು ್ಲಾಮ್ ಆದೇಶಿಸಿದೆ. ಪ್ರವಾದಿಯವರು(ಸ) ಹೇಳುತ್ತಾರೆ, "ಸಜ್ಜನರ ಹೊರತು ರೂ ಅವರನ್ನು ಗೌರವಿಸುವುದಿಲ್ಲ. ದುರ್ಜನರ ಹೊರತು ಯಾರೂ ಅವರನ್ನು ದಿಸುವುದಿಲ್ಲ."

ಅಬೂಹುರೈರಾರಿಂದ ವರದಿ: ಪ್ರವಾದಿಯವರು(ಸ) ಆದೇಶಿಸಿದ್ದಾರೆ, "ಯಾವೊಬ್ಬ ್ಯವಿಶ್ವಾಸಿಯೂ ಒಬ್ಬ ವಿಶ್ವಾಸಿನಿಯನ್ನು ದ್ವೇಷಿಸಬಾರದು. ಆಕೆಯ ಒಂದು ಗುಣವು ನಿಗೆ ಅಹಿತಕರವೆನಿಸಿದರೆ ಇನ್ನೊಂದು ಹಿತಕರವಾಗಿರಬಹುದು."

(ಮುಸ್ಲಿಮ್)

ಅಮ್ರ್‌ರಿಂದ ವರದಿ: ಹಜ್ಜತ್ತುಲ್ ವಿದಾದಲ್ಲಿ ಪ್ರವಾದಿಯವರು(ಸ) ಅಲ್ಲಾಹನನ್ನು ತಿಸಿ, ಆತನ ಮಹಾನತೆಯನ್ನು ಪ್ರಕೀರ್ತಿಸಿ ಬೋಧನೆ ಮತ್ತು ಉಪದೇಶ ನೀಡಿದ ಬಳಿಕ ಗೆ ಆಜ್ಞಾಪಿಸುವುದನ್ನು ನಾನು ಆಲಿಸಿದೆ- "ಗಮನಿಸಿರಿ! ಮಹಿಳೆಯರೊಡನೆ ಉತ್ತಮವಾಗಿ ್ತಿಸಬೇಕೆಂಬ ಆದೇಶವನ್ನು ನೀವು ಪಾಲಿಸಿರಿ. ಅವರು ನಿಮ್ಮ ಆಶ್ರಿತರು."

(ತಿರ್ಮಿದಿ)

"ಕುಟುಂಬದೊಡನೆ ಕಠೋರವಾಗಿ ವರ್ತಿಸುವವನು ಮತ್ತು ಸ್ವತಃ ಅಹಂಕಾರ ಕುವಾತನು ಸ್ವರ್ಗದಲ್ಲಿ ಪ್ರವೇಶಿಸುವುದಿಲ್ಲವೆಂದು ಪ್ರವಾದಿಯವರು(ಸ) ಕಲಿಸಿದ್ದಾರೆ."

(ಅಬೂದಾವೂದ್)

ಮಹಿಳೆಯ ಜತೆಯಲ್ಲಿರುವಾಗ ಆಕೆಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕು. ಾವ ರೀತಿಯಿಂದಲೂ ಸಹಬಾಳ್ವೆ ಸಾಧ್ಯವಾಗದಿದ್ದರೆ ಬಹಳ ಗೌರವದಿಂದ ಬೇರ್ಪಡಬೇಕು. ಲ್ಲಾಹನು ಆಜ್ಞಾಪಿಸಿರುತ್ತಾನೆ:

"ನ್ಯಾಯೋಚಿತವಾಗಿ ಪತ್ನಿಯನ್ನು ಇರಿಸಿಕೊಳ್ಳಬೇಕು ಅಥವಾ ಯೋಗ್ಯ ರೀತಿಯಿಂದ ಳನ್ನು ಬಿಡುಗಡೆಗೊಳಿಸಬೇಕು."

(ಪವಿತ್ರ ಕುರ್‌ಆನ್, 2:229)

"ಅವರನ್ನು ನ್ಯಾಯೋಚಿತ ರೀತಿಯಲ್ಲಿ ಇರಿಸಿಕೊಳ್ಳಬೇಕು ಅಥವಾ ನ್ಯಾಯೋಚಿತ ತಿಯಲ್ಲಿ ಕಳುಹಿಸಿಕೊಡಬೇಕು. ಕೇವಲ ಸತಾಯಿಸಲಿಕ್ಕಾಗಿ ಅವರನ್ನು ತಡೆದಿರಿಸಿದರೆ ನೀವು ್ರಮಿಗಳಾಗುವಿರಿ. ಹಾಗೆ ಮಾಡಿದರೆ ತನ್ನ ಮೇಲೆಯೇ ಅನ್ಯಾಯವೆಸಗಿದಂತಾಗುವುದು."

(ಪವಿತ್ರ ಕುರ್‌ಆನ್, 2:231)

ಪತ್ನಿಯರ ಲೋಪದೋಷಗಳನ್ನು ನಿರ್ಲಕ್ಷಿಸಬೇಕು. ಒರಟುತನವನ್ನು ಕರುಣೆಯಿ ವೀಕ್ಷಿಸಬೇಕು. ಉಮರ್ ಫಾರೂಕ್‌ರ ಆಡಳಿತ ಕಾಲದಲ್ಲಿ ಒಬ್ಬರು ತನ್ನ ಪತ್ನಿಯ ಕ ಗುಣದ ಬಗ್ಗೆ ದೂರು ನೀಡಲಿಕ್ಕಾಗಿ ಅವರ ಬಳಿಗೆ ಬಂದರು. ಖಲೀಫರು ಹೊರಬರುವುದ ಕಾಯುತ್ತಾ ಬಾಗಿಲ ಬಳಿ ನಿಂತಿದ್ದ ಅವರಿಗೆ ಖಲೀಫರ ಪತ್ನಿಯು ಅವರೊಂದಿಗೆ ಸಿಟ್ಟಿನಿ ಮಾತಾಡುತ್ತಿರುವುದು ಕೇಳಿಸಿತು. ಖಲೀಫರು ಏನೂ ಉತ್ತರಿಸದೆ ಮೌನವಾಗಿದ್ದರು. ಇದ ಅರಿತುಕೊಂಡ ಆ ವ್ಯಕ್ತಿಯು ಅಲ್ಲಿಂದ ಹಾಗೆಯೇ ಹಿಂತಿರುಗುತ್ತಾ, ಸತ್ಯವಿಶ್ವಾಸಿಗಳ ನಾಂ ಮತ್ತು ಗಡುಸು ಸ್ವಭಾವದ ಉಮರ್‌ರ ಧೋರಣೆಯು ಹೀಗಿರುವಾಗ ನನ್ನ ಹೇಗಿರಬೇಕೆಂದು ಆಲೋಚಿಸಿದರು. ಅಷ್ಟರಲ್ಲಿ ಹೊರಬಂದ ಉಮರ್(ರ) ಆತನ ನೋಡಿದರು. ಆತನನ್ನು ಹಿಂದಕ್ಕೆ ಕರೆದು, ಬಂದ ಉದ್ದೇಶವೇನೆಂದು ವಿಚಾರಿಸಿದರು. ಹೇಳಿದ: "ವಿಶ್ವಾಸಿಗಳ ನಾಯಕರೇ! ನಾನು ನನ್ನ ಪತ್ನಿಯ ಒರಟುತನ ಮತ್ತು ಸಿಡು ಬಗ್ಗೆ ದೂರು ನೀಡಲಿಕ್ಕಾಗಿ ಬಂದಿದ್ದೆ. ಆಗ ನಿಮ್ಮ ಪತ್ನಿಯೂ ಅದೇ ರೀತಿ ಮಾತಾಡುವು ಕೇಳಿಸಿತು. ಆದ್ದರಿಂದ ನಾನು ಮರಳಿ ಹೋಗುತ್ತಿದ್ದೇನೆ." ಅದನ್ನು ಕೇಳಿ ಉಮರ್ ಫಾರೂ ಹೇಳಿದರು, "ಪ್ರಿಯ ಸಹೋದರಾ, ಆಕೆಗೆ ನನ್ನ ಮೇಲಿರುವ ಹಕ್ಕುಗಳನ್ನು ನಾ ಅಂಗೀಕರಿಸುತ್ತೇನೆ. ಆಕೆಯು ನನಗಾಗಿ ಆಹಾರ ಸಿದ್ಧಪಡಿಸುತ್ತಾಳೆ. ರೊಟ್ಟಿ ತಯಾರಿಸುತ್ತಾ ಬಟ್ಟೆ ಒಗೆಯುತ್ತಾಳೆ. ನನ್ನ ಮಕ್ಕಳಿಗೆ ಮೊಲೆಯೂಣಿಸುತ್ತಾಳೆ. ವಾಸ್ತವದಲ್ಲಿ ಇವು ಆಕೆ ಹೊಣೆಗಾರಿಕೆಯಾಗಿಲ್ಲ. ಅದೇ ವೇಳೆ ಆಕೆ ನನ್ನ ಮನಸ್ಸನ್ನು ಕೆಡುಕಿನಿಂದ ರಕ್ಷಿಸುತ್ತಾ ಆದ್ದರಿಂದ ನಾನು ಆಕೆಗೆ ಸೂಕ್ತ ಪ್ರಾಶಸ್ತ್ಯ ನೀಡುತ್ತೇನೆ." ಇದನ್ನು ಕೇಳಿದ ಆಗಂತ ಹೀಗೆಂದ: 'ನನ್ನ ಪತ್ನಿಯೂ ಹಾಗೆಯೇ.'

(ಕಿತಾಬುಲ್ ಕಬಾಇರ್- ಹಾಫಿಝ್ ಶಂಸುದ್ದೀನುದ್ದಹಬಿ, ಅಲ್ ಮುಕ್ತಬುತುಸ್ಸಕಾಫಿ
ಬೈರೂತ್, ಪುಟ : 1

ಪ್ರವಾದಿಯವರು(ಸ) ಹೇಳಿದ್ದಾರೆ, "ತನ್ನ ಪತ್ನಿಯ ಗುಣದೋಷವನ್ನು ಸಹಿಸಬಲ್ಲಂತ ಪುರುಷನಿಗೆ ಅಲ್ಲಾಹನು ಪ್ರವಾದಿ ಅಯ್ಯೂಬ್‌ರಿಗೆ, ಅವರು ಎದುರಿಸಿದ ಪರೀಕ್ಷೆಗಳಿಗ ನೀಡಿದಂತಹ ಪ್ರತಿಫಲವನ್ನು ನೀಡುತ್ತಾನೆ. ಹಾಗೆಯೇ ಪತಿಯ ದುರ್ಗುಣವನ್ನು ಸಹಿಸಬ ಗೃಹಿಣಿಗೆ ಫರೋವನ ಪತ್ನಿ ಮತ್ತು ಮುಸಾಹಿಮ್‌ರ ಪುತ್ರಿಯಾಗಿದ್ದ ಆಸಿಯಾರಿಗೆ ನೀಡಿದಂ ಪ್ರತಿಫಲವನ್ನು ನೀಡುತ್ತಾನೆ."

ಪತ್ನಿಯರೊಂದಿಗೆ ಸರಸ-ಸಲ್ಲಾಪಕ್ಕೆ ಅವಕಾಶ ಒದಗಿಸಬೇಕೆಂದು ಇಸ್ಲಾಮ್ ತಿಳಿಸಿ ಪ್ರವಾದಿಯವರು(ಸ) ಹೇಳಿದ್ದಾರೆ, "ವಿನೋದ ಪ್ರಿಯರು ಮತ್ತು ಎಳೆಯರಾದ ಮಹಿಳೆಯ ನೀವು ಅರ್ಹವಾದುದನ್ನು ಒದಗಿಸಿರಿ."

"ದೇವ ಸ್ಮರಣೆಯಿಲ್ಲದ ಎಲ್ಲವೂ ಆಟ ಮತ್ತು ವಿನೋದವಾಗಿದೆ. ನಾಲ್ಕು ವಿಷಯ ಹೊರತು- ಪತ್ನಿಯೊಡನೆ ಪುರುಷನ ಸಲ್ಲಾಪ, ಕುದುರೆಗೆ ತರಬೇತಿ ನೀಡುವುದು, ನಿರ್ದಿ ಗುರಿಗಳ ಮಧ್ಯೆ ಓಡುವುದು ಮತ್ತು ಈಜು ಕಲಿಯುವುದು."

(ನಸಾ

ಮತ್ತೊಮ್ಮೆ ಅವರು ಹೀಗೆಂದರು: "ಮಾನವನ ಎಲ್ಲ ಆಟಗಳೂ ನಿಷಿದ್ಧವಾಗಿವೆ. ೂರು ಕಾರ್ಯಗಳ ಹೊರತು- ಬಾಣ ಎಸೆತ, ಕುದುರೆಯ ತರಬೇತಿ ಮತ್ತು ಪತ್ನಿಯೊಂದಿಗೆ ಸ."

(ಅಹ್ಮದ್)

ಉಮರ್ ಫಾರೂಕ್ ಹೇಳಿದ್ದಾರೆ: "ಪುರುಷನು ತನ್ನ ಮನೆಯವರ ಜತೆಯಲ್ಲಿರುವಾಗ ಟ್ಟ ಮಗುವಿನಂತಾಗಬೇಕು."

(ಅಲ್ ಮರ್‌ಅತು ಫಿತ್ತಸ್ಸವುರಿಲ್ ಇಸ್ಲಾಮಿ, ಪುಟ : 88)

ಇಮಾಮ್ ಗಝ್ಝಾಲಿ ಹೇಳಿದ್ದಾರೆ, "ಪತ್ನಿಯರೊಂದಿಗೆ ಸರಸ ಸಲ್ಲಾಪ, ಆಟ ನೋದಗಳಲ್ಲಿ ಭಾಗಿಯಾಗಬೇಕು. ಅವು ಅವರ ಅಂತರಂಗವನ್ನು ಆನಂದ ಕಿತಗೊಳಿಸುವುದು. ಪ್ರವಾದಿಯವರೂ(ಸ) ಅವರ ಜತೆಯಲ್ಲಿ ಹಾಸ್ಯ ವಿನೋದಗಳನ್ನು ೆಸುತ್ತಿದ್ದರು. ವ್ಯವಹಾರ ಮತ್ತು ವರ್ತನೆಯಲ್ಲಿ ಅವರ ಮಟ್ಟಕ್ಕೆ ಇಳಿಯುತ್ತಿದ್ದರು."

(ಇಹ್ಯಾ ಉಲೂಮುದ್ದೀನ್)

ಪತ್ನಿಯರೊಡನೆ ಪ್ರವಾದಿಯವರ(ಸ) ವರ್ತನೆಯ ಕುರಿತು ಹ. ಆಯಿಶಾ ಹೇಳುತ್ತಾರೆ: ತ್ನಿಯ ಜತೆಯಲ್ಲಿ ಒಂಟಿಯಾಗಿರುವಾಗ ಅವರು ಧಾರಾಳವಾಗಿ ನಗುವ ಸೌಮ್ಯ ುಷರಾಗಿದ್ದರು."

ಪ್ರವಾದಿಯವರು(ಸ) ಪತ್ನಿಯರೊಡನೆ ಬಹಳ ವಿನಯದಿಂದ ವರ್ತಿಸುತ್ತಿದ್ದರು. ವಾದಿಯವರ(ಸ) ಕಾಲನ್ನು ಮೆಟ್ಟಿನಿಂತು ಅವರ ಪತ್ನಿಯರು ಒಂಟೆಯ ಮೇಲೇರುತ್ತಿದ್ದರು. ಬ್ಬದ ದಿನದಲ್ಲಿ ಮಹಿಳೆಯರನ್ನು ಸಾರ್ವಜನಿಕ ಮೈದಾನದಲ್ಲಿ ಭಾಗಿಯಾಗಿಸುತ್ತಿದ್ದರು. ಾತ್ರವಲ್ಲ, ಅವರಿಗೆ ತೃಪ್ತಿಯಾಗುವ ತನಕ ಆಟೋಟಗಳನ್ನು ತೋರಿಸುತ್ತಿದ್ದರು. ಆಯಿಶಾ ೇಳಿದ್ದಾರೆ, "ಹಬ್ಬದ ದಿನ ಇಬ್ಬರು ಹುಡುಗಿಯರು ನನ್ನ ಬಳಿ ನಿಂತು, ಹಾಡುತ್ತಿದ್ದರು. ುಗೆ ಅಡ್ಡಿಯಾಗಬಾರದೆಂಬ ಭಾವನೆಯಿಂದ ಪ್ರವಾದಿಯವರು(ಸ) ಮುಖವನ್ನು ಬೇರೆಡೆಗೆ ುಗಿಸಿ ಅಲ್ಲಿಯೇ ಮಲಗಿದ್ದರು. ಆಗ ಅಲ್ಲಿಗೆ ಬಂದ ಅಬೂಬಕರ್ ಸಿದ್ದೀಕ್ ಕೇಳಿದರು, ್ರವಾದಿಯ ಮನೆಯಲ್ಲಿ ಪಿಶಾಚಿಯ ವೀಣಾವಾದನವೇ?" ಅದನ್ನು ಕೇಳಿ ಪ್ರವಾದಿಯವರು(ಸ) ೇಳಿದರು, "ಅಬೂಬಕರ್, ಅವರನ್ನು ಬಿಟ್ಟು ಬಿಡಿರಿ. ಇಂದು ಹಬ್ಬವಲ್ಲವೇ. ಅವರು ಡಲಿ."

ಆಯಿಶಾ(ರ) ಮುಂದುವರಿಸುತ್ತಾರೆ, "ಹಬ್ಬದ ದಿನ ಇಥಿಯೋಪಿಯಾದ ಡವು ಮಸೀದಿಯ ಬಳಿ ಕವಾಯಿತು ನಡೆಸುತ್ತಿತ್ತು. ಪ್ರವಾದಿಯವರು(ಸ) ಕೇಳಿದರು, ಆಟ ೋಡುವ ಆಸೆಯಿದೆಯೇ? ಇದೆಯೆಂದು ಹೇಳಿದಾಗ ಅವರೂ ನನ್ನ ಜತೆಯಲ್ಲಿ ನಿಂತು ಟವನ್ನು ತೋರಿಸಿದರು. ನಾನು ಸಾಕೆಂದು ಹೇಳಿದ ಬಳಿಕವೇ ಅವರು ಅಲ್ಲಿಂದ ರಳಿದರು."

ಪ್ರವಾದಿಯವರು(ಸ) ಪತ್ನಿ ಆಯಿಶಾರ ಜತೆಯಲ್ಲಿ ಓಟದ ಸ್ಪರ್ಧೆ ನಡೆಸುತ್ತಿದ್ದರು. ಆಯಿಶಾರಿಂದ(ರ) ವರದಿಯಾಗಿದೆ: "ಪ್ರವಾದಿಯವರು ನನ್ನ ಜತೆಯಲ್ಲಿ ಓಟದ ಸ್ಪರ್ಧೆ

ನಡೆಸುತ್ತಿದ್ದರು. ನಾನು ಅವರನ್ನು ಸೋಲಿಸುತ್ತಿದ್ದೆ, ನನ್ನ ದೇಹವು ದಪ್ಪವಾಗುವ ತ ಆ ಬಳಿಕ ಅವರು ನನ್ನನ್ನು ಸೋಲಿಸಿದರು. ಆಗ ಪ್ರವಾದಿ(ಸ) ಹೇಳಿದರು, "ಇದು ಹ ಸೋಲಿನ ಪ್ರತೀಕಾರ."

(ಅಹ

ದಂಪತಿಯರ ಪರಸ್ಪರ ಲೈಂಗಿಕ ಸಂಬಂಧವು ಪುಣ್ಯದಾಯಕವೆಂದು ಇಸ್ಲಾ ಧರ್ಮವು ಕಲಿಸುತ್ತದೆ. ಪ್ರವಾದಿಯವರು(ಸ) ಹೇಳಿದರು, "ಪತ್ನಿಯ ಜತೆ ನಡೆ ಸಂಸರ್ಗಕ್ಕೆ ನಿನಗೆ ಪ್ರತಿಫಲವಿದೆ." ಆಗ ಸಹಾಬಿಗಳು ಕೇಳಿದರು, 'ಅಲ್ಲಾಹನ ಪ್ರವಾದಿ ನಮ್ಮ ಪೈಕಿ ಯಾರಾದರೂ ಲೈಂಗಿಕಾಸಕ್ತಿಯನ್ನು ಶಮನಗೊಳಿಸಿದರೂ ಅದಕ್ಕಾಗಿ ಪ್ರ ದೊರೆಯುವುದೇ?' ಅವರು ಹೇಳಿದರು: "ಅವರು ಅದನ್ನು ನಿಷಿದ್ಧ ರೀತಿಯಲ್ಲಿ ಶಮನಗೊಳಿ ಶಿಕ್ಷಾರ್ಹವಾಗುವುದಿಲ್ಲವೇ? ಹಾಗೆಯೇ ಧರ್ಮಬದ್ಧ ರೀತಿಯಲ್ಲಿ ಈಡೇರಿಸಿದಾಗ ಪ್ರತಿಫಲಕ್ಕೆ ಅರ್ಹವಾಗುತ್ತದೆ."

(ಮುಸ್ಲಿ

ಲೈಂಗಿಕ ಸಂಬಂಧದ ಶಿಷ್ಟಾಚಾರವನ್ನೂ ಇಸ್ಲಾಮ್ ಕಲಿಸುತ್ತದೆ. ಪ್ರವಾದಿಯವರ ಹೇಳಿದ್ದಾರೆ, "ನಿಮ್ಮ ಪೈಕಿ ಯಾರೂ ಜಾನುವಾರುಗಳಂತೆ ಪತ್ನಿಯನ್ನು ಭೋಗಿಸಬಾ ಅವರ ಮಧ್ಯೆ ಓರ್ವ ದೂತನಿರಲಿ." ಯಾರು ಆ ದೂತ ಎಂದು ವಿಚಾರಿಸಿದಾಗ ಅ ತಿಳಿಸಿದರು: "ಚುಂಬನ ಮತ್ತು ಸರಸ ಸಲ್ಲಾಪ."

(ದೈ

"ನೀವು ಪತ್ನಿಯರೊಡನೆ ಪಕ್ಷಿಗಳಂತೆ ಲೈಂಗಿಕ ಸಂಪರ್ಕ ನಡೆಸಬಾರದು. ಸಾವ ಮತ್ತು ತಾಳ್ಮೆ ವಹಿಸಬೇಕು."

(ತ

ಅನಸ್ ಬಿನ್ ಮಾಲಿಕ್‌ರಿಂದ(ರ) ವರದಿ: "ನಿಮ್ಮಲ್ಲಿ ಯಾರಾದರೂ ಪತ್ನಿಯ ಮಲಗಿದಾಗ ಆಕೆಗೆ ಸ್ವಲ್ಪ ದಾನವಾಗಿ ನೀಡಬೇಕು. ತನ್ನ ಅವಶ್ಯಕತೆ ಮಾಡಲು ಈಡೇ ಅನಂತರ ಅವಸರ ಮಾಡಬಾರದು. ಆಕೆಯ ಅಗತ್ಯವನ್ನು ಆಕೆಯೂ ಈಡೇರಿಸಲಿ."

(ಅಬೂ ಯ

ಇಮಾಮ್ ಗಝ್ಝಾಲಿ ಹೇಳಿದ್ದಾರೆ, "ಪುರುಷನ ಕಾಮಶಮನ(ವೀರ್ಯಸ್ಖಲನ)ವಾ ಪತ್ನಿಗಾಗಿ, ಆಕೆಗೂ ತೃಪ್ತಿ ದೊರೆಯುವ ತನಕ ಕಾಯಬೇಕು. ಪತ್ನಿಯ ಕಾಮ ಶಮ ತಡವಾಗಬಹುದು. ಲೈಂಗಿಕ ಕಾಮನೆಯು ತೀವ್ರವಾಗಿರುವಂತಹ ಆ ಸಂದರ್ಭ ಪುರುಷನು ಪಕ್ಕನೆ ವಿರಮಿಸಿದರೆ ಆಕೆಗೆ ತುಂಬಾ ಸಂಕಟವಾದೀತು. ಕಾಮ ಶಮನ ಅಂತರವಿರುವಾಗ ಪುರುಷನಿಗೆ ಅದೆಷ್ಟೇ ಕ್ಷಿಪ್ರವಾಗಿ ಶಮನವಾದರೂ ಸಂಗ ತೃಪ್ತಿಯಾಗುವ ತನಕ ಕಾಯಲೇ ಬೇಕು. ಆದರೆ ಒಟ್ಟಿಗೆ ಶಮನಗೊಳ್ಳುವುದು ಅತ ಆಹ್ಲಾದಕರವಾಗಿದೆ."

(ಇಹ್ಯಾ ಉಲೂಮುದ್ದೀನ್, ಅದಬುಲ್ ಮುಆಶರಃ- ಪುಟ :

ಆರಾಧನಾ ಕರ್ಮಗಳಿಗಾಗಿಯೂ ಜೀವನ ಸಂಗಾತಿಯ ಲೈಂಗಿಕ ಬೇಡಿಕೆಯನ್ನು ಪೂರ್ಣ ನಿರ್ಲಕ್ಷಿಸಬಾರದೆಂದು ಇಸ್ಲಾಮ್ ಸ್ಪಷ್ಟವಾಗಿ ಆದೇಶಿಸಿದೆ.

ಒಮ್ಮೆ ಉಸ್ಮಾನ್ ಬಿನ್ ಮಝ್‌ಊನ್‌ರ ಪತ್ನಿ ಖೌಲಾ, ಪ್ರವಾದಿಯ ಪತ್ನಿ ಶಾರ ಬಳಿಗೆ ಬಂದರು. ಅಲ್ಲಿ ಬೇರೆ ಮಹಿಳೆಯರೂ ಇದ್ದರು. ಖೌಲಾರ ವೇಷವು ಶೋಚನೀಯವಾಗಿತ್ತು. ಕಣ್ಣಿಗೆ ಕಾಡಿಗೆ ಹಚ್ಚಿರಲಿಲ್ಲ. ತಲೆ ಬಾಚಿರಲಿಲ್ಲ. ಸುಗಂಧ ಸಿರಲಿಲ್ಲ. ಆಯಿಶಾ(ರ) ಕೇಳಿದರು, "ಖೌಲಾ, ಏನಿದು ನಿಮ್ಮ ಅವಸ್ಥೆ?"

"ಯಾಕೆ ತಲೆ ಬಾಚಬೇಕು? ಯಾಕೆ ಸುಗಂಧ ಲೇಪಿಸಬೇಕು? ಅವರು ನನ್ನನ್ನು ಸದೆ ಅದೆಷ್ಟು ದಿನಗಳಾದುವು?" ಖೌಲಾ ತಮ್ಮ ಮನೋವೇದನೆಯನ್ನು ತೋಡಿಕೊಂಡರು. ನ್ನು ಕೇಳಿ ಆಯಿಶಾ(ರ) ಮತ್ತು ಗೆಳತಿಯರು ನಗಾಡಿದರು. ಆಗ ಅಲ್ಲಿಗೆ ಪ್ರವಾದಿಯವರು(ಸ) ಮಿಸಿದರು. ಅವರು ನಗುವಿನ ಕಾರಣವನ್ನು ವಿಚಾರಿಸಿದರು. ಆಯಿಶಾ(ರ) ವಾದಿಯವರಿಗೆ(ಸ) ನಡೆದ ಘಟನೆಯನ್ನು ವಿವರಿಸಿದರು. ಕೂಡಲೇ ಪ್ರವಾದಿಯವರು(ಸ) ಲಾರ ಪತಿಯನ್ನು ಕರೆಸಿ ವಿವರಣೆಯನ್ನು ಕೇಳಿದಾಗ, ಅವರು ಹೀಗೆಂದರು, "ಅಲ್ಲಾಹನ ಧನೆಯನ್ನು ಹೆಚ್ಚಿಸಲಿಕ್ಕಾಗಿ ನಾನು ಅದನ್ನು ತೊರೆದಿದ್ದೇನೆ."

"ನಾನು ಅದನ್ನು ತೀವ್ರವಾಗಿ ಖಂಡಿಸುತ್ತೇನೆ. ನೀವು ಕೂಡಲೇ ಹೋಗಿ ಪತ್ನಿಯ ಮಲಗಿರಿ." ಪ್ರವಾದಿ(ಸ) ಆಜ್ಞಾಪಿಸಿದರು.

"ನನಗೆ ಉಪವಾಸವಿದೆಯಲ್ಲವೇ?" ಉಸ್ಮಾನ್ ಬಿನ್ ಮಝ್‌ಊನ್.

"ಉಪವಾಸ ತೊರೆಯಲೇಬೇಕು" ಪ್ರವಾದಿ(ಸ) ಆದೇಶಿಸಿದರು. ಅವರು ಪ್ರವಾದಿಯವರ(ಸ) ಶವನ್ನು ಪಾಲಿಸಿದರು. ಖೌಲಾ ಮರಳಿ ಬಂದಾಗ ಬಹಳ ಸಂತೋಷದಲ್ಲಿದ್ದರು. ಬಾಚಿ, ಕಣ್ಣಿಗೆ ಕಾಡಿಗೆ ಹಚ್ಚಿದ್ದರು. ಅವರು ಆಯಿಶಾರೊಡನೆ(ರ) ಹೇಳಿದರು, 'ಅವರು ನನ್ನ ಬಳಿಗೆ ಬಂದಿದ್ದರು' ಅದನ್ನು ಕೇಳಿ ಪ್ರವಾದಿಯವರು(ಸ) ಮುಗುಳ್ನಕ್ಕರು.

ಒಮ್ಮೆ ಓರ್ವ ಮಹಿಳೆಯು ಉಮರುಲ್ ಫಾರೂಕ್‌ರ ಬಳಿಗೆ ಬಂದರು: "ಅಮೀರುಲ್ ಮಿನೀನ್, ನನ್ನ ಪತಿಯು ಹಗಲಲ್ಲಿ ಉಪವಾಸ ಆಚರಿಸುತ್ತಾರೆ. ರಾತ್ರಿ ನಿಂತು ಾರುಖ್ ಮಾಡುತ್ತಾರೆ. ಅವರನ್ನು ದೂರಲು ನನಗೆ ಮನಸ್ಸಿಲ್ಲ. ಅವರು ದೇವಾರಾಧನೆಯಲ್ಲಿ ರಾಗಿದ್ದಾರಲ್ಲವೇ."

"ಬಹಳ ಸಂತೋಷ. ನಿನ್ನ ಪತಿಯೇ ನಿಜವಾದ ಪತಿ." ಉಮರುಲ್ ಫಾರೂಕ್ ದರು.

ಮಹಿಳೆಯು ತನ್ನ ಮಾತನ್ನು ಪುನರಾವರ್ತಿಸಿದಳು. ಖಲೀಫರೂ ಮೊದಲಿನಂತೆಯೇ ್ಯುತ್ತರಿಸಿದರು. ಆಗ ಕಅಬುಲ್ ಅಝ್ದಿ ಹೀಗೆಂದರು: "ಅಮೀರುಲ್ ಮೂಮಿನೀನ್, ಯು ಶಯ್ಯಾಗಾರದಿಂದ ದೂರವಿರುವ ಬಗ್ಗೆ ಅವರು ದೂರು ನೀಡುತ್ತಿದ್ದಾರೆ."

"ಅವರ ಮಾತಿನ ಇಂಗಿತವನ್ನು ಅರ್ಥ ಮಾಡಿರುವ ನೀವೇ ಅವರ ಮಧ್ಯೆ ತೀರ್ಪು ರಿ." ಉಮರ್(ರ) ತಿಳಿಸಿದರು.

"ಹಾಗಾದರೆ, ನನಗೆ ಈ ಮಹಿಳೆಯ ಪತಿಯನ್ನು ನೋಡಬೇಕು."

ಅಂತೆಯೇ ಪತಿಯನ್ನು ಕರೆಸಲಾಯಿತು. ಕಅಬ್ ಹೇಳಿದರು, "ನಿಮ್ಮ ಪತ್ನಿಯು ನಿ ಬಗ್ಗೆ ದೂರು ನೀಡಿದ್ದಾಳೆ."

"ಆಹಾರದ ವಿಷಯದಲ್ಲಿಯೋ? ಅಥವಾ ಪಾನೀಯದ ವಿಷಯದಲ್ಲಿಯೋ?"

"ಎರಡೂ ಅಲ್ಲ' ಕಅಬ್ ಹೇಳಿದರು.

ಆ ವೇಳೆ ಮಹಿಳೆಯು ಹೀಗೆ ಹಾಡಿದಳು,

"ವಿವೇಕ ಮತ್ತು ಯುಕ್ತಿಶಾಲಿಯಾಗಿರುವ ನ್ಯಾಯಾಧೀಶರೇ
ನನ್ನ ಪ್ರಿಯತಮನು ನನ್ನ ಶಯ್ಯಾಗಾರವನ್ನು ಮರೆತಿದ್ದಾರೆ.
ತನ್ನ ಮಸೀದಿಯ ಪ್ರೀತಿಭಾವದಿಂದ
ಆರಾಧನೆಗಳು ಅವರನ್ನು ಸಹಶಯನದಿಂದ ವಿರಕ್ತವಾಗಿಸಿದೆ.
ಆದ್ದರಿಂದ, ನ್ಯಾಯಾದೀಶ ಕಅಬ್‌ರೇ, ನೀವು ತೀರ್ಪು ನೀಡಿ.
ನ್ಯಾಯೋಚಿತ ತೀರ್ಪು, ಸಂಕೋಚ ಪಡಬೇಡಿರಿ.
ಅವರ ರಾತ್ರಿ ಹಗಲುಗಳು ನಿದ್ರಾಹೀನವಾಗಿವೆ.
ಖಂಡಿತ, ಮಹಿಳೆಯರ ವಿಷಯದಲ್ಲಿ ಅವರು ಸರ್ವಥಾ ಹೊಗಳಲ್ಪಡಬಾರದು.

ಅದನ್ನು ಕೇಳಿದ ಪತಿ ಹೀಗೆ ಹಾಡಿದನು:

"ಸ್ತ್ರೀಯರಲ್ಲಿಯೂ ಶೃಂಗಾರದಲ್ಲಿಯೂ ನನಗೆ ವಿರಕ್ತಿ ಮೂಡಿದೆ.
ಸೂರತ್ತುನ್ನಹ್ಲ್ ಮತ್ತು ಸಪ್ತದೀರ್ಘಗಳಲ್ಲಿ ಅವತೀರ್ಣಗೊಂಡವು.
ನಾನು ಸಂಪೂರ್ಣ ಭಯಭೀತನಾಗಿದ್ದೇನೆ.
ದಿವ್ಯಗ್ರಂಥದ ಬೆದರಿಕೆಯು ಭಯಾನಕವಾಗಿದೆ."

ಇದನ್ನು ಕೇಳಿದ ನ್ಯಾಯಾಧೀಶ ಕಅಬ್ ಹೇಳಿದರು, "ನಿಮಗೆ ನಿಮ್ಮ ಪತ್ನಿಯೊಂ ಕೆಲವು ಕರ್ತವ್ಯಗಳಿವೆ. ನಾಲ್ಕು ವಿಷಯಗಳಲ್ಲಿ. ಆಕೆಯ ಹಕ್ಕಿನ ಬಗ್ಗೆ ಬುದ್ಧಿವಂತರೆಲ್ಲರಿ ತಿಳಿದಿದೆ. ಆದ್ದರಿಂದ ಅವುಗಳನ್ನು ನೀಡಿರಿ. ಆರೋಪ ಮುಕ್ತರಾಗಿರಿ."

ಮಹಿಳೆಯು ಪುರುಷನಿಗಾಗಿ ಶುದ್ಧಳಾಗಿ ಸಿಂಗರಿಸಿಕೊಳ್ಳುವಂತೆಯೇ ಪುರುಷ ಅಂತಹ ವಿಷಯಗಳ ಬಗ್ಗೆ ಗಮನ ಹರಿಸಬೇಕೆಂದು ಇಸ್ಲಾಮ್ ಆದೇಶಿಸಿದೆ. ಪ್ರವಾದಿಯವರು ಹೇಳಿದ್ದಾರೆ, "ನೀವು ಬಟ್ಟೆ ಬರೆ ತೊಳೆದು ಶುದ್ಧಗೊಳಿಸಿ, ಕೂದಲು ಕತ್ತರಿಸಿ, ಬಾ ಶುಚಿಗೊಳಿಸಿ, ಯಾವಾಗಲೂ ಸೌಂದರ್ಯ ಮತ್ತು ಶುಚಿತ್ವವನ್ನು ಕಾಪಾಡಬೇಕು. ಇಸ್ರಾಈಲ ಈ ಎಲ್ಲಾ ಕಾರ್ಯಗಳನ್ನು ತೊರೆದಾಗ ಅವರ ಮಹಿಳೆಯರು ವೇಶ್ಯೆಯರಾದರು."

ಇಬ್ನು ಅಬ್ಬಾಸ್ ಹೇಳಿದ್ದಾರೆ: "ಪತ್ನಿಯು ನನಗಾಗಿ ಸುಂದರಿಯಾಗುವಂತೆಯೇ ನಾ ಆಕೆಗಾಗಿಯೂ ಸಿಂಗರಿಸಿಕೊಳ್ಳುತ್ತೇನೆ."

(ಉದ್ಧರಣೆ: ಅಲ್ ಇಸ್ಲಾಮ್ ವಕದಾಯಲ್ ಮಲಅಕತಿಲ್ ಮುಆಸ್ಸಿರಃ, ಬಹ್ಯುಲ್ ಖೌ

ಪುಟ : !

ಆಹಾರ, ವಸ್ತ್ರ, ವಸತಿ, ಗುಣನಡತೆ, ಧೋರಣೆ ಇತ್ಯಾದಿಗಳಂತೆಯೇ ಲೈಂ ಅಭಿರುಚಿಯೂ ಸೇರಿ ಪ್ರತಿಯೊಂದು ವಿಷಯದಲ್ಲಿಯೂ ಮಹಿಳೆಯ ಹಕ್ಕ

ಗೀಕರಿಸಬೇಕಾದುದು ಪುರುಷನ ಕರ್ತವ್ಯವಾಗಿದೆಯೆಂದು ಇದರಿಂದ ನಮಗೆ ವ್ಯಕ್ತವಾಗುತ್ತದೆ. ರ್ಾತ್, ಪತ್ನಿಯೆಂಬ ನೆಲೆಯಲ್ಲಿ ಮಹಿಳೆಯ ಮಾನವೀಯ ಹಕ್ಕು ಮತ್ತು ಭಾವನೆಗಳನ್ನು ರ್ಕ್ಷಿಸಬಾರದು. ಪತ್ನಿಯೊಂದಿಗಿನ ಸಹಬಾಳ್ವೆ ಮತ್ತು ಧೋರಣೆಯನ್ನು ಇಸ್ಲಾಮ್ ರ್ಮಿಕ ವಿಶ್ವಾಸ ಮತ್ತು ಪರಲೋಕ ವಿಜಯದೊಂದಿಗೆ ಜೋಡಿಸಿದೆ. ಪತ್ನಿಯೊಂದಿಗೆ ್ಯತ್ತಮವಾಗಿ ವರ್ತಿಸುವವರೇ ಮಾನವರಲ್ಲಿ ಅತ್ಯುತ್ತಮರೆಂಬ ಪ್ರವಾದಿ ನುಡಿಯ ರಾಂಶವೂ ಅದುವೇ ಆಗಿದೆ.

ತ್ನಿಯ ಕರ್ತವ್ಯಗಳು

ದಾಂಪತ್ಯ ಸಂಬಂಧವು ಧಾರ್ಮಿಕವಾಗಿರಬೇಕೆಂದು ಆದೇಶಿಸುವ ಇಸ್ಲಾಮ್, ಸ್ತ್ರೀಯರ ರ್ಗ-ನರಕ ನಿರ್ಣಯದಲ್ಲಿ ಪತಿಯೊಂದಿಗಿನ ಕರ್ತವ್ಯ ನಿರ್ವಹಣೆಗೆ ನಿರ್ಣಾಯಕ ಸ್ಥಾನವನ್ನು ಿದೆ. ಪ್ರವಾದಿಯವರು(ಸ) ಹುಸೈನ್ ಬಿನ್ ಮುಹ್ಸಿಯವರ ಸೋದರತ್ತೆಯೊಡನೆ ಳಿದರು: "ಪತಿಯು ನಿನ್ನ ಸ್ವರ್ಗ ಮತ್ತು ನರಕವಾಗಿದ್ದಾನೆ."

(ಅಹ್ಮದ್)

ಅವರು(ಸ) ಹೇಳಿದ್ದಾರೆ: "ಪತಿಯ ಪ್ರೀತಿಗೆ ಪಾತ್ರಳಾಗಿ ರಾತ್ರಿಯನ್ನು ಕಳೆಯುವವಳು ರ್ಗದಲ್ಲಿ ಪ್ರವೇಶಿಸುತ್ತಾಳೆ. ಪತಿಯ ಅಸಂತೃಪ್ತಿಗೆ ಪಾತ್ರಳಾಗಿ ಮಲಗುವಾಕೆಯನ್ನು ವಚರರು ಶಪಿಸುತ್ತಾರೆ."

(ಇಬ್ನುಮಾಜಃ, ಮುಸ್ಲಿಮ್)

"ಜೀವನ ಸಂಗಾತಿಯ ಸಂತೃಪ್ತಿಗೆ ಪಾತ್ರಳಾಗಿ ಮರಣ ಹೊಂದುವ ಮಹಿಳೆಯು ರ್ಗದ ಹಕ್ಕುದಾರಳಾಗುತ್ತಾಳೆ."

(ಹಾಕಿಮ್, ಇಬ್ನುಮಾಜಃ, ತಿರ್ಮಿದಿ)

"ಮೂರು ಮಂದಿಯನ್ನು ನರಕವು ಸ್ಪರ್ಶಿಸುವುದಿಲ್ಲ. ಪತಿಯನ್ನು ಅನುಸರಿಸುವ ಪತ್ನಿ, ದೆ-ತಾಯಿಗಳಿಗೆ ಒಳಿತು ಮಾಡುವ ಮಗ, ಅಲ್ಲಾಹ್ ಮತ್ತು ಮಾಲಿಕನೊಂದಿಗಿನ ್ವ್ಯಗಳನ್ನು ನಿರ್ವಹಿಸುವ ಸೇವಕ."

"ಮಹಿಳೆಯು ಐದು ಹೊತ್ತಿನ ನಮಾಝ್ ನಿರ್ವಹಿಸಿ, ರಮಝಾನಿನ ಉಪವಾಸ ವ್ರತ ಿರಿಸಿ, ತನ್ನ ಗುಪ್ತಾಂಗವನ್ನು ಕಾಪಾಡಿ, ಪತಿಯನ್ನು ಅನುಸರಿಸುತ್ತಲಿದ್ದರೆ ಸ್ವರ್ಗದಲ್ಲಿ ವೇಶಿಸುವಳು."

(ಅಹ್ಮದ್, ತಬ್ರಾನಿ)

ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡಿದ ಒಂದು ಪ್ರವಾದಿ ವಚನದಲ್ಲಿ ಗಿದೆ: "ಅಂತಹ ಮಹಿಳೆಯೊಡನೆ ಇಷ್ಟವಿರುವ ಬಾಗಿಲ ಮೂಲಕ ಸ್ವರ್ಗ ಪ್ರವೇಶಿಸುವಂತೆ ಳಲಾಗುವುದು."

(ತಬ್ರಾನಿ)

ಉಪವಾಸವು ಅಲ್ಲಾಹನಿಗಿರುವ ಆರಾಧನೆಯಾಗಿದೆ. ಆದರೆ ಪತಿಯ ಅನುಮತಿಯಿಲ್ಲದೆ ್ನಿಯು ಐಚ್ಛಿಕ ಉಪವಾಸ ವ್ರತ ಆಚರಿಸಬಾರದೆಂದು ಧರ್ಮವು ಆದೇಶಿಸುತ್ತದೆ.

ಪ್ರವಾದಿ(ಸ) ಹೇಳಿದ್ದಾರೆ, "ಪತಿಯ ಅನುಮತಿಯಿಲ್ಲದೆ ಆತನ ಉಪಸ್ಥಿತಿಯಲ್ಲಿ ಮಹಿಳೆ ಉಪವಾಸ ಆಚರಿಸಬಾರದು, ರಮಝಾನಿನ ಹೊರತು."

(ಬುಖಾರಿ, ಮುಸ್ಲಿ

ಪತ್ನಿಯರು ಮಾಡುವ ಪತಿಯ ಸೇವೆಯು ಪುರುಷರು ನಿರ್ವಹಿಸುವ ಅನೇಕ ಆರಾಧ ಕರ್ಮ ಮತ್ತು ಧಾರ್ಮಿಕ ಕರ್ತವ್ಯಗಳಿಗೆ ಸಮಾನವಾಗಿದೆ. ಹೀಗೆ, ಮಹಿಳೆಯು ತನ್ನ ಪತಿ ಮಾಡುವ ಕೃತ್ಯಗಳನ್ನು ದಾಸನು ಅಲ್ಲಾಹನಿಗಾಗಿ ಮಾಡುವ ಕರ್ಮಗಳಿಗೆ ಸಮಾನವೆ ಸಾರಲಾಗಿದೆ. ಒಮ್ಮೆ ಯಝೀದುಲ್ ಅನ್ಸಾರಿಯ ಪುತ್ರಿ ಅಸ್ಮಾ(ರ) ಪ್ರವಾದಿಯವರ ಸನ್ನಿಧಿಯಲ್ಲಿ ಬಂದು ಹೇಳಿದರು, "ಅಲ್ಲಾಹನ ಸಂದೇಶವಾಹಕರೇ, ನಾನು ಮಹಿಳೆ ಪ್ರತಿನಿಧಿಯಾಗಿ ಬಂದಿದ್ದೇನೆ. ಅಲ್ಲಾಹನು ನಿಮ್ಮನ್ನು ಮಹಿಳೆಯರು ಮತ್ತು ಪುರುಷರಿ ಸತ್ಯದೊಂದಿಗೆ ನೇಮಿಸಿದ್ದಾನಲ್ಲವೇ. ಆದ್ದರಿಂದ ನಾವು ನಿಮ್ಮಲ್ಲಿ ವಿಶ್ವಾಸವಿರಿಸಿದ ನಿಮ್ಮನ್ನು ಅನುಸರಿಸಿ ಬಾಳಿದೆವು. ನಮ್ಮ ಸ್ತ್ರೀ ಸಮೂಹವು ಬಂಧಿಯಾಗಿದೆ. ನಿ ಮನೆಗಳಲ್ಲಿ ಬಾಳುತ್ತೇವೆ. ನಿಮ್ಮ ಮಕ್ಕಳ ಗರ್ಭ ಧರಿಸುತ್ತೇವೆ. ಪುರುಷರಾದ ನಿ ಜುಮ್ಆ ಮತ್ತು ಸಾಮೂಹಿಕ ನಮಾಝ್‌ಗಳಲ್ಲಿ ಭಾಗವಹಿಸುತ್ತೀರಿ. ರೋಗಿಗಳ ಸಂದರ್ಶಿಸುತ್ತೀರಿ. ಜನಾಝಾಗಳಲ್ಲಿ ಭಾಗವಹಿಸುತ್ತೀರಿ. ಎಲ್ಲಕ್ಕಿಂತ ಶ್ರೇಷ್ಠವಾಗಿರುವ ದ ಮಾರ್ಗದ ಜಿಹಾದ್‌ನಲ್ಲಿ ಭಾಗವಹಿಸುತ್ತೀರಿ, ಹೀಗೆ ನೀವು ಅನುಗ್ರಹೀತರಾಗಿರುವಿರಿ. ಆ ನೀವು ಯಾರಾದರೂ ಹಜ್ಜ್, ಉಮ್ರಾ ಅಥವಾ ಯುದ್ಧಕ್ಕೆ ಹೊರಟರೆ ನಾವು ನಿಮ ನಿಮ್ಮ ಮಕ್ಕಳನ್ನು ಸಂರಕ್ಷಿಸುತ್ತೇವೆ. ಬಟ್ಟೆ ಒಗೆಯುತ್ತೇವೆ. ಮಕ್ಕಳನ್ನು ಬೆಳೆಸುತ್ತೆ ಆದ್ದರಿಂದ ನಮಗೆ ನಿಮ್ಮ ಈ ಸತ್ಕರ್ಮ ಮತ್ತು ಪುಣ್ಯಗಳಲ್ಲಿ ಪಾಲಿಲ್ಲವೇ?"

ಆಗ ಪ್ರವಾದಿಯವರು(ಸ) ತಮ್ಮ ಸಂಗಾತಿಗಳತ್ತ ತಿರುಗಿ ಕೇಳಿದರು, "ತನ್ನ ಧಾಮಿ ವಿಷಯವನ್ನು ಇಷ್ಟೊಂದು ಉತ್ತಮವಾಗಿ ಯಾರಾದರೂ ವಿವರಿಸಿರುವುದನ್ನು ನಿ ಕೇಳಿದ್ದೀರಾ?" ಅವರು ಹೇಳಿದರು, "ಇಂತಹ ವಿಷಯಗಳಲ್ಲಿ ಓರ್ವ ಮಹಿಳೆ ಇಷ್ಟೊಂದು ಸ್ಥೈರ್ಯ ತೋರಿಸಬಹುದೆಂದು ನಾವು ಭಾವಿಸಿರಲಿಲ್ಲ."

ಪ್ರವಾದಿಯವರು(ಸ) ಆ ಮಹಿಳೆಯತ್ತ ತಿರುಗಿ ಹೀಗೆಂದರು, "ಪತಿಯ ಹಕ್ಕುಗಳ ಗೌರವದಿಂದ ವರ್ತಿಸಿ ಆತನನ್ನು ಅನುಸರಿಸುವುದು ಅವೆಲ್ಲವುಗಳಿಗೆ ಪರ್ಯಾಯವಾಗುವು ಆದರೆ ಹಾಗೆ ಮಾಡುವವರು ನಿಮ್ಮಲ್ಲಿ ಬಹಳ ವಿರಳರಾಗಿದ್ದಾರೆ. ಇತರ ಸ್ತ್ರೀಯರಿಗೂ ವಿಷಯವನ್ನು ತಿಳಿಸಿ ನೀವು ನಮಗೆ ನೆರವಾಗಬೇಕು."

(ಬಝ್ಝಾರ್, ತಬ

ಮತ್ತೊಮ್ಮೆ ಪ್ರವಾದಿಯವರು(ಸ) ಹೇಳಿದರು, "ಪತಿಯೊಡನೆ ಉತ್ತಮವಾಗಿ ವರ್ತಿಸು ಪತ್ನಿಯ ಜಿಹಾದ್ ಆಗಿದೆ."

ಶ್ರೇಷ್ಠ ಮಹಿಳೆಯು ಯಾರೆಂದು ಪ್ರಶ್ನಿಸಿದಾಗ ಅವರು ಹೀಗೆಂದರು: "ಪತಿ ಆಜ್ಞಾಪಿಸಿದರೆ ಅನುಸರಿಸುವ ಮತ್ತು ನೋಡಿದರೆ ಕುತೂಹಲ ಮೂಡಿಸುವವಳು."

ಅಲ್ಲಾಹನು ತಿಳಿಸಿದ್ದಾನೆ:

"ಉತ್ತಮ ಮಹಿಳೆಯರು ಅನುಸರಣಾ ಶೀಲರು ಮತ್ತು ಗೋಪ್ಯಗಳನ್ನು ಡುವವರಾಗಿದ್ದಾರೆ."

(ಪವಿತ್ರ ಕುರ್‌ಆನ್, 4:34)

ಪತ್ನಿಗೆ ಭೂಮಿಯಲ್ಲಿ ಪತಿಯೊಂದಿಗೆ ಹೆಚ್ಚಿನ ಕರ್ತವ್ಯಗಳಿವೆ. ಆಕೆಯು ಆತನನ್ನೇ ಿಕ ಗೌರವಿಸಬೇಕು ಮತ್ತು ಅನುಸರಿಸಬೇಕು. ಪ್ರವಾದಿ(ಸ) ಹೇಳಿದ್ದಾರೆ, "ಓರ್ವ ವನು ಇನ್ನೋರ್ವನಿಗೆ ಸಾಷ್ಟಾಂಗವೆರಗಬೇಕೆಂದು ಆಜ್ಞಾಪಿಸಲಾಗಿರುತ್ತಿದ್ದರೆ ಮಹಿಳೆಯೊಡನೆ ಪತಿಗೆ ಸಾಷ್ಟಾಂಗವೆರಗುವಂತೆ ಆಜ್ಞಾಪಿಸುತ್ತಿದ್ದೆ."

(ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ)

ಆಯಿಶಾರಿಂದ(ರ) ವರದಿ: ಮಹಿಳೆಯರಿಗೆ ಯಾರೊಂದಿಗೆ ಹೆಚ್ಚಿನ ೆಗಾರಿಕೆಯಿದೆಯೆಂದು ಕೇಳಿದಾಗ ಅವರು "ತನ್ನ ಪತಿಯೊಡನೆ" ಎಂದು ಹೇಳಿದರು. ಕೇಳಿದೆ: ಪುರುಷನಿಗೆ ಯಾರೊಡನೆ ಅತ್ಯಧಿಕ ಹೊಣೆಗಾರಿಕೆಯಿದೆ?" ಪ್ರವಾದಿ(ಸ) ರಿಸಿದರು: "ತನ್ನ ತಾಯಿಯೊಡನೆ."

(ಹಾಕಿಮ್)

ಪತಿಯೊಂದಿಗಿನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವವರೇ ಲೆಯರು. ಪ್ರವಾದಿ(ಸ) ಹೇಳಿದರು: "ಸುಶೀಲೆಯರ ವೈಶಿಷ್ಟ್ಯಗಳು ಹೀಗಿವೆ: ಆಕೆಯನ್ನು ನೋಡಿದರೆ ನಿನ್ನನ್ನು ಆಕೆಯು ಸಂತುಷ್ಟಗೊಳಿಸುತ್ತಾಳೆ. ಆದೇಶಿಸಿದರೆ ಸುತ್ತಾಳೆ. ನೀನು ಹೊರಹೋದರೆ ನಿನ್ನ ಸೊತ್ತು ಮತ್ತು ಆಕೆಯ ದೇಹವನ್ನು ಡಿಕೊಳ್ಳುತ್ತಾಳೆ."

ತದ್ವಿರುದ್ಧ ಧೋರಣೆಯನ್ನು ಕೈಗೊಳ್ಳುವವರು ದುಶ್ಶೀಲೆಯರಾಗಿದ್ದಾರೆ. ಅಲ್ಲಾಹನೊಡನೆ ಜ್ಞತೆ ತೋರುವಂತೆ ಪತಿಯೊಡನೆ ಕೃತಘ್ನತೆ ತೋರಿಸುವುದೂ ಅಪರಾಧವಾಗಿದೆ. ದಿಯವರು(ಸ) ಹೇಳಿದ್ದಾರೆ: "ನಾನು ನರಕವನ್ನು ನೋಡಿದೆ. ಅದರಲ್ಲಿ ಮಹಿಳೆಯರೇ ವಿದ್ದರು. ಪತಿಗೆ ಕೃತಘ್ನತೆ ತೋರಿಸಿದವರು. ನೀನು ಅವರೊಂದಿಗೆ ಹೆಚ್ಚು ಕಾಲ ಮವಾಗಿಯೇ ವರ್ತಿಸಿರುವೆಯೆಂದು ಭಾವಿಸು, ತರುವಾಯ ನಿನ್ನಿಂದ ಏನಾದರೊಂದು ಪ ಸಂಭವಿಸಿದರೆ ಆ ಕೂಡಲೇ ಆಕೆ ಹೇಳುತ್ತಾಳೆ: ನಿಮ್ಮಿಂದ ನನಗೆ ಯಾವ ೋಜನವೂ ದೊರೆತಿಲ್ಲ."

(ಬುಖಾರಿ, ಮುಸ್ಲಿಮ್, ಅಹ್ಮದ್)

ಪ್ರಿಯತಮನ ಪ್ರೀತಿಯನ್ನು ಬಯಸುವಾಕೆಯು ಸ್ವರ್ಗ ಪಡೆಯುವಳೆಂದು ದಿಯವರು(ಸ) ಕಲಿಸಿದ್ದಾರೆ. "ನಿಮ್ಮ ಮಹಿಳೆಯರು ಸ್ವರ್ಗದ ಹಕ್ಕುದಾರರಾಗಿದ್ದಾರೆ. ು ಅಧಿಕ ಸಂತಾನ ಸೌಭಾಗ್ಯವಿರುವವರೂ ಪ್ರೀತಿಯಿರುವವರೂ ಆಗಿದ್ದಾರೆ. ಆಕೆಯಿಂದ ದರೂ ಅಹಿತಕರ ಕಾರ್ಯ ನಡೆದರೆ ಅಥವಾ ಆಕೆಯು ತೊಂದರೆಗೆ ಸಿಲುಕಿದರೆ ಪತಿಯ

ಬಳಿಬಂದು ತನ್ನ ಕೈಯನ್ನು ಆತನ ಕೈಯಲ್ಲಿರಿಸಿ ಹೀಗೆ ಹೇಳುತ್ತಾಳೆ: ನೀವು ನ ಸಂತೃಪ್ತನಾಗದೆ ನಾನು ನಿದ್ರಿಸುವುದಿಲ್ಲ." (ಅತ್ತರ್ಗೀಬ್ ವತ್ತರ್ಹೀಬ್, ಮತಾಲಿಬುಲ್ ಆ

ಮಹಿಳೆಯು ದೈಹಿಕ ಸಂಬಂಧಕ್ಕಾಗಿ ತನ್ನನ್ನು ಸಮರ್ಪಿಸುವುದನ್ನೂ ಧಾ ಕರ್ತವ್ಯವೆಂದು ನಿರ್ಣಯಿಸಲಾಗಿದೆ. ಇಬ್ನು ಉಮರ್‌ರಿಂದ(ರ) ವರದಿ: "ತನ್ನ ದೇಹ ಪತಿಗೆ ತಡೆಯದಿರುವುದು ಪತ್ನಿಗೆ ಪತಿಯೊಂದಿಗಿರುವ ಕರ್ತವ್ಯವಾಗಿದೆ. ಅದೊಂದು ಒಂಟೆಯ ಪಲ್ಲಕಿಯಲ್ಲಾಗಿದ್ದರೂ ಸರಿಯೆ. ಕಡ್ಡಾಯ ಉಪವಾಸದ ಹೊರತು ಅನುಮತಿಯಿಲ್ಲದೆ ಇತರ ಉಪವಾಸಗಳನ್ನು ಆಚರಿಸದಿರುವುದೂ ಆಕೆಯ ಹೊಣೆಯ ಆಚರಿಸಿದರೆ ಆಕೆ ಅಪರಾಧಿಯಾಗುತ್ತಾಳೆ. ಅದು ಸಿಂಧುವಾಗಲಾರದು. ಪತಿಯ ಅನುಮತಿಯಿ ಆಕೆಯು ಆತನ ಮನೆಯಿಂದ ಹೊರ ಹೋಗಬಾರದು. ಒಂದು ವೇಳೆ ಹೇಳದೆ ಹೋ ಆಕೆಯು ಮರಳುವ ಅಥವಾ ಪಶ್ಚಾತ್ತಾಪ ಪಡುವ ತನಕ ಅಲ್ಲಾಹನೂ ಕೋಪದ ದೇವಚ ಆಕೆಯನ್ನು ಶಪಿಸುತ್ತಲಿರುವರು. ಆತ ಓರ್ವ ಅಕ್ರಮಿಯಾಗಿದ್ದರೂ ಸರಿ."

(ಅಬೂದಾವೂದ್, ೭

ಹೀಗೆ ಇಸ್ಲಾಮ್ ಪತಿ ಪತ್ನಿಯರ ಪರಸ್ಪರ ಕರ್ತವ್ಯ ನಿರ್ವಹಣೆಯನ್ನು ಪ್ರತಿಫಲ ಪುಣ್ಯ ಮತ್ತು ಅವುಗಳ ಉಲ್ಲಂಘನೆಯನ್ನು ಶಿಕ್ಷಾರ್ಹ ಪಾಪವೆಂದು ನಿರ್ಣಯಿಸಿದೆ. ಸ್ವ ನರಕ ನಿರ್ಣಯದಲ್ಲಿ ದಾಂಪತ್ಯದ ಶಿಷ್ಟಾಚಾರಗಳು ಇತರ ವಿಷಯಗಳಂತೆಯೇ ನಿರ್ಣಾ ಪಾತ್ರವಹಿಸುತ್ತದೆ.

◆◆

ೆರೆಕರೆಯವರು, ಆಪ್ತ ಸಂಬಂಧಿಕರು, ಅತಿಥಿಗಳು

ಯಾವನೇ ವ್ಯಕ್ತಿಯ ಬಗ್ಗೆ ನೆರೆಕರೆಯವರಿಗೆ ಚೆನ್ನಾಗಿ ತಿಳಿದಿರುತ್ತದೆ. ಅವರು ನಮ್ಮ ಒವರ್ತಿಗಳೂ ಒಡನಾಡಿಗಳೂ ಆಗಿರುತ್ತಾರೆ. ಹೆಚ್ಚಿನವರಿಗೆ ದೂರದ ಸಂಬಂಧಿಕರಿಗಿಂತ ೆರೆಯವರೊಂದಿಗೆ ಹೆಚ್ಚು ಮಮತೆಯಿರುತ್ತದೆ. ಅವರು ಸುಖದುಃಖಗಳಲ್ಲಿಯೂ ಭಾಗಿಗಳಾಗುತ್ತಾರೆ. ನೆರೆಕರೆಯವರೊಂದಿಗಿನ ಆಪ್ತ ಸಂಬಂಧಕ್ಕೆ ಇಸ್ಲಾಮ್ ವಿಶೇಷ ತ್ವ ನೀಡಿದೆ. ಪವಿತ್ರ ಕುರ್‌ಆನ್ ಈ ವಿಷಯವನ್ನು ಏಕದೇವ ವಿಶ್ವಾಸ(ತೌಹೀದ್)ದೊಂದಿಗೆ ೀಡಿಸಿ ಹೇಳಿದೆ.

"ನೀವೆಲ್ಲರೂ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನೊಂದಿಗೆ ಯಾರನ್ನೂ ಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಸಂಬಂಧಿಕ ಂದಿಗೂ ಅನಾಥರೊಂದಿಗೂ ನಿರ್ಗತಿಕರೊಂದಿಗೂ ಆಪ್ತರಾದ ನೆರೆಹೊರೆಯವರೊಂದಿಗೂ ರಿಚಿತ ನೆರೆಹೊರೆಯವರೊಂದಿಗೂ ಸಂಗಾತಿಗಳೊಂದಿಗೂ ಪ್ರಯಾಣಿಕರೊಂದಿಗೂ ನಿಮ್ಮ ನದಲ್ಲಿರುವ ದಾಸದಾಸಿಯರೊಂದಿಗೂ ಉತ್ತಮ ರೀತಿಯಿಂದ ವರ್ತಿಸಿರಿ. ದುರಹಂಕಾರ ಂದಿರುವ ಗರ್ವಿಷ್ಠನನ್ನು ಆತ್ಮ ಸ್ತುತಿಗೈಯುವವನನ್ನೂ ಅಲ್ಲಾಹನು ಮೆಚ್ಚುವುದಿಲ್ಲ."

(ಪವಿತ್ರ ಕುರ್‌ಆನ್, 4:36)

ನೆರೆಕರೆಯವರೊಂದಿಗೆ ಇರಿಸಬೇಕಾದ ಸಂಬಂಧದ ಬಗ್ಗೆ ಪ್ರವಾದಿ(ಸ) ಹೀಗೆ ದ್ದಾರೆ, "ನೆರೆಯಾತನು ವಾರೀಸುದಾರನಾಗಿ ಬಿಡಬಹುದೆಂದು ಭಾವಿಸುವಷ್ಟರ ಮಟ್ಟಿಗೆ ರೆಯವರ ಕುರಿತು ಜಿಬ್‌ರೀಲ್ ನನಗೆ ಉಪದೇಶ ನೀಡುತ್ತಿದ್ದರು." (ಬುಖಾರಿ, ಮುಸ್ಲಿಮ್)

ಪ್ರವಾದಿಯವರು(ಸ) ವಿದಾಯ ಹಜ್ಜ್ ಭಾಷಣದಲ್ಲಿಯೂ ನೆರೆಕರೆಯವರೊಂದಿಗಿನ ವ್ಯದ ಬಗ್ಗೆ ಒತ್ತಿ ಹೇಳಿದ್ದರು. ಅದನ್ನು ಅವರು ಸತ್ಯವಿಶ್ವಾಸದ ಜತೆ ಸೇರಿಸಿದ್ದರು. ದಿ(ಸ) ಹೇಳಿದರು, "ಯಾರಾದರೂ ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿರಿಸಿದ್ದರೆ ಯಾತನನ್ನು ಗೌರವಿಸಲಿ." (ಬುಖಾರಿ, ಮುಸ್ಲಿಮ್)

ಇನ್ನೊಂದು ವರದಿಯಲ್ಲಿ ಅವರು ಹೀಗೆ ಹೇಳಿದ್ದಾರೆ, "ಯಾರಾದರೂ ಅಲ್ಲಾಹ ಯೂ ಅಂತಿಮ ದಿನದಲ್ಲಿಯೂ ವಿಶ್ವಾಸವಿರಿಸಿದ್ದರೆ ಆತನು ತನ್ನ ನೆರೆಯಾತನನ್ನು ಸಬಾರದು." (ಬುಖಾರಿ)

ತನಗಾಗಿ ಬಯಸುವುದನ್ನು ನೆರೆಯಾತನಿಗಾಗಿಯೂ ಬಯಸಬೇಕೆಂದು ಇಸ್ಲಾ ಆಜ್ಞಾಪಿಸಿದೆ. ಪ್ರವಾದಿ(ಸ) ಹೇಳಿದ್ದಾರೆ, "ಒಬ್ಬನು ತನಗಾಗಿ ಬಯಸುವುದನ್ನು ಸಹೋದರನಿಗಾಗಿಯೂ ಬಯಸುವ ತನಕ ಸತ್ಯವಿಶ್ವಾಸಿಯಾಗುವುದಿಲ್ಲ."

(ಬುಖಾರಿ, ಮುಸ್ಲಿ

ಇನ್ನೊಂದು ವರದಿಯಲ್ಲಿ ಅವರು ಅಲ್ಲಾಹನ ಆಣೆ ಹಾಕಿ ಹೀಗೆ ಹೇಳಿದ್ದ "ತನಗಾಗಿ ಬಯಸುವುದನ್ನು ತನ್ನ ನೆರೆಯಾತನಿಗೂ ಬಯಸದಿರುವ ತನಕ ಯಾವ ದಾಸನೂ ಸತ್ಯವಿಶ್ವಾಸಿಯಾಗುವುದಿಲ್ಲ."

(ಮುಸ್ಲಿ

ಪ್ರವಾದಿಯವರು(ಸ) ಅಬೂದರ್‍ರೊಡನೆ(ರ) ಹೇಳಿದರು, "ನೀವು ಸ ಮಾಡಿದರೆ ಅದರಲ್ಲಿ ಸ್ವಲ್ಪ ಹೆಚ್ಚು ನೀರು ಸೇರಿಸಿಯಾದರೂ ನೆರೆಯಾತನನ್ನೂ ಅದ ಭಾಗಿಗೊಳಿಸಿರಿ."

(ಮುಸ್ಲಿ

ಅವರು(ಸ) ಹೀಗೆ ಹೇಳಿದ್ದಾರೆ, "ನೆರೆಯಾತನು ಹಸಿದಿರುವಾಗ ಹೊಟ್ಟೆ ತುಂಬಿಸುವ ಸತ್ಯವಿಶ್ವಾಸಿಯಲ್ಲ."

(ತ

ಅಬೂಹುರೈರಾರಿಂದ(ರ) ವರದಿ: ಪ್ರವಾದಿ(ಸ) ಹೇಳಿದರು, "ಅಲ್ಲಾಹನಾಣೆ! ಆ ಸತ್ಯವಿಶ್ವಾಸಿಯಾಗುವುದಿಲ್ಲ. ಅಲ್ಲಾಹನಾಣೆ! ಆತನು ಸತ್ಯವಿಶ್ವಾಸಿಯಾಗುವುದಿಲ್ಲ. ಅಲ್ಲಾಹ ಆತನು ಸತ್ಯವಿಶ್ವಾಸಿಯಾಗುವುದಿಲ್ಲ!"

"ಅಲ್ಲಾಹನ ಪ್ರವಾದಿಗಳೇ, ಯಾರು?" ಎಂದು ಪ್ರವಾದಿಯವರೊಡನೆ(ಸ) ಕೇಳಿ "ಯಾರ ಕಿರುಕುಳದಿಂದ ನೆರೆಯಾತನು ನಿರ್ಭೀತನಾಗಿರುವುದಿಲ್ಲವೋ ಆತ." ಪ್ರವಾ ಉತ್ತರಿಸಿದರು.

(ಬುಖಾರಿ, ಮುಸ್ಲಿ

ಇನ್ನೊಂದು ವರದಿಯಂತೆ, "ಯಾರ ಕಿರುಕುಳಗಳ ಬಗ್ಗೆ ನೆರೆಯಾ ನಿರ್ಭೀತನಾಗಿರುವುದಿಲ್ಲವೋ ಆತನು ಸ್ವರ್ಗದಲ್ಲಿ ಪ್ರವೇಶಿಸಲಾರನು."

(ಮುಸ್ಲಿ

ಪ್ರವಾದಿ(ಸ) ಹೇಳಿದ್ದಾರೆ, "ತನ್ನ ಮಿತ್ರನೊಡನೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುವ ಅಲ್ಲಾಹನ ಬಳಿ ಅತ್ಯುತ್ತಮ ಮಿತ್ರನಾಗಿರುತ್ತಾನೆ."

(ತಿ

ನೆರೆಕರೆಯವರೊಂದಿಗೆ ಉದಾರವಾಗಿ ವರ್ತಿಸಬೇಕು. ಅವರ ಉಪಟಳವನ್ನು ಸಹಿಸ ಮತ್ತು ಲೋಪದೋಷಗಳನ್ನು ಕ್ಷಮಿಸಬೇಕೆಂದು ಇಸ್ಲಾಮ್ ತಿಳಿಸುತ್ತದೆ. ನೆರೆಕರೆ ರೊಂದಿಗಿನ ಸಂಬಂಧವನ್ನು ಸತ್ಯವಿಶ್ವಾಸದೊಂದಿಗೆ ಜೋಡಿಸಿ ಅದನ್ನು ಸುದೃಢಗೊಳಿಸು ಆದೇಶಿಸಿದೆ.

ಆಪ್ತ ಸಂಬಂಧಿಕರು

ಹತ್ತಿರದ ಸಂಬಂಧಿಕರೊಂದಿಗಿನ ಧೋರಣೆಗೂ ಇಸ್ಲಾಮ್ ವಿಶೇಷ ಗಮನ ೀಡುತ್ತದೆ. ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿ ಅದರ ಮಹತ್ವವನ್ನು ಎತ್ತಿ ಹೇಳಲಾಗಿದೆ.

"ಆದರೆ ಅಲ್ಲಾಹನ ಗ್ರಂಥದ ಪ್ರಕಾರ ರಕ್ತಸಂಬಂಧಿಕರು ಪರಸ್ಪರ ಹೆಚ್ಚು ತ್ತಿರದವರಾಗಿದ್ದಾರೆ. ಅಲ್ಲಾಹನು ಎಲ್ಲ ವಿಷಯಗಳನ್ನೂ ಚೆನ್ನಾಗಿ ಬಲ್ಲವನಾಗಿದ್ದಾನೆ."

(ಪವಿತ್ರ ಕುರ್‌ಆನ್, 8:75)

"ನೀವು ಯಾರ ಹೆಸರೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಕೇಳುತ್ತೀರೋ ಆ ಲ್ಲಾಹನನ್ನು ಭಯಪಡಿರಿ. ಕುಟುಂಬ ಸಂಬಂಧಗಳನ್ನು ಕೆಡಿಸಬೇಡಿರಿ. ಅಲ್ಲಾಹನು ನಿಮ್ಮ ೀಲೆ ಮೇಲ್ನೋಟವಿರಿಸಿಕೊಂಡಿರುವನು ಎಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ."

(ಪವಿತ್ರ ಕುರ್‌ಆನ್, 4:1)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಕುಟುಂಬ ಸಂಬಂಧವು ದೇವ ಸಿಂಹಾಸನದೊಂದಿಗೆ ಂಬಂಧ ಹೊಂದಿದೆ. ಅದು ಹೇಳುತ್ತದೆ, ನನ್ನನ್ನು ಸೇರಿಸಿದವನೊಂದಿಗೆ ಅಲ್ಲಾಹನು ಂಬಂಧ ಸ್ಥಾಪಿಸುತ್ತಾನೆ. ನನ್ನನ್ನು ಕಡಿದುಕೊಳ್ಳುವವನೊಂದಿಗೆ ಅಲ್ಲಾಹನೂ ಸಂಬಂಧವನ್ನು ಚ್ಛೇದಿಸುತ್ತಾನೆ."

(ಬುಖಾರಿ, ಮುಸ್ಲಿಮ್)

"ಕುಟುಂಬ ಸಂಬಂಧದ ಸೇರ್ಪಡೆ ಮತ್ತು ದಾನಗಳಿಗಾಗಿ ಪರಲೋಕದಲ್ಲಿ ಕ್ಷಿಪ್ರ ತಿಫಲ ದೊರೆಯುತ್ತದೆ. ಹಾಗೆಯೇ ಕುಟುಂಬ ಸಂಬಂಧವನ್ನು ಮುರಿದುದಕ್ಕೆ ಮತ್ತು ಕ್ರಮಕ್ಕೆ ಕ್ಷಿಪ್ರ ಶಿಕ್ಷೆ ದೊರೆಯುತ್ತದೆ."

ಪ್ರವಾದಿಯವರು(ಸ) ಹೀಗೆ ಹೇಳಿದ್ದಾರೆ, "ಕುಟುಂಬ ಸಂಬಂಧವನ್ನು ಮುರಿಯುವಾತನು ರ್ಗದಲ್ಲಿ ಪ್ರವೇಶಿಸಲಾರ."

(ಬುಖಾರಿ, ಮುಸ್ಲಿಮ್)

"ಯಾರಾದರೂ ಅಲ್ಲಾಹನಲ್ಲಿಯೂ ಅಂತಿಮ ದಿನದಲ್ಲಿಯೂ ವಿಶ್ವಾಸವಿರಿಸುವುದಿದ್ದರೆ ತನು ಕುಟುಂಬ ಸಂಬಂಧವನ್ನು ಸೇರಿಸಲಿ."

(ಬುಖಾರಿ, ಮುಸ್ಲಿಮ್)

ಅಬೂಹುರೈರಾರಿಂದ(ರ) ವರದಿ: ಒಬ್ಬರು ಪ್ರವಾದಿಯವರೊಡನೆ(ಸ) ಹೇಳಿದರು, ಲ್ಲಾಹನ ಪ್ರವಾದಿಗಳೇ, ನನಗೆ ಕೆಲವು ಸಂಬಂಧಿಕರಿದ್ದಾರೆ. ನಾನು ಅವರೊಂದಿಗೆ ಬಂಧ ಸ್ಥಾಪಿಸುತ್ತೇನೆ. ಆದರೂ ಅವರು ನನ್ನೊಂದಿಗೆ ಸಂಬಂಧ ಮುರಿಯುತ್ತಾರೆ. ನಾನು ರೊಂದಿಗೆ ಉದಾರವಾಗಿ ವರ್ತಿಸುತ್ತೇನೆ. ಅವರು ನನ್ನೊಡನೆ ಕೆಟ್ಟ ರೀತಿಯಲ್ಲಿ ್ತಿಸುತ್ತಾರೆ. ನಾನು ಅವರಿಗಾಗಿ ತಾಳ್ಮೆ ವಹಿಸುತ್ತೇನೆ. ಆದರೂ ಅವರು ನನ್ನೊಡನೆ ಾವೇಶದಿಂದ ವರ್ತಿಸುತ್ತಾರೆ. ಆಗ ಪ್ರವಾದಿಯವರು(ಸ) ಹೇಳಿದರು, ವಸ್ತುಸ್ಥಿತಿಯು ನೀವು ಳಿದ ಹಾಗಿದ್ದರೆ ನೀವು ಅವರಿಗೆ ಬೂದಿ ತಿನ್ನಿಸುತ್ತಿರುವಂತೆಯೇ ಸರಿ. ನೀವು ಇದೇ

ನೀತಿಯನ್ನು ಮುಂದುವರಿಸುತ್ತಿರುವ ತನಕ ಓರ್ವ ಸಹಾಯಕನು ನಿವ
ಜತೆಯಲ್ಲಿರುತ್ತಾನೆ."

(ಮುಸ್ಲಿಮ

ಹತ್ತಿರದ ಸಂಬಂಧಿಕರಿಗೆ ಹಣ ಸಹಾಯ ಮಾಡಬೇಕೆಂದು ಇಸ್ಲಾಮ್ ಆದೇಶಿಸಿ
ಅಲ್ಲಾಹನು ಹೀಗೆ ಆಜ್ಞಾಪಿಸಿದ್ದಾನೆ,

"ಅಲ್ಲಾಹನು ನ್ಯಾಯಪಾಲನೆ, ಪರೋಪಕಾರ ಮತ್ತು ಆಪ್ತೇಷ್ಟರೊಂದಿಗೆ ಸೌಜ ತೋರಿಸಬೇಕೆಂಬ ಆಜ್ಞೆಯನ್ನು ನೀಡುತ್ತಾನೆ."

(ಪವಿತ್ರ ಕುರ್‌ಆನ್, 16:9

"ಹತ್ತಿರದ ಸಂಬಂಧಿಕರಿಗೂ ಅನಾಥರಿಗೂ ನಿರ್ಗತಿಕರಿಗೂ ದಾರಿಹೋಕರಿ ಸಹಾಯಾರ್ಥಿಗಳಿಗೂ ಬಂಧಿತರ ವಿಮೋಚನೆಗಾಗಿಯೂ ನಿಮಗೆ ಪ್ರಿಯವಾದ ಹಣವ ವ್ಯಯಿಸುವುದೇ ಪುಣ್ಯಕರ್ಮವಾಗಿದೆ."

(ಪವಿತ್ರ ಕುರ್‌ಆನ್, 2:1

"ಹತ್ತಿರದ ಸಂಬಂಧಿಕರಿಗೆ ಅವರ ಹಕ್ಕುಗಳನ್ನು ನೀಡಿರಿ"

(ಪವಿತ್ರ ಕುರ್‌ಆನ್, 17:

"ಸೊತ್ತನ್ನು ಪಾಲು ಮಾಡುವ ಸಂದರ್ಭದಲ್ಲಿ (ಹಕ್ಕುದಾರರಲ್ಲದ) ಸಂಬಂಧಿಕ ಅನಾಥರು ಮತ್ತು ನಿರ್ಗತಿಕರು ಬಂದರೆ ಅವರಿಗೂ ಏನಾದರೂ ಕೊಡಿರಿ. ಅವರೊ ಸೌಜನ್ಯದ ಮಾತುಗಳನ್ನಾಡಿರಿ."

(ಪವಿತ್ರ ಕುರ್‌ಆನ್, 4

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ನನ್ನನ್ನು ಸತ್ಯ ಸಹಿತ ನೇಮಿಸಿರುವಾತನ ಆ ಯಾರಾದರೂ ತನ್ನ ಹಣವನ್ನು ಅಗತ್ಯವಿರುವ ಹತ್ತಿರದ ಸಂಬಂಧಿಕರಿರುವಾಗ ಅದ ಇತರರಿಗೆ ನೀಡಿದರೆ ಆ ದಾನವನ್ನು ಅಲ್ಲಾಹನು ಸ್ವೀಕರಿಸಲಾರನು. ನನ್ನ ಆತ್ಮವು ಯ ಹಸ್ತದಲ್ಲಿದೆಯೋ ಆತನಾಣೆ! ಅಲ್ಲಾಹನು ಅಂತಿಮ ದಿನದಲ್ಲಿ ಆತನತ್ತ ನೋಡಲಾರನ

(ತಬಾ

"ದರಿದ್ರನಿಗೆ ನೀಡುವ ದಾನದಿಂದ ಒಂದು ಪ್ರತಿಫಲ ದೊರೆತರೆ, ಹತ್ತಿ ಸಂಬಂಧಿಕನಿಗೆ ನೀಡುವ ದಾನದಿಂದ ಎರಡು ಪ್ರತಿಫಲವು ಖಾತ್ರಿಯಾಗುತ್ತದೆ. ದಾ ಪ್ರತಿಫಲ ಮತ್ತು ಸಂಬಂಧವನ್ನು ಜೋಡಿಸಿದ ಪ್ರತಿಫಲ."

(ತಿರ್ಮಿ

ಕುಟುಂಬ ಸಂಬಂಧವನ್ನು ಮುರಿಯುವಾತನಿಗೆ ಐಹಿಕ ಜೀವನದಲ್ಲಿ ಅನು ದೊರೆಯಲಾರದು ಮತ್ತು ಆತನ ಕರ್ಮಗಳು ಸ್ವೀಕೃತವಾಗಲಾರದೆಂದು ಪ್ರವಾದಿಯವರು ಕಲಿಸಿದ್ದಾರೆ. ಹೀಗೆ ಬಂಧುಗಳೊಂದಿಗಿನ ಸಂಬಂಧವನ್ನು ಇಸ್ಲಾಮ್, ಸತ್ಯವಿಶ್ವಾಸ ಮ ಸ್ವರ್ಗ-ನರಕದೊಂದಿಗೆ ಜೋಡಿಸಿದೆ.

ಅತಿಥಿ ಸತ್ಕಾರ

ಹತ್ತಿರದ ಸಂಬಂಧಿಕರು ಮತ್ತು ನೆರೆಕರೆಯವರಂತೆಯೇ ಆಗಂತುಕರನ್ನು ಸತ್ಕರಿಸಬೇಕೆಂದೂ ಇಸ್ಲಾಮ್ ಕಲಿಸುತ್ತದೆ. ಪ್ರವಾದಿ(ಸ) ಹೇಳಿದ್ದಾರೆ, "ಯಾರಾದರೂ ಅಲ್ಲಾಹನಲ್ಲಿಯೂ ಅಂತಿಮ ದಿನದಲ್ಲಿಯೂ ವಿಶ್ವಾಸವಿರಿಸುವುದಿದ್ದರೆ ತನ್ನ ಅತಿಥಿಯನ್ನು ಸತ್ಕರಿಸಲಿ."

(ಬುಖಾರಿ, ಮುಸ್ಲಿಮ್)

ಅತಿಥಿಯನ್ನು ಮೂರು ದಿನ ಉಪಚರಿಸುವುದು ಆತಿಥೇಯನ ಕರ್ತವ್ಯವೆಂದು ಪ್ರವಾದಿಯವರು(ಸ) ಕಲಿಸಿದ್ದಾರೆ.

'ಅತಿಥಿಯನ್ನು ಸತ್ಕರಿಸದವನಿಗೆ ಶುಭವಾಗಲಾರದೆಂದೂ' ಅವರು ಹೇಳಿದ್ದಾರೆ.

(ಅಹ್ಮದ್)

ಪ್ರವಾದಿ(ಸ) ಮತ್ತು ಅನುಯಾಯಿಗಳು ಅತಿಥಿ ಸತ್ಕಾರಕ್ಕೆ ವಿಶೇಷ ಮಹತ್ವ ನೀಡಿದ್ದರು. ಸ್ವತಃ ಆಹಾರವಿಲ್ಲದೆ ಹಸಿದಿದ್ದರೂ ಅತಿಥಿಗಳಿಗೆ ಉಣಿಸುವ ರೂಢಿಯಿತ್ತು. ಪ್ರವಾದಿಯವರ(ಸ) ಬಳಿಗೆ ಬಂದಿದ್ದ ಓರ್ವ ಅತಿಥಿಯನ್ನು ಈ ರೀತಿ ಸ್ವತಃ ತಿನ್ನದೆ ಸತ್ಕರಿಸಿದ ಕುಟುಂಬವನ್ನು ಅಲ್ಲಾಹನು ಕುರ್‌ಆನಿನಲ್ಲಿ ಹೀಗೆ ಪ್ರಶಂಸಿಸಿದ್ದಾನೆ:

"ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ. ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು."

(ಪವಿತ್ರ ಕುರ್‌ಆನ್, 59 : 9)

ಅತಿಥಿ ಸತ್ಕಾರವು ಪುಣ್ಯ ಕರ್ಮವಾಗಿರುವಂತೆಯೇ ಅವರನ್ನು ಕಡೆಗಣಿಸುವುದು ಅಪರಾಧವಾಗಿದೆ. ಇಬ್ಬರ ಆಹಾರವನ್ನು ಮೂವರಿಗೆ, ಮೂವರ ಆಹಾರವನ್ನು ನಾಲ್ಕೈದು ಮಂದಿಗೆ ಬಡಿಸಿಯಾದರೂ ಅತಿಥಿಯನ್ನು ಸತ್ಕರಿಸಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಹೀಗೆ ಅತಿಥಿಯೊಂದಿಗಿನ ಧೋರಣೆಯನ್ನೂ ಇಸ್ಲಾಮ್, ಧರ್ಮದ ಅವಿಭಾಜ್ಯ ಅಂಗವೆಂದು ಕಂಡಿದೆ.

◆◆

ಅನಾಥರು, ನಿರ್ಗತಿಕರು, ಸೇವಕರ

ಗುಲಾಮರ ವಿಮೋಚನೆ, ದುರ್ಬಲರಿಗೆ ನೆರವು, ನಿರಾಶ್ರಿತರಿಗೆ ಅಭಯ, ಅನಾಥ ಆರೈಕೆ, ನಿರ್ಗತಿಕರಿಗೆ ಅನ್ನದಾನ, ಕಷ್ಟದಲ್ಲಿರುವವರಿಗೆ ಸಹಾಯ, ಮರ್ದಿತರಿಗೆ ರಕ್ಷಣೆ, ಎಲ್ಲ ಕಾರ್ಯಗಳು ಇಸ್ಲಾಮಿನ ದೃಷ್ಟಿಯಲ್ಲಿ ಆರಾಧನಾ ಕರ್ಮಗಳಂತೆಯೇ ವಿಶಿ ಕರ್ಮಗಳಾಗಿವೆ. ಧಾರ್ಮಿಕ ಕರ್ತವ್ಯವಾಗಿದೆ.

ಕುರ್‌ಆನ್ ಹೀಗೆ ಘೋಷಿಸಿದೆ:

"ನೀವು ಕಂಡಿರಾ ಪರಲೋಕದ ಕರ್ಮಫಲಗಳನ್ನು ನಿರಾಕರಿಸುವವನನ್ನು? ಅವ ತಾನೆ, ಅನಾಥನನ್ನು ದೂರ ದಬ್ಬುವವನು ಮತ್ತು ದರಿದ್ರನಿಗೆ ಊಟ ಕೊಡ ಪ್ರೇರೇಪಿಸದವನು!"

(ಪವಿತ್ರ ಕುರ್‌ಆನ್, 107:1

"ನೀವು ಅನಾಥರೊಡನೆ ಗೌರವದಿಂದ ವರ್ತಿಸುವುದಿಲ್ಲ. ದರಿದ್ರರಿಗೆ ಉಣ ಬಡಿಸ ಪರಸ್ಪರ ಪ್ರೇರೇಪಿಸುವುದಿಲ್ಲ."

(ಪವಿತ್ರ ಕುರ್‌ಆನ್, 89:17-

ನರಕವಾಸಿಗಳು ತಮ್ಮನ್ನು ಅಲ್ಲಿಗೆ ತಲಪಿಸಿದ ಕಾರಣಗಳನ್ನು ಹೀಗೆ ವಿವರಿಸುತ್ತಾ "ಪ್ರತಿಯೊಬ್ಬನೂ ತನ್ನ ದುಡಿಮೆಯ ಬದಲಿಗೆ ಅಡವಿಡಲ್ಪಟ್ಟಿದ್ದಾನೆ. ಬಲಗಡೆಯ ಹೊರತು. ಅವರು ಸ್ವರ್ಗದಲ್ಲಿರುವರು. ಅವರು ಅಪರಾಧಿಗಳೊಡನೆ ಹೀಗೆ ಕೇಳುವ 'ನಿಮ್ಮನ್ನು ನರಕಕ್ಕೆ ಒಯ್ದುದು ಯಾವುದು?' ಅವರು ಹೇಳುವರು, ನಾವು ನಮಾಜ ಮಾಡುವವರಾಗಿರಲಿಲ್ಲ ಮತ್ತು ದರಿದ್ರರಿಗೆ ಉಣಿಸುತ್ತಿರಲಿಲ್ಲ. ಮತ್ತು ಸತ್ಯದ ವಿರು ಮಾತುಗಳನ್ನು ಸೃಷ್ಟಿಸುವವರ ಜತೆ ಸೇರಿ ನಾವೂ ಮಾತುಗಳನ್ನು ಸೃಷ್ಟಿಸುತ್ತಿದ್ದೆವು ಮ ನಾವು ಪ್ರತಿಫಲದ ದಿನವನ್ನು ಸುಳ್ಳೆಂದು ಹೇಳುತ್ತಿದ್ದೆವು. ಕೊನೆಗೆ ಆ ಖಚಿತ ದಿನವೂ ನಮ ಎದುರಾಗಿಯೇ ಬಿಟ್ಟಿತು."

(ಪವಿತ್ರ ಕುರ್‌ಆನ್, 74:38-

"ಯಾರ ಕರ್ಮಪತ್ರವನ್ನು ಎಡಗೈಯಲ್ಲಿ ಕೊಡಲಾಗುವುದೋ ಆತನು ಹೇಳುವ ಅಯ್ಯೋ! ನನ್ನ ಕರ್ಮಪತ್ರವನ್ನು ನನಗೆ ಕೊಡದೆ ಇರುತ್ತಿದ್ದರೆ ಮತ್ತು ನನ್ನ ಕ ವೃತ್ತಾಂತವೇನೆಂದು ನನಗೆ ತಿಳಿಯದೆ ಇರುತ್ತಿದ್ದರೆ! ಅಯ್ಯೋ (ಭೂಲೋಕದಲ್ಲಿ ಬಂದ ನನ್ನ ಈ ಮರಣವೇ ನಿರ್ಣಾಯಕವಾಗಿರುತ್ತಿದ್ದರೆ! ನನ್ನ ಸಂಪತ್ತು ಇಂದು ನನಗೇ

ಯೋಜನ ಕೊಡಲಿಲ್ಲ. ನನ್ನ ಅಧಿಕಾರವೆಲ್ಲವೂ ಕೊನೆಗೊಂಡಿತು. (ಆಗ ಹೀಗೆ ಪ್ಪಣೆಯಾಗುವುದು) ಇವನನ್ನು ಹಿಡಿಯಿರಿ ಮತ್ತು ಇವನಿಗೆ ಕಂಠ ಕಡಗವನ್ನು ಹಾಕಿರಿ. ನಂತರ ಇವನನ್ನು ನರಕದೊಳಕ್ಕೆ ತಳ್ಳಿಬಿಡಿರಿ. ಆ ಬಳಿಕ ಅವನನ್ನು ಎಪ್ಪತ್ತು ಮೊಳ ಉದ್ದದ ಂಕೋಲೆಯಿಂದ ಬಿಗಿಯಿರಿ. ಇವನು ಮಹಿಮಾವಂತನಾದ ಅಲ್ಲಾಹನ ಮೇಲೆ ಶ್ವಾಸವಿರಿಸುತ್ತಿರಲಿಲ್ಲ ಮತ್ತು ದರಿದ್ರರಿಗೆ ಊಟ ಕೊಡಲೂ ಪ್ರೇರೇಪಿಸುತ್ತಿರಲಿಲ್ಲ. ಆದ್ದರಿಂದ ವನಿಗೆ ಇಲ್ಲಿ ಅನುಕಂಪ ತೋರುವವರಾರೂ ಇಲ್ಲ ಮತ್ತು ಗಾಯದ ಕೀವಿನ ಹೊರತು ವನಿಗೆ ಬೇರೆ ಯಾವ ಆಹಾರವೂ ಇಲ್ಲ. ಅದನ್ನು ಪಾಪಿಗಳ ಹೊರತು ಇನ್ನಾರೂ ನ್ನುವುದಿಲ್ಲ."

(ಪವಿತ್ರ ಕುರ್‌ಆನ್, 69:25-37)

ದರಿದ್ರರಿಗೆ ಆಹಾರ ನೀಡಲು ಪ್ರೇರೇಪಿಸದಿರುವುದನ್ನು ಪವಿತ್ರ ಕುರ್‌ಆನ್, ಘೋರ ಕ್ಷೆಗೆ ಕಾರಣವಾಗಿರುವ ಅಲ್ಲಾಹನಲ್ಲಿ ಅವಿಶ್ವಾಸ, ಪರಲೋಕದ ನಿಷೇಧ ಮತ್ತು ನಮಾಝ್‌ನ ಉಪೇಕ್ಷೆ ಇತ್ಯಾದಿಗಳೊಂದಿಗೆ ಸೇರಿಸಿದೆ. ಅರ್ಥಾತ್ ದರಿದ್ರರಿಗೆ ನೀಡುವ ನ್ನದಾನವು ಈಮಾನ್ ಮತ್ತು ಇಸ್ಲಾಮ್ ಕಾರ್ಯಗಳಂತೆಯೇ ಪ್ರಧಾನವಾಗಿದೆ.

ಶ್ರೀಮಂತನಲ್ಲಿರುವ ಹಣವು ವಸ್ತುತಃ ಅವನ ಹಣವೇ ಆಗಿದ್ದರೂ ಅದರಲ್ಲಿ ಮಾಜದ ದುರ್ಬಲರೂ ಬಡವರೂ ಹಕ್ಕುದಾರರಾಗಿದ್ದಾರೆ. ಅಲ್ಲಾಹನು ಹೀಗೆ ಹೇಳಿರುವನು:

"ಸಂಬಂಧಿಕನಿಗೆ ಆತನ ಹಕ್ಕುಗಳನ್ನು ನೀಡಿರಿ. ನಿರ್ಗತಿಕರಿಗೂ ಪ್ರಯಾಣಿಕರಿಗೂ ರರ ಹಕ್ಕುಗಳನ್ನು ನೀಡಿರಿ. ದುರ್ವ್ಯಯ ಮಾಡಬೇಡಿರಿ." (ಪವಿತ್ರ ಕುರ್‌ಆನ್, 17:26)

"ಸಂಬಂಧಿಕನಿಗೆ ಅವನ ಹಕ್ಕನ್ನು ಕೊಡಬೇಕು. ದರಿದ್ರನಿಗೂ ಪ್ರಯಾಣಿಕನಿಗೂ ವರವರ ಹಕ್ಕುಗಳನ್ನು ಕೊಡಬೇಕು) ಅಲ್ಲಾಹನ ಸಂಪ್ರೀತಿಯನ್ನು ಬಯಸುವವರಿಗೆ ಈ ು ಉತ್ತಮವಾಗಿದೆ ಮತ್ತು ಅವರೇ ಯಶಸ್ವಿಗಳಾಗುವವರು."

(ಪವಿತ್ರ ಕುರ್‌ಆನ್, 30:38)

ಪುಣ್ಯವನ್ನು ಕುರ್‌ಆನ್ ಹೀಗೆ ವಿಶ್ಲೇಷಿಸಿದೆ. "ನೀವು ನಿಮ್ಮ ಮುಖಗಳನ್ನು ರ್ವದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ತಿರುಗಿಸುವುದು ಪುಣ್ಯವಲ್ಲ. ನಿಜವಾಗಿಯೂ ರ್ಣನು ಅಲ್ಲಾಹನನ್ನೂ ದೇವಚರರನ್ನೂ ನಿರ್ಣಾಯಕ ದಿನವನ್ನೂ ಅಲ್ಲಾಹನು ರತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಬ್ಬಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನ ಮೆಚ್ಚುಗೆಯ ಸಂಪತ್ತನ್ನು ಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯವಿಮೋಚನೆ ಗಿಯೂ ವ್ಯಯಿಸುವುದೂ ನಮಾಝನ್ನು ಸಂಸ್ಥಾಪಿಸುವುದೂ ಝಕಾತನ್ನು (ಕಡ್ಡಾಯ ನವನ್ನು) ನೀಡುವುದೂ ಪುಣ್ಯವಾಗಿದೆ."

(ಪವಿತ್ರ ಕುರ್‌ಆನ್, 2:177)

ಇಲ್ಲಿಯೂ ಸಂಬಂಧಿಕರು, ನಿರ್ಗತಿಕರು, ಅನಾಥರು ಮತ್ತು ಸೇವಕರಿಗೆ ನೀಡುವ ರ್ಯಕ ದಾನವನ್ನು ಈಮಾನ್ ಮತ್ತು ಇಸ್ಲಾಮ್ ಕಾರ್ಯಗಳ ಜತೆಯಲ್ಲಿ

ಸೇರಿಸಲಾಗಿದೆ. ಮಾತ್ರವಲ್ಲ, ಅದು ಝಕಾತ್‌ನಲ್ಲಿ ಸೇರಿಲ್ಲದ ಕಾರ್ಯವೆಂದ ಸ್ಪಷ್ಟಪಡಿಸಲಾಗಿದೆ.

ಹಣವನ್ನು ಖರ್ಚುಮಾಡುವ ಉದ್ದೇಶದ ಕುರಿತು ಕುರ್‌ಆನ್ ಹೀಗೆ ಹೇಳಿದೆ,

"ನಾವು ಏನನ್ನು ಖರ್ಚುಮಾಡಬೇಕೆಂದು ಜನರು ಕೇಳುತ್ತಾರೆ, ಅವರೊಡನೆ ಹಿ ಹೇಳಿರಿ, ನೀವು ಖರ್ಚು ಮಾಡುವ ಹಣವನ್ನು ನಿಮ್ಮ ಮಾತಾಪಿತರು, ಸಂಬಂಧಿಕ ಅನಾಥರು, ಬಡವರು ಮತ್ತು ಪ್ರಯಾಣಿಕರಿಗಾಗಿ ಖರ್ಚು ಮಾಡಿರಿ. ಎಲ್ಲಾ ಒಳಿತುಗಳ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ."

(ಪವಿತ್ರ ಕುರ್‌ಆನ್, 2:2

ಸ್ವರ್ಗ ಗಳಿಸುವ ಬಲಗಡೆಯವರನ್ನು ಅಲ್ಲಾಹನು ಹೀಗೆ ಪರಿಚಯಗೊಳಿಸಿದ್ದಾ

"ನಾನು ಹಣವನ್ನು ಧಾರಾಳವಾಗಿ ಖರ್ಚು ಮಾಡಿರುವೆನೆಂದು ಅವ ವಾದಿಸುತ್ತಿದ್ದಾನಲ್ಲವೇ. ಅವನನ್ನು ಯಾರೂ ಕಂಡಿಲ್ಲವೆಂದು ಅವನು ಭಾವಿಸುತ್ತಾನೆಯೆ ನಾವು ಅವನಿಗೆ ಎರಡು ಕಣ್ಣುಗಳನ್ನೂ ಒಂದು ನಾಲಗೆಯನ್ನೂ ಎರಡು ತುಟಿಗಳನ ಕೊಟ್ಟಿಲ್ಲವೇ? ಮತ್ತು ಅವನಿಗೆ ಎರಡು ಸುಸ್ಪಷ್ಟ ದಾರಿಗಳನ್ನು ತೋರಿಸಿಕೊಡಲಿಲ್ಲವ ಆದರೆ ಅವನು ದುರ್ಗಮ ಏರನ್ನು ಏರುವ ಸಾಹಸವನ್ನೇ ಮಾಡಲಿಲ್ಲ. ಆ ದುರ್ಗಮ ಏ ಏನೆಂದು ನಿಮಗೇನು ಗೊತ್ತು? ಯಾವುದಾದರೂ ಕೊರಳನ್ನು ದಾಸ್ಯ ಬಂಧನದಿ ವಿಮೋಚಿಸುವುದು ಅಥವಾ ಹಸಿವಿನ ದಿನ, ಹಸಿದ ಆಪ್ತ ಅನಾಥನಿಗೆ ಅಥವಾ ದಿಕ್ಕೆ ದರಿದ್ರನಿಗೆ ಉಣ ಬಡಿಸುವುದು. ತರುವಾಯ ಸತ್ಯವಿಶ್ವಾಸವಿರಿಸಿದ ಹಾಗೂ ಪರಸ್ಪರರಿಗೆ ಸ ಮತ್ತು (ಸೃಷ್ಟಿಗಳ ಮೇಲೆ) ಕರುಣೆಯನ್ನು ಬೋಧಿಸಿದ ಜನರ ಸಾಲಿಗೆ ಸೇರುವುದು. ಇವ ಬಲಗಡೆಯವರು."

(ಪವಿತ್ರ ಕುರ್‌ಆನ್, 90:6-

ಅವರೇ ಸ್ವರ್ಗಕ್ಕೆ ಅರ್ಹರು. ಕುರ್‌ಆನ್ ಹೀಗೆ ಹೇಳುತ್ತದೆ,

"ಸಜ್ಜನರು(ಸ್ವರ್ಗದಲ್ಲಿ) ಕರ್ಪೂರ ಜಲ ಮಿಶ್ರಿತ ಪಾನ ಪಾತ್ರೆಯಿಂದ ಕುಡಿಯುವ ಇದೊಂದು ಹರಿಯುತ್ತಿರುವ ಚಿಲುಮೆಯಾಗಿದ್ದು ಅದರ ನೀರಿನೊಂದಿಗೆ ಅಲ್ಲಾಹನ ದಾ ಮದಿರಾ ಪಾನ ಮಾಡುವರು ಮತ್ತು ತಾವಿಚ್ಛಿಸಿದೆಡೆ ನಿರಾಯಾಸವಾಗಿ ಅದರ ಶಾಖೆಗ ಹೊರಡಿಸುವರು. ಇವರು (ಭೂಲೋಕದಲ್ಲಿ) ಹರಕೆ ಪೂರ್ತಿಗೊಳಿಸುವವರು, ಎಲ್ಲೀ ವಿಪತ್ತೇ ಹಬ್ಬಿಕೊಂಡಿರುವ ಆ ದಿನವನ್ನು ಭಯಪಡುವವರೂ ಆಗಿರುವರು ಮತ್ತು ಅ ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಆ ಕೊಡುತ್ತಾರೆ. (ಮತ್ತು ಅವರೊಡನೆ ಹೇಳುತ್ತಾರೆ) "ನಾವು ನಿಮಗೆ ಕೇವಲ ಅಲ್ಲಾಹನಿ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾ ಬಯಸುವುದಿಲ್ಲ."

(ಪವಿತ್ರ ಕುರ್‌ಆನ್, 76:

ಝಕಾತ್ ಅಲ್ಲಾಹನ ಅತಿಶ್ರೇಷ್ಠ ಆರಾಧನೆಯಾಗಿದೆ. ಸಮಾಜದ ದೀನ ದಲಿತರೇ ರ ಹಕ್ಕುದಾರರಾಗಿದ್ದಾರೆ.

"ವಾಸ್ತವದಲ್ಲಿ ಈ ಕಡ್ಡಾಯ ದಾನವು (ಝಕಾತ್) ಬಡವರಿಗೆ, ದರಿದ್ರರಿಗೆ, ಝಕಾತ್‌ನ ನ್ಯೋಗಿಗಳಿಗೆ, ಓಲೈಸಬೇಕಾದವರಿಗೆ, ಜೀತ ವಿಮುಕ್ತಿಗೆ, ಸಾಲಗಾರನ ನೆರವಿಗೆ, ಅಲ್ಲಾಹನ ರ್ಗದಲ್ಲಿ ಮತ್ತು ಪ್ರಯಾಣಿಕರ ಉಪಚಾರಕ್ಕಾಗಿ ಖರ್ಚು ಮಾಡುವುದಕ್ಕಾಗಿದೆ. ಇದು ಲ್ಲಾಹನು ಆದೇಶಿಸಿದ ಕರ್ತವ್ಯವಾಗಿದೆ. ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ದ್ದಾನೆ."

(ಪವಿತ್ರ ಕುರ್‌ಆನ್, 9:60)

ಅವರು ಸಮರಾರ್ಜಿತ ಸೊತ್ತಿನ ಹಕ್ಕುದಾರರಲ್ಲಿಯೂ ಸೇರಿದ್ದಾರೆ.

"ನೀವು ಗಳಿಸಿದ ಯಾವುದೇ ಸಮರಾರ್ಜಿತ ಸೊತ್ತಿನಲ್ಲಿ ಅದರ ಐದನೆಯ ಒಂದಂಶವು, ಲ್ಲಾಹ್, ಅವನ ಸಂದೇಶವಾಹಕರು, ಸಂಬಂಧಿಕರು, ಅನಾಥರು, ನಿರ್ಗತಿಕರು ಮತ್ತು ಯಾಣಿಕರಿಗೆ ಸೇರಿದೆ."

(ಪವಿತ್ರ ಕುರ್‌ಆನ್, 8:41)

"ಅಲ್ಲಾಹನು ನಾಡಿನ ಜನರಿಂದ ತನ್ನ ಸಂದೇಶವಾಹಕರಿಗೆ ಮರಳಿಸಿದ್ದೆಲ್ಲವೂ ಲ್ಲಾಹನಿಗೆ, ಪ್ರವಾದಿಗೆ, ಸಂಬಂಧಿಕರಿಗೆ, ಅನಾಥರಿಗೆ, ನಿರ್ಗತಿಕರಿಗೆ ಮತ್ತು ಪ್ರಯಾಣಿಕ ಾಗಿದೆ. ಹಣವು ನಿಮ್ಮ ಶ್ರೀಮಂತರ ಮಧ್ಯೆಯೇ ಚಲಿಸುತ್ತಿರಬಾರದೆಂದು ಹೀಗೆ ಡಲಾಗಿದೆ."

(ಪವಿತ್ರ ಕುರ್‌ಆನ್, 59:7)

ನಿರ್ಗತಿಕರಿಗೆ ಪಾಲು ನೀಡದಿರಲಿಕ್ಕಾಗಿ ತೋಟದ ಹಣ್ಣುಗಳನ್ನು ಪ್ರಭಾತಕ್ಕಿಂತ ಂಚಿತವಾಗಿಯೇ ಕೊಯ್ಯಲು ನಿರ್ಧರಿಸಿದ ಕೆಲವರ ದುರಂತ ಕಥೆಯನ್ನು ಕುರ್‌ಆನ್ ಹೀಗೆ ರಿಸಿದೆ: "ನಾವು ಒಂದು ತೋಟದ ಮಾಲಕರನ್ನು ಪರೀಕ್ಷೆಗೆ ಗುರಿಪಡಿಸಿದಂತೆಯೇ ರನ್ನೂ (ಮಕ್ಕಾವಾಸಿಗಳನ್ನು) ಪರೀಕ್ಷೆಗೊಳಪಡಿಸಿರುತ್ತೇವೆ. 'ಖಂಡಿತವಾಗಿಯೂ ನಸುಕಿನಲ್ಲಿ ವು ನಮ್ಮ ತೋಟದ ಫಲಗಳನ್ನು ಕೊಯ್ಯುವೆವು' ಎಂದು ಅವರು ಆಣೆ ಹಾಕುವಾಗ ಾವುದೇ ವಿನಾಯಿತಿಯನ್ನು ತೋರಿಸಿರಲಿಲ್ಲ. ರಾತ್ರಿ ಅವರು ನಿದ್ರೆಯಲ್ಲಿದ್ದಾಗ ನಿಮ್ಮ ಭುವಿನ ಕಡೆಯಿಂದ ಆ ತೋಟಕ್ಕೆ ವಿಪತ್ತು ಬಂದೆರಗಿತು. ಆಗ ಅದು ಕೊಯ್ದು ್ರಿಯಂತಾಯಿತು. ಮುಂಜಾನೆ ಅವರು ಪರಸ್ಪರರನ್ನು ಕೂಗಿ ಕರೆದು, 'ಫಲಗಳನ್ನು ಯ್ಯಬೇಕಿದ್ದರೆ ನಸುಕಿನಲ್ಲಿಯೇ ನಿಮ್ಮ ಹೊಲಗಳ ಕಡೆಗೆ ಹೊರಡಿರಿ' ಎಂದರು. ಗೆಯೇ ಅವರು ಹೊರಟು ಬರುವಾಗ, 'ಇಂದು ಬಡವರು ನಿಮ್ಮ ತೋಟದೊಳಗೆ ರದಂತೆ ಎಚ್ಚರ ವಹಿಸಬೇಕು' ಎಂದು ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಏನನ್ನೂ ಡಬಾರದೆಂದು ನಿರ್ಧರಿಸಿ, ನಾವು ಕೊಯ್ಯಲು ಶಕ್ತರೆಂಬ ಭಾವನೆಯಿಂದ ನಸುಕಿನಲ್ಲಿಯೇ ಬಗೆಯಿಂದ ಅಲ್ಲಿಗೆ ಹೋದರು. ಆದರೆ ತೋಟದ ಅವಸ್ಥೆಯನ್ನು ಕಂಡಾಗ ಅವರು,

'ನಮಗೆ ದಾರಿ ತಪ್ಪಿದೆ ಅಥವಾ ನಾವು ನಿಜವಾಗಿಯೇ ವಂಚಿತರಾಗಿ ಬಿಟ್ಟಿದ್ದೇವೆ' ಎಂ
ಹೇಳಿದರು."

(ಪವಿತ್ರ ಕುರ್‌ಆನ್, 68:17-

ಹಲವು ತಪ್ಪು ಮತ್ತು ಪಾಪಗಳಿಗೆ ಪ್ರಾಯಶ್ಚಿತ್ತವಾಗಿ ಇಸ್ಲಾಮ್, ಜೀತ ವಿಮ
ಮತ್ತು ನಿರ್ಗತಿಕರಿಗೆ ಅನ್ನದಾನವನ್ನು ಸೂಚಿಸಿದೆ.

(ನೋಡಿರಿ, ಪವಿತ್ರ ಕುರ್‌ಆನ್, 4:92, 5:89-95, 58:3

ಅನಾಥರ ಹಣವನ್ನು ಅಕ್ರಮವಾಗಿ ಪಡೆಯಬಾರದೆಂದು ಇಸ್ಲಾಮ್ ಸ್ಪಷ್ಟವ
ಆದೇಶಿಸಿದೆ. "ಅನಾಥರ ಸೊತ್ತುಗಳನ್ನು ನೀವು ಅವರಿಗೆ ಹಿಂತಿರುಗಿಸಿರಿ. ಒಳ್ಳೆಯ ಸೊತ್ತ
ಕೆಟ್ಟ ಸೊತ್ತಾಗಿ ಬದಲಾಯಿಸಬೇಡಿರಿ. ನೀವು ಅವರ ಸೊತ್ತನ್ನು ನಿಮ್ಮ ಸೊತ್ತಿನೊಂ
ಸೇರಿಸಿ ಕಬಳಿಸಬೇಡಿರಿ. ಅದು ಘೋರ ಪಾತಕವಾಗಿದೆ."

(ಪವಿತ್ರ ಕುರ್‌ಆನ್, 4

"ನೀವು ಉತ್ತಮ ರೀತಿಯಲ್ಲಿಯೇ ಅನಾಥರ ಸೊತ್ತನ್ನು ವ್ಯವಹರಿಸಬೇಕು."

(ಪವಿತ್ರ ಕುರ್‌ಆನ್, 6:152, 17:

ಅನಾಥರು ಮತ್ತು ನಿರ್ಗತಿಕರೊಡನೆ ಉತ್ತಮವಾಗಿ ವರ್ತಿಸಬೇಕೆಂದು ಅಲ್ಲಾಹ
ಆದೇಶಿಸಿದ್ದಾನೆ,

"ನೀವೆಲ್ಲರೂ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನೊಂದಿಗೆ ಯಾರನ
ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿ
ಸಂಬಂಧಿಕರೊಂದಿಗೂ ಅನಾಥರೊಂದಿಗೂ ನಿರ್ಗತಿಕರೊಂದಿಗೂ ಉತ್ತಮ ರೀತಿಯಿಂ
ವರ್ತಿಸಿರಿ."

(ಪವಿತ್ರ ಕುರ್‌ಆನ್, 4:

"ಅಲ್ಲಾಹನ ಹೊರತು ಬೇರೆ ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂ
ಮಾತಾಪಿತರು, ಬಂಧು ಬಳಗದವರು, ಅನಾಥರು ಮತ್ತು ನಿರ್ಗತಿಕರೊಂದಿಗೆ ಸೌಜನ್ಯದಿ
ವರ್ತಿಸಬೇಕೆಂದೂ ಜನರೊಡನೆ ಒಳ್ಳೆಯ ಮಾತುಗಳನ್ನಾಡಬೇಕೆಂದೂ ನಮಾಝು
ಸಂಸ್ಥಾಪಿಸಬೇಕೆಂದೂ 'ಝಕಾತ್' (ಕಡ್ಡಾಯ ದಾನ) ಕೊಡಬೇಕೆಂದೂ ನಾವು ಇಸ್ರಾಈ
ಸಂತತಿಯರಿಂದ ಬಲವಾದ ಕರಾರನ್ನು ಪಡೆದಿದ್ದೆವು."

(ಪವಿತ್ರ ಕುರ್‌ಆನ್, 2:

ಅನಾಥರಿಗೆ ಹಿತಕರವಾದ ಧೋರಣೆಯನ್ನು ಅನುಸರಿಸಬೇಕೆಂದು ಕುರ್‌ಆ
ನಿರ್ಣಯಿಸಿದೆ.

"ಅನಾಥರೊಡನೆ ಯಾವ ರೀತಿ ವ್ಯವಹರಿಸಬೇಕೆಂದು ಅವರು ನಿಮ್ಮೊಡನೆ ಕೇಳುತ್ತಾ
ಹೇಳಿರಿ, ಅವರಿಗೆ ಹಿತಕರವಾಗುವ ರೀತಿಯಲ್ಲಿ ವ್ಯವಹರಿಸುವುದೇ ಶ್ರೇಷ್ಠವಾಗಿದೆ."

(ಪವಿತ್ರ ಕುರ್‌ಆನ್, 2:2

ಅನಾಥರ ಸಂಪತ್ತನ್ನು ಅಕ್ರಮವಾಗಿ ಕಬಳಿಸುವವರ ಸ್ಥಿತಿಯು ಅತ್ಯಂತ ೀಚನೀಯವಾಗಿದೆ. "ಅನಾಥರ ಸೊತ್ತನ್ನು ಅಕ್ರಮವಾಗಿ ಕಬಳಿಸುವವರು ವಾಸ್ತವದಲ್ಲಿ ್ಮ ಹೊಟ್ಟೆಯಲ್ಲಿ ನರಕಾಗ್ನಿಯನ್ನು ತುಂಬುತ್ತಾರೆ ಮತ್ತು ನಿಶ್ಚಯವಾಗಿಯೂ ಅವರು ಧಗಿಸುವ ನರಕಾಗ್ನಿಯಲ್ಲಿ ತಳ್ಳಲ್ಪಡುವರು."

(ಪವಿತ್ರ ಕುರ್‌ಆನ್, 4:10)

"ತಂದೆಯ ಪೋಷಣೆಯನ್ನು ಕಳೆದುಕೊಂಡ ಅನಾಥಳಿಗೆ ಆಕೆಗೆ ಅನಾಥತನದ ಭವವಾಗದಂತೆ ಅವರನ್ನು ಪ್ರೀತಿಯಿಂದ ಸಂರಕ್ಷಿಸಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಾದಿಯವರು(ಸ) ತನ್ನ ತೋರು ಬೆರಳು ಮತ್ತು ನಡು ಬೆರಳನ್ನು ಎತ್ತಿ ತೋರಿಸಿ ಿದರು, "ನಾನು ಮತ್ತು ಅನಾಥರನ್ನು ಸಂರಕ್ಷಿಸುವಾತನು ಸ್ವರ್ಗದಲ್ಲಿ ಹೀಗಿರುತ್ತೇವೆ."

(ಬುಖಾರಿ, ಅಬೂದಾವೂದ್, ತಿರ್ಮಿದಿ)

ಪ್ರವಾದಿ(ಸ) ಹೇಳಿದ್ದಾರೆ, "ಮುಸ್ಲಿಮರಲ್ಲಿರುವ ಅನಾಥರನ್ನು ಆಹಾರಪಾನೀಯಗಳಿಗಾಗಿ ಸೇರಿಸುವಾತನನ್ನು ಅಲ್ಲಾಹನು ಅದೇನಿದ್ದರೂ ಸದಾ ಸ್ವರ್ಗದಲ್ಲಿ ಪ್ರವೇಶಗೊಳಿಸುತ್ತಾನೆ. ಮ್ಯ ಪಾಪಗಳನ್ನು ಮಾಡಿಲ್ಲದಿದ್ದರೆ."

(ತಿರ್ಮಿದಿ)

ವಾತ್ಸಲ್ಯದಿಂದ ಅನಾಥರ ತಲೆ ನೇವರಿಸಿ ಅವರನ್ನು ಸಂತೃಪ್ತಗೊಳಿಸಬೇಕೆಂದು ಾದಿ(ಸ) ಹೇಳಿದ್ದಾರೆ: "ನೀನು ಅನಾಥರ ತಲೆ ನೇವರಿಸು, ನಿರ್ಗತಿಕರಿಗೆ ಆಹಾರ ನೀಡು."

(ಅಹ್ಮದ್)

ಆಶ್ರಿತರಿಗೆ ನೆಮ್ಮದಿ ಒದಗಿಸುವುದು ಅಲ್ಲಾಹನ ಮಾರ್ಗದ ಹೋರಾಟದಂತೆಯೇ ್ಯದಾಯಕವಾಗಿದೆ. "ವಿಧವೆಯರು ಮತ್ತು ನಿರ್ಗತಿಕರಿಗಾಗಿ ದುಡಿಯುವಾತನು ಅಲ್ಲಾಹನ ರ್ಗದಲ್ಲಿ ಜಿಹಾದ್ ನಡೆಸುವಾತನಿಗೆ ಸಮಾನವಾಗಿದ್ದಾನೆ." (ಬುಖಾರಿ)

ಮರ್ದಿತರ ಹಕ್ಕು ರಕ್ಷಣೆಗೆ ಇಸ್ಲಾಮ್ ವಿಶೇಷ ಮಹತ್ವ ನೀಡಿದೆ. ಪ್ರವಾದಿಯವರು(ಸ) ಹೇಳಿದ್ದಾರೆ, "ಎಲ್ಲ ಕಾಲುಗಳೂ ನರಕಕ್ಕೆ ಜಾರಿ ಬೀಳುವ ದಿನದಲ್ಲಿ ಮರ್ದಿತನ ಸೇರಿ ಆತನ ಹಕ್ಕುಗಳನ್ನು ಗಳಿಸಿಕೊಟ್ಟಾತನ ಎರಡು ಕಾಲುಗಳೂ ವಿಚಲಿತವಾಗದೆ ವಾಗಿರುವುದು."

ಒಟ್ಟಿನಲ್ಲಿ, ಸಮಾಜದ ವಿವಿಧ ಸ್ತರಗಳಲ್ಲಿ ಕಷ್ಟ ಅನುಭವಿಸುತ್ತಿರುವ ಎಲ್ಲರಿಗೂ ಶ್ವನ ನೀಡಬೇಕಾದುದು ಧಾರ್ಮಿಕ ಕರ್ತವ್ಯವಾಗಿದೆ.

◆◆

ಸಾಮಾಜಿಕ ಜೀವ

ಸಾಮಾಜಿಕ ಜೀವನದ ಭದ್ರತೆಗೆ ಇಸ್ಲಾಮ್ ವಿಶೇಷ ಮಹತ್ವ ನೀಡಿದೆ. ಸ್ವ ಸುಗಮ, ಶಾಂತಿಯುತ ಸಾಮಾಜಿಕ ಜೀವನಕ್ಕೆ ಅಗತ್ಯವಿರುವ ನಿಯಮ ನಿಬಂಧನೆಗಳ ಅದು ನೀಡಿದೆ. ಸಾಮಾಜಿಕವಾಗಿ ಹಾನಿಕರವಾದ ಎಲ್ಲವೂ ಇಸ್ಲಾಮಿನ ದೃಷ್ಟಿಯಲ್ಲಿ ಹೀನ ನಿಷಿದ್ಧವೂ ಆಗಿದೆ. ಜೀವನದ ವಿಜಯ, ಸ್ವರ್ಗ ಪ್ರಾಪ್ತಿಗೆ ಸಾಮಾಜಿಕ ಶಿಷ್ಟಾಚಾ ಪಾಲನೆಯು ಅನಿವಾರ್ಯವಾಗಿದೆ. ಅವುಗಳ ಉಲ್ಲಂಘನೆಯು ನರಕ ಪ್ರವೇಶಕ್ಕೆ ಹೇತುವಾಗು ಆರಾಧನಾ ಕರ್ಮಗಳ ನಿರ್ವಹಣೆಯಂತೆಯೇ ಸಾಮಾಜಿಕ ಕರ್ತವ್ಯಗಳ ಈಡೇರಿಕೆ ಇಸ್ಲಾಮಿನಲ್ಲಿ ಬಹಳ ಪ್ರಧಾನವಾಗಿದೆ.

ಪರಸ್ಪರ ಪ್ರೀತಿ

ಪ್ರೀತಿ ಎಂಬ ಶಬ್ದವು ಅತಿ ಸುಂದರವಾಗಿದೆ. ಅದು ದೊರೆಯಬೇಕ ಬಯಸದವರಿರಲಾರರು. ಇತರರಿಗೆ ಅದನ್ನು ನೀಡಲು ಜಿಪುಣತೆ ತೋರಿಸುವವರೂ ಅ ಅನ್ಯರಿಂದ ನಿರೀಕ್ಷಿಸುತ್ತಾರೆ. ಜೀವದ ಬದುಕಿಗೆ ದಾಹ ಜಲದಂತೆಯೇ ಸಾಮ ಸಂಬಂಧಗಳ ಮೊಳಕೆಗೆ ಪ್ರೀತಿಯ ಒರತೆ ಕಡ್ಡಾಯವಾಗಿದೆ.

ಪ್ರೀತಿಯು ಹೃದಯ ದ್ವಾರಗಳನ್ನು ತೆರೆಯುವ ಕೀಲಿಕೈಯಾಗಿದೆ. ಆಯುಧಗ ಮಣಿಸಲಾಗದವರನ್ನು ಪ್ರೀತಿ ಪೂರ್ವಕ ವರ್ತನೆಯಿಂದ ಒಲಿಸಬಹುದು. ಪ್ರೀತಿಯ ಶಕ್ತಿ ಅಸಾಮಾನ್ಯ ಮತ್ತು ಅಪಾರವಾಗಿದೆ.

ಸತ್ಯವಿಶ್ವಾಸಿಗಳು ಪ್ರೀತಿ ತುಂಬಿದ ಮನದಿಂದ ಬಾಳಬಲ್ಲವರಾಗಿದ್ದಾರೆ. ಅ ಅವರು ಎಲ್ಲರಿಗೂ ಲೋಭವಿಲ್ಲದೆ ನೀಡಬೇಕಾಗಿದೆ. ಸಾಮಾಜಿಕ ಸಂಬಂಧವನ್ನು ಸು ಗೊಳಿಸುವ ಗಾಢ ಮತ್ತು ಹಾರ್ದಿಕ ಪ್ರೀತಿಯು ವಿಶ್ವಾಸವನ್ನು ಬಲಪಡಿಸುತ್ತದೆ. ಪ್ರ ಯವರು(ಸ) ಹೀಗೆ ಹೇಳಿದ್ದಾರೆ, "ನೀವು ಸತ್ಯವಿಶ್ವಾಸಿಗಳಾಗದೆ ಸ್ವರ್ಗದಲ್ಲಿ ಪ್ರವೇಶಿಸುವು ಪರಸ್ಪರ ಪ್ರೀತಿಸದೆ ನೀವು ಸತ್ಯವಿಶ್ವಾಸಿಗಳಾಗುವುದಿಲ್ಲ." (ಮುಸ್ಲಿ

"ಪರಸ್ಪರ ಪ್ರೀತಿ, ವಾತ್ಸಲ್ಯ ಮತ್ತು ಕರುಣೆಯಲ್ಲಿ ಸತ್ಯವಿಶ್ವಾಸಿಗಳು ಒ ದೇಹದಂತೆ. ದೇಹದ ಒಂದು ಅವಯವಕ್ಕೆ ನೋವಾದರೆ ಇತರೆಲ್ಲ ಅವಯವ ನಿದ್ದೆಗೆಟ್ಟು ಜ್ವರ ಪೀಡಿತವಾಗಿ ಅದರಲ್ಲಿ ಸಹಭಾಗಿಯಾಗುತ್ತವೆ." (ಬುಖಾರಿ, ಮುಸ್ಲಿ

"ತನಗಾಗಿ ಬಯಸುವುದನ್ನು ತನ್ನ ಸಹೋದರನಿಗೂ ಬಯಸದಿರುವ ತನಕ ನಿಮ್ಮ ಕಿ ಯಾರೂ ಸತ್ಯವಿಶ್ವಾಸಿಯಾಗುವುದಿಲ್ಲ."

(ಬುಖಾರಿ, ಮುಸ್ಲಿಮ್)

ನಯ

ಸಾಮಾಜಿಕ ಸಂಬಂಧಗಳ ಜೋಡಣೆಯಲ್ಲಿ ವಿನಯದ ಪಾತ್ರವು ವಿಸ್ಮಯಕರವಾಗಿದೆ. ಹಂಕಾರಿಗಳೊಂದಿಗೆ ಸೇರಲು ಯಾರಿಗೂ ಸಾಧ್ಯವಿಲ್ಲ. ಆದರೆ ವಿನಯಶೀಲರು ವಿರೋಧಿ ಾವನೆಗಳನ್ನು ಹೊಂದಿರುವವರನ್ನೂ ಆಕರ್ಷಿಸುತ್ತಾರೆ. ಆದ್ದರಿಂದ ಇಸ್ಲಾಮ್ ವಿನಯಕ್ಕೆ ಶೇಷ ಮಹತ್ವ ನೀಡಿದೆ. ಗುಣನಡತೆ, ಧೋರಣೆ, ವ್ಯವಹಾರಗಳಲ್ಲಿ ಮಾತ್ರವಲ್ಲ, ನಡೆನುಡಿ ಳಲ್ಲಿಯೂ ವಿನಯವಿರಬೇಕೆಂದು ಅದು ಆಜ್ಞಾಪಿಸುತ್ತದೆ. ಅಲ್ಲಾಹನು ಹೀಗೆ ಹೇಳಿರುವನು, **ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ. ರಭಿಮಾನ ಮತ್ತು ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ. ನಿನ್ನ ಡೆಯಲ್ಲಿ ಇತಿಮಿತಿಯನ್ನಿರಿಸು. ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು. ಎಲ್ಲ ಸ್ವರಗಳಿಗಿಂತ ಕೆಟ್ಟ ್ವರವು ಕತ್ತೆಯ ಸ್ವರವಾಗಿರುತ್ತದೆ."**

(ಪವಿತ್ರ ಕುರ್‌ಆನ್, 31 : 18-19)

"ಅಲ್ಲಾಹನ ಇಷ್ಟ ದಾಸರು ಭೂಮಿಯ ಮೇಲೆ ವಿನಯದಿಂದ ನಡೆಯುತ್ತಾರೆ."

(ಪವಿತ್ರ ಕುರ್‌ಆನ್, 25 : 63)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ನೀವು ಪರಸ್ಪರ ಅನ್ಯಾಯವೆಸಗದೆ, ಅಹಂಕಾರ ೋರಿಸದೆ, ಪರಸ್ಪರ ವಿನಯಶೀಲರಾಗಿರಬೇಕೆಂದು ಅಲ್ಲಾಹನು ನನಗೆ ಉಪದೇಶಿಸಿದ್ದಾನೆ."

(ಮುಸ್ಲಿಮ್)

"ತನ್ನ ಮುಸ್ಲಿಮ್ ಸಹೋದರನೊಡನೆ ವಿನಯ ತೋರುವಾತನನ್ನು ಅಲ್ಲಾಹನು ುನ್ನತಗೊಳಿಸಿ, ಆತನೊಡನೆ ಉದ್ಧಟತನದಿಂದ ವರ್ತಿಸುವವನನ್ನು ಅವನತಿಗಿಳಿಸುತ್ತಾನೆ."

(ತಬ್ರಾನಿ)

"ದಾನದಿಂದ ಸಂಪತ್ತು ಕಡಿಮೆಯಾಗುವುದಿಲ್ಲ. ಔದಾರ್ಯವು ದಾಸನ ಪ್ರತಿಷ್ಠೆಯನ್ನು ೆಚ್ಚಿಸುತ್ತದೆ. ಅಲ್ಲಾಹನಿಗಾಗಿ ವಿನಯ ತೋರುವಾತನನ್ನು ಆತನು ಉನ್ನತಗೊಳಿಸುತ್ತಾನೆ."

(ಮುಸ್ಲಿಮ್)

ಪ್ರವಾದಿಯವರು(ಸ) ಅತ್ಯಂತ ವಿನಯಶೀಲರಾಗಿದ್ದರೆಂದು ಚರಿತ್ರೆಯಿಂದ ವ್ಯಕ್ತವಾಗು ್ತದೆ. ಜನರ ಮಧ್ಯೆ ಗುರುತಿಸಲಾಗದ ರೀತಿಯಲ್ಲಿ ಅವರು ಬೆರೆತು ಬಾಳುತ್ತಿದ್ದರು. ನಾನು ಾರುವಾಗ ಎದ್ದು ನಿಲ್ಲಬಾರದೆಂದು ಕಟ್ಟುನಿಟ್ಟಾಗಿ ಆದೇಶಿಸಿದ ಪ್ರವಾದಿಯವರು(ಸ) ಿತರರೊಂದಿಗೆ ಸಾಮಾನ್ಯ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದರು. ಯುದ್ಧವೇಳೆಯಲ್ಲಿ ಅವರು ಅನುಯಾಯಿಗಳ ಜತೆಯಲ್ಲಿ ಕಂದಕ ತೋಡಿದರು. ಪ್ರಯಾಣದ ಸಂದರ್ಭದಲ್ಲಿ ಅಡುಗೆಗಾಗಿ

ಸೌದೆ ಸಂಗ್ರಹಿಸಿದರು. ಎಲ್ಲ ವಿಷಯಗಳ ಬಗ್ಗೆಯೂ ಅನುಯಾಯಿಗಳೊಂದಿಗೆ ಸಮಾಲೋಚ ನಡೆಸುತ್ತಿದ್ದರು. ಅವರ ಅಭಿಪ್ರಾಯ ಸಲಹೆಗಳಿಗೆ ಸೂಕ್ತ ಪ್ರಾಮುಖ್ಯ ಮತ್ತು ಗಮ ನೀಡುತ್ತಿದ್ದರು.

ಔದಾರ್ಯ

ಔದಾರ್ಯವು ಮಾನವನ ಅತಿ ವಿಶಿಷ್ಟ ಗುಣ ನಡತೆಗಳಲ್ಲೊಂದಾಗಿದೆ. ಅ ವಿಜಯದ ಬಾಗಿಲುಗಳನ್ನು ತೆರೆಯುತ್ತದೆ. ವಿರೋಧಿಗಳ ದೇಹದೊಂದಿಗೆ ಮನಸ್ಸನ ಸೆಳೆಯುತ್ತದೆ. ದೂರವಾದವರನ್ನು ಹತ್ತಿರಗೊಳಿಸುತ್ತದೆ. ವೈರಿಗಳನ್ನು ಮಿತ್ರರಾಗಿಸುತ್ತ ಪರಾಕ್ರಮಿಗಳಲ್ಲಿಯೂ ಪಾವಿತ್ರ್ಯವನ್ನು ಬೆಳೆಸುತ್ತದೆ. ಮರ್ದಕರನ್ನು ಮಾನ ಪ್ರೇಮಿಗಳನ್ನಾಗಿಯೂ ಕ್ರೂರಿಗಳನ್ನು ಕರುಣಾಳುಗಳನ್ನಾಗಿಯೂ ಮಾಡುತ್ತದೆ.

ಅಕ್ರಮವನ್ನು ಆಯುಧದಿಂದ ಸೋಲಿಸಬಹುದೆಂದು ಬಯಸುವುದು ಸರಿಯಲ ಅನಾಗರಿಕ ಪ್ರತೀಕಾರವು ಪರಾಕ್ರಮದ ಹೊಸ ಪರಂಪರೆಗಳಿಗೆ ಕಾರಣವಾಗುತ್ತದೆ. ಕತ್ತಲೆಯನ ಕತ್ತಲೆಯಿಂದ ಹೋಗಲಾಡಿಸಲು ಸಾಧ್ಯವಿಲ್ಲ. ಕೆಡುಕನ್ನು ಕೆಡುಕಿನಿಂದ ತಡೆಯಬೇಕೆಂ ಸಿದ್ಧಾಂತವು ವಿವೇಕಯುತವಲ್ಲ. ಖಡ್ಗವನ್ನು ವಿನಯ ಮತ್ತು ಔದಾರ್ಯದಿಂದ ಗೆಲ್ಲುವವ ವಿವೇಕಶಾಲಿಗಳು. ಮರ್ದಕನ ಮನಃಪರಿವರ್ತನೆಗೆ ಪೀಡಿತನ ಪ್ರತೀಕಾರಕ್ಕಿಂತ ಕ್ಷಮಿಸುವು ಉಪಯುಕ್ತವಾಗಿದೆ. ಆದ್ದರಿಂದಲೇ ಇಸ್ಲಾಮ್ ಔದಾರ್ಯಕ್ಕೆ ಬಹಳ ಮಹತ್ವ ನೀಡಿ ಅಲ್ಲಾಹನು ಹೀಗೆ ಹೇಳುತ್ತಾನೆ,

"ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾ ಬಿಡುವುದನ್ನು ನೀವು ಕಾಣುವಿರಿ. ಈ ಗುಣವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗ ಪ್ರಾಪ್ತವಾಗುವುದಿಲ್ಲ."

(ಪವಿತ್ರ ಕುರ್‌ಆನ್, 41:34-3

"ಕ್ಷಮಾಶೀಲರಾಗಿರಿ, ಸರ್ವವಿಧಿತ ಒಳಿತುಗಳನ್ನು ಬೋಧಿಸಿರಿ ಮತ್ತು ತಿಳಿಗೇಡಿಗಳೊಡ ಜಗಳಾಡಬೇಡಿರಿ."

(ಪವಿತ್ರ ಕುರ್‌ಆನ್, 7:19

"ವಿಶ್ವಾಸಿಗಳು ಕ್ಷಮಿಸಬೇಕು ಮತ್ತು ಔದಾರ್ಯ ತೋರಿಸಬೇಕು. ಅಲ್ಲಾಹನ ನಿಮ್ಮನ್ನು ಕ್ಷಮಿಸಬೇಕೆಂದು ನೀವು ಬಯಸುವುದಿಲ್ಲವೇ? ಅಲ್ಲಾಹನು ಅತ್ಯಂತ ಕ್ಷಮಾಶೀಲನ ಕರುಣಾಳುವೂ ಆಗಿದ್ದಾನೆ." (ಪವಿತ್ರ ಕುರ್‌ಆನ್, 24:2

"ಅವರು ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ತಪ್ಪುಗಳನ್ನು ಕ್ಷಮಿಸುತ್ತಾ ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವರು."

(ಪವಿತ್ರ ಕುರ್‌ಆನ್, 3:13

"ತೀರ್ಮಾನದ ದಿನವು ಖಂಡಿತವಾಗಿಯೂ ಬರಲಿದೆ. ಆದುದರಿಂದ ಓ ಪೈಗಂಬರರೇ! ವು ಸೌಜನ್ಯಪೂರ್ಣ ಕ್ಷಮೆಯೊಂದಿಗೆ ವರ್ತಿಸಿರಿ."

(ಪವಿತ್ರ ಕುರ್‌ಆನ್, 15:85)

ಪ್ರವಾದಿಯವರ(ಸ) ಔದಾರ್ಯವು ಪ್ರಸಿದ್ಧವಾಗಿದೆ. ಕ್ರೂರವಾಗಿ ವರ್ತಿಸಿದವರು ಮತ್ತು ಲ್ಲಲು ಪ್ರಯತ್ನಿಸಿದ್ದವರೊಡನೆಯೂ ಅವರು ಔದಾರ್ಯ ತೋರಿಸಿದ್ದಾರೆ. ವಿಶ್ವಾಸಿಗಳು ನೇ ನೀತಿಯನ್ನು ಅವಲಂಬಿಸಬೇಕೆಂದು ಒತ್ತಾಯಿಸಿದ್ದರು. ಪ್ರವಾದಿಯವರು(ಸ) ಹೇಳಿದ್ದಾರೆ, ವಿವೇಕ ತೋರಿಸುವವನೊಡನೆ ವಿವೇಕದಿಂದ ವರ್ತಿಸಬೇಕು ಅನ್ಯಾಯವೆಸಗಿದವರೊಡನೆ ದಾರ್ಯ ತೋರಬೇಕು. ನಷ್ಟಗೊಳಿಸಿದವನಿಗೆ ನೀಡಬೇಕು. ಸಂಬಂಧ ಕಡಿದವರೊಡನೆ ಬಂಧ ಜೋಡಿಸಬೇಕು."

(ತಬ್ರಾನಿ)

ೋಪದ ನಿಯಂತ್ರಣ

ಕೋಪವು ಸಾಮಾಜಿಕ ಜೀವನವನ್ನು ಕಲುಷಿತಗೊಳಿಸುವ ನಿಟ್ಟಿನಲ್ಲಿ ಪ್ರಧಾನ ತ್ರವಹಿಸುವ ದುರ್ಗುಣಗಳಲ್ಲಿ ಒಂದಾಗಿದೆ. ಹೆಚ್ಚಿನವರು ಚಿಕ್ಕ ಪುಟ್ಟ ವಿಷಯಗಳಿಗಾಗಿ ೋಪಿಸುತ್ತಾರೆ, ಸ್ವತಃ ಮೈ ಮರೆಯುತ್ತಾರೆ. ಆಲೋಚನಾ ಶಕ್ತಿಯನ್ನು ಕಳೆದು ಕೊಳ್ಳುತ್ತಾರೆ. ದುಳು ಮರಗಟ್ಟುತ್ತದೆ. ವಿವೇಚನಾ ಶಕ್ತಿ ನಾಶವಾಗುತ್ತದೆ. ವಿವೇಕವು ವಿಕಾರಕ್ಕೆ ಣೆಯುತ್ತದೆ. ಹೀಗೆ ಅವರು ಹುಚ್ಚು ಹಿಡಿದವರಂತೆ ಬಯ್ಯುತ್ತಾರೆ. ನ್ಯಾಯ-ಅನ್ಯಾಯಗಳನ್ನು ಮನಿಸದೆ ಏನೆಲ್ಲಾ ಮಾಡುತ್ತಾರೆ. ಹಿತ-ಅಹಿತಗಳನ್ನು ಲೆಕ್ಕಿಸದೆ ಗಲಭೆ-ಗೊಂದಲಗಳನ್ನು ಟ್ಟು ಹಾಕುತ್ತಾರೆ. ಹೀಗೆ ಸಮಾಜದಲ್ಲಿ ಅಪಾರ ಕಷ್ಟ ನಷ್ಟಗಳಿಗೆ ಕಾರಣರಾಗುತ್ತಾರೆ. ದ್ದರಿಂದ ಇಸ್ಲಾಮ್, ಕೋಪವನ್ನು ನಿಯಂತ್ರಿಸುವಂತೆ ಬಲವಾಗಿ ಆದೇಶಿಸಿದೆ.

"ಸತ್ಯವಿಶ್ವಾಸಿಗಳು ಮಹಾ ಪಾಪ ಮತ್ತು ದುರ್ನಡತೆಗಳಿಂದ ದೂರವಿರುವವರೂ ೋಪ ಬಂದಾಗ ಸಹನೆ ಪಾಲಿಸುವವರೂ ಆಗಿದ್ದಾರೆ."

(ಪವಿತ್ರ ಕುರ್‌ಆನ್, 42:37)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಮಲ್ಲ ಯುದ್ಧದಲ್ಲಿ ಗೆಲ್ಲುವವನು ವೀರನಲ್ಲ, ೋಪ ಬಂದಾಗ ತನ್ನನ್ನು ನಿಯಂತ್ರಿಸಬಲ್ಲವನೇ ವೀರ." (ಬುಖಾರಿ, ಮುಸ್ಲಿಮ್)

"ಕೋಪದಿಂದ ವರ್ತಿಸಲು ಸಾಧ್ಯವಿದ್ದರೂ ತಾಳ್ಮೆ ವಹಿಸಿದವನನ್ನು ಅಲ್ಲಾಹನು ೦ತಿಮ ದಿನದಲ್ಲಿ ಎಲ್ಲರ ಸಮ್ಮುಖದಲ್ಲಿ ಕರೆದು ತನಗೆ ಇಷ್ಟವಿರುವ ಕನ್ಯೆಯನ್ನು ಮ್ಮಿಕೊಳ್ಳುವ ಅವಕಾಶ ನೀಡುತ್ತಾನೆ."

(ಅಬೂದಾವೂದ್, ತಿರ್ಮಿದಿ)

"ಅಲ್ಲಾಹನು ಹೀಗೆ ತಿಳಿಸಿರುತ್ತಾನೆ, ಕೋಪ ಬಂದಾಗ ನನ್ನನ್ನು ಜ್ಞಾಪಿಸುವಾತನನ್ನು ನಗೆ ಕೋಪ ಬಂದಾಗ ನಾನು ಜ್ಞಾಪಿಸುತ್ತೇನೆ. ಆತನನ್ನು ನಾನು ನನ್ನ ಅನುಗ್ರಹದಿಂದ ೨ರವಿರಿಸುವವರ ಜತೆ ಸೇರಿಸುವುದಿಲ್ಲ."

(ದೈಲಮಿ)

"ನಿಮ್ಮ ಪೈಕಿ ಯಾರಾದರೂ ಕೋಪಬಂದರೆ ಮೌನಪಾಲಿಸಬೇಕು." (ಅಹ್ಮ

ಒಬ್ಬರು ಪ್ರವಾದಿಯವರ(ಸ) ಬಳಿ ಬಂದು ಉಪದೇಶ ಕೇಳಿದರು, ಆಗ ಅ ಹೇಳಿದರು, "ನೀವು ಕೋಪಿಸಬಾರದು." ಪುನಃ ಉಪದೇಶಿಸುವಂತೆ ಹೇಳಿದಾಗ ಪ್ರವಾದಿ ಅದನ್ನೇ ಪುನರಾವರ್ತಿಸಿದರು. (ಬುಖ

ನಾಲಗೆಯ ಹತೋಟಿ

ಸ್ವಾಭಿಮಾನವು ಅಮೂಲ್ಯವಾಗಿದೆ. ಅದಕ್ಕೆ ಹಾನಿಯುಂಟು ಮಾಡುವುದನ್ನು ಯಾ ಮೆಚ್ಚುವುದಿಲ್ಲ. ಅಭಿಮಾನ ರಕ್ಷಣೆಗಾಗಿ ಪ್ರಾಣವನ್ನೇ ತ್ಯಜಿಸಲು ಸಿದ್ಧರಾಗುವವರಿದ್ದಾ ಪರರ ಮುಂದೆ ಅವಮಾನಿತರಾಗುವುದು ಸ್ವಾಭಿಮಾನಿಗಳಿಗೆ ದೇಹದ ಒಂದು ಅವಯವವ ಕಳೆದುಕೊಂಡಂತೆಯೇ ಅಸಹನೀಯವಾಗಿರುತ್ತದೆ.

ಪರರ ಅಭಿಮಾನಕ್ಕೆ ಧಕ್ಕೆಯುಂಟು ಮಾಡುವುದು ಅವರ ಹಣವನ್ನು ಅಪಹರಿಸಿದ್ದಕ್ಕಿ ಕೆಟ್ಟ ಕೃತ್ಯ ಮತ್ತು ಅಕ್ಷಮ್ಯ ಪಾಪವಾಗಿದೆ. ಅಕ್ರಮದಿಂದ ಸಂಪಾದಿಸಿದ ಹಣವನ್ನು ಅ ಹಕ್ಕುದಾರರಿಗೆ ಮರಳಿಸಲು ಸಾಧ್ಯವಿದೆ. ಆದರೆ, ಜನರ ಮಧ್ಯೆ ಒಬ್ಬನನ್ನು ಅಪಮಾನಿಸಿ ಅದರ ಅಪಾಯಕಾರೀ ದುಷ್ಪರಿಣಾಮಗಳನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬ ದಿಂದಾಗುವ ಗಾಯಗಳು ಕ್ರಮೇಣವಾದರೂ ವಾಸಿಯಾಗಬಹುದು. ಆದರೆ ಮಾತಿನಿಂದಾಗ ಗಾಯವು ಎಂದಿಗೂ ವಾಸಿಯಾಗುವುದಿಲ್ಲ. ಆದ್ದರಿಂದ, ಇತರರ ಅಭಿಮಾನಕ್ಕೆ ಹ ತಟ್ಟಿಸಬಾರದೆಂದು ಪ್ರವಾದಿ(ಸ) ಒತ್ತಿ ಹೇಳಿದ್ದಾರೆ, "ಜನರ ಪ್ರಾಣ, ಸೊತ್ತು ಮ ಅಭಿಮಾನವನ್ನು ಹಾನಿಗೊಳಿಸದಾತನೇ ಮುಸ್ಲಿಮ್."

ಇದಕ್ಕೆ ನಾಲಗೆಯ ಹತೋಟಿಯು ಅನಿವಾರ್ಯವಾಗಿದೆ. ಪ್ರವಾದಿ(ಸ) ಹೇಳಿದ "ಹೃದಯವು ಸರಿಯಾಗದವನ ಧರ್ಮವು ಉತ್ತಮವಾಗಲಾರದು. ನಾಲಗೆಯು ಸರಿಯಾ ಹೃದಯವು ಸರಿಯಾಗಲಾರದು."

(ಅಹ್ಮ

"ಮೌನ ಪಾಲಿಸಿರಿ ಪಿಶಾಚಿಯನ್ನು ದೂರವಿರಿಸಲು ಅದು ಅತ್ಯುತ್ತಮವಾಗಿದೆ."

(ಅಹ್ಮ

"ಕೆಟ್ಟ ಮಾತಿನಿಂದಾಗಿ ಇತರರ ಸಂಬಂಧವನ್ನು ಕಡಿದು ಕೊಂಡಾತನು ಅಂತಿ ದಿನದಲ್ಲಿ ಅಲ್ಲಾಹನ ಬಳಿ ಅತ್ಯಂತ ನೀಚನಾಗಿರುತ್ತಾನೆ."

(ಬುಖ

"ವಾಗ್ವಾದ ನಡೆಸುವ ಕಲಹ ಪ್ರಿಯರಾದ ಮಂದಿಯು ಅಲ್ಲಾಹನ ದ್ವೇ ಪಾತ್ರರಾಗುತ್ತಾರೆ."

(ಬುಖ

"ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿರಿಸುವವರು ಸವಿ ನುಡಿಯ ಅನ್ಯಥಾ ಮೌನ ಪಾಲಿಸಲಿ." (ಬುಖಾರಿ, ಮುಸ್ಲಿ

ಗೇಲಿ ಮತ್ತು ಪರನಿಂದೆ

ಇಸ್ಲಾಮ್, ಮನಸ್ಸು ಮತ್ತು ಆತ್ಮವನ್ನು ದೇಹದಂತೆಯೇ ಪರಿಗಣಿಸುತ್ತದೆ. ಅದರ ದೃಷ್ಟಿಯಲ್ಲಿ ಗೌರವಕ್ಕೆ ಹಾನಿಯುಂಟು ಮಾಡುವುದು ದೈಹಿಕ ಹಿಂಸೆಯಂತೆಯೇ ಮಹಾ ಅಪರಾಧವಾಗಿದೆ.

"ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಅಪಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು ಮತ್ತು ಸ್ತ್ರೀಯರು ಇತರ ಸ್ತ್ರೀಯರನ್ನೂ ಅಪಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು. ಪರಸ್ಪರರನ್ನು ನಿಂದಿಸಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ. ಸತ್ಯ ವಿಶ್ವಾಸ ಸ್ವೀಕರಿಸಿದ ಬಳಿಕ ಕರ್ಮಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು. ಈ ಚಾಳಿಯನ್ನು ತೊರೆಯದವರು ಅಕ್ರಮಿಗಳಾಗಿರುವರು."

(ಪವಿತ್ರ ಕುರ್‌ಆನ್, 49:11)

"ಸತ್ಯವಿಶ್ವಾಸಿಗಳೇ, ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಮಾಡದಿರಿ. ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು. ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟ ಪಡುವನೇ. ನೀವು ಸ್ವತಃ ಇದನ್ನು ಅಸಹ್ಯ ಪಡುತ್ತೀರಿ. ಅಲ್ಲಾಹನನ್ನು ಭಯಪಡಿರಿ, ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್, 49:12)

"ಜನರನ್ನು ಗೇಲಿಮಾಡುವ ಮತ್ತು ಬೆನ್ನ ಹಿಂದೆ ದೂಷಿಸುವ ಎಲ್ಲರಿಗೂ ಘೋರ ವಿನಾಶವಿದೆ."

(ಪವಿತ್ರ ಕುರ್‌ಆನ್, 104:1)

"ಅತ್ಯಧಿಕ ಆಣೆ ಹಾಕುವ ನೀಚ ವ್ಯಕ್ತಿಗೆ ಎಷ್ಟು ಮಾತ್ರಕ್ಕೂ ಮಣಿಯಬೇಡಿರಿ. (ಅವನು) ಮೂದಲಿಸುತ್ತಾನೆ, ಚಾಡಿ ಹೇಳುತ್ತಾ ತಿರುಗುತ್ತಾನೆ."

(ಪವಿತ್ರ ಕುರ್‌ಆನ್, 68:10-11)

ಹೀಗೆ ಮಾನವ ಮನಸ್ಸನ್ನು ನೋಯಿಸಿ ಮಾನ ಭಂಗಗೊಳಿಸುವ ಎಲ್ಲವನ್ನೂ ಇಸ್ಲಾಮ್ ನಿಷೇಧಿಸಿತು. ಪ್ರವಾದಿ(ಸ) ಹೇಳಿದ್ದಾರೆ, "ಚುಚ್ಚು ಮಾತು ಹೇಳುವವನು, ಶಪಿಸುವವನು, ಬಯ್ಯುವವನು ಮತ್ತು ಅಶ್ಲೀಲತೆಯನ್ನು ಹಬ್ಬಿಸುವವನು ಸತ್ಯವಿಶ್ವಾಸಿಯಲ್ಲ." (ತಿರ್ಮಿದಿ)

"ಸತ್ಯನಿಷ್ಠನಿಗೆ ಶಪಿಸುವವನಾಗಲು ಸರ್ವಥಾ ಸಾಧ್ಯವಿಲ್ಲ." (ಮುಸ್ಲಿಮ್) ಅಬೂ ಮೂಸಾ(ರ) ಪ್ರವಾದಿಯವರೊಡನೆ(ಸ) ಮುಸ್ಲಿಮರಲ್ಲಿ ಅತ್ಯಂತ ಶ್ರೇಷ್ಠನು ಯಾರೆಂದು ವಿಚಾರಿಸಿದಾಗ ಅವರು ಹೀಗೆ ಉತ್ತರಿಸಿದರು, "ಯಾರ ಕೈ ಮತ್ತು ನಾಲಗೆಯಿಂದ ಮುಸ್ಲಿಮನು ಸುರಕ್ಷಿತನಾಗಿರುತ್ತಾನೋ ಆತನೇ ಅತ್ಯಂತ ಶ್ರೇಷ್ಠನು." (ಬುಖಾರಿ, ಮುಸ್ಲಿಮ್)

ಪ್ರವಾದಿಯವರು(ಸ) ಹೀಗೆ ತಿಳಿಸಿದ್ದಾರೆ, "ಪರಸ್ಪರ ಬೈದಾಡುವವರು ಹೇಳುವ ಮಾತಿ ಪಾಪವು ಅದನ್ನು ಆರಂಭಿಸಿದವನ ಮೇಲಿದೆ, ಮರ್ದಿತನು ಮಿತಿ ಮೀರದಿರುವ ತನಕ.

(ಮುಸ್ಲಿಮ್

"ನೀನು ನಿನ್ನ ಸಹೋದರನ ಸಂಕಷ್ಟಕ್ಕಾಗಿ ಸಂತೋಷ ಪಡಬಾರದು. ಹಾಗೆ ಮಾಡಿದ ಅಲ್ಲಾಹನು ಆತನಿಗೆ ಅನುಗ್ರಹ ದಯಪಾಲಿಸಿ ನಿನ್ನನ್ನು ಪರೀಕ್ಷೆಗೊಳಪಡಿಸಬಹುದು."

(ತಿರ್ಮಿ

"ನೀವು ತಪ್ಪು ತಿಳುವಳಿಕೆಗಳ ಬಗ್ಗೆ ಎಚ್ಚರ ವಹಿಸಿರಿ. ನಿಜವಾಗಿಯೂ ತಪ್ಪು ತಿಳುವಳಿಕೆಯ ಮಾತುಕತೆಯು ಬರೀ ಸುಳ್ಳಾಗಿದೆ. ನೀವು ಪರಸ್ಪರ ಬೇಹುಗಾರಿಕೆ ನಡೆಸಬಾರದು ವಂಚನೆ ಮಾಡಬಾರದು, ಹಗೆತನವಿರಿಸಬಾರದು. ಒಬ್ಬನ ಅನುಪಸ್ಥಿತಿಯಲ್ಲಿ ಅವನನ್ ದೂಷಿಸಬಾರದು. ಅಲ್ಲಾಹನ ದಾಸರೇ, ಅಲ್ಲಾಹನು ಆಜ್ಞಾಪಿಸಿರುವಂತೆ ಪರಸ್ಪ ಸಹೋದರತೆಯಿಂದ ವರ್ತಿಸಿರಿ. ಮುಸ್ಲಿಮರು ಪರಸ್ಪರ ಸಹೋದರರಾಗಿದ್ದಾರೆ. ಆದ್ದರಿಂ ಆತನಿಗೆ ಅನ್ಯಾಯವೆಸಗಬಾರದು. ಆತನನ್ನು ಅಪಹಾಸ್ಯ ಮಾಡಬಾರದು, ವಂಚಿಸಬಾರದು.

(ಮುಸ್ಲಿಮ್

"ಇತರರ ಮಾತುಗಳನ್ನು ಅವರಿಗೆ ಇಷ್ಟವಿಲ್ಲದೆ ಯಾರಾದರೂ ಕದ್ದು ಆಲಿಸಿದ ಅಂತಿಮ ದಿನದಲ್ಲಿ ಆತನ ಎರಡು ಕಿವಿಗಳಿಗೂ ಕರಗಿಸಿದ ಸೀಸವನ್ನು ಸುರಿಯಲಾಗುವುದು.

(ಬುಖಾರಿ

ಅಬೂಹುರೈರಾರಿಂದ(ರ) ವರದಿ: "ಪರನಿಂದೆ ಏನೆಂದು ನಿಮಗೆ ತಿಳಿದಿದೆಯೇ? ಪ್ರವಾದಿ(ಸ) ಕೇಳಿದರು,

"ಅಲ್ಲಾಹ್ ಮತ್ತು ಆತನ ಪ್ರವಾದಿಯೇ ಚೆನ್ನಾಗಿ ಬಲ್ಲರು" ಅವರು ಹೇಳಿದರು

"ನಿನ್ನ ಸಹೋದರನಿಗೆ ಇಷ್ಟವಿಲ್ಲದ ಮಾತುಗಳನ್ನು ಹೇಳುವುದೇ ಪರನಿಂದೆಯಾಗಿದೆ ಎಂದು ಅವರು ತಿಳಿಸಿದರು. "ನಾನು ಹೇಳಿದಂತಹ ವಿಷಯಗಳು ಒಂದು ವೇ ಸಹೋದರನಲ್ಲಿದ್ದರೆ ಅದು ಪರನಿಂದೆಯಾಗುವುದೇ?" ಎಂದು ಓರ್ವರು ವಿಚಾರಿಸಿದರು

"ಆತನಲ್ಲಿರುವುದನ್ನು ನೀವು ಹೇಳಿದರೆ ಅದು ಆತನ ಮಟ್ಟಿಗೆ ಪರನಿಂದೆಯಾಗಿದೆ ಇಲ್ಲದಿದ್ದರೆ ಸುಳ್ಳು ಸೃಷ್ಟಿಸಿ ಹೇಳಿದಂತಾಗುವುದು." (ಮುಸ್ಲಿಮ್

ಅಬೂ ಹುದೈಫಾ(ರ) ವರದಿ ಮಾಡಿದ್ದಾರೆ, "ಪರನಿಂದಕನು ಸ್ವರ್ಗದಲ್ಲಿ ಪ್ರವೇಶಿಸುವುದಿಲ್ಲವೆಂದು ಪ್ರವಾದಿ(ಸ) ಹೇಳಿದ್ದಾರೆ."

(ಬುಖಾರಿ, ಮುಸ್ಲಿಮ್

ಪ್ರವಾದಿ(ಸ) ಹೇಳಿದ್ದಾರೆ, "ತನ್ನ ಸಹೋದರನ ಮಾನವನ್ನು ಆತನ ಅನುಪಸ್ಥಿತಿಯಲ್ಲಿ ಸಂರಕ್ಷಿಸುವಾತನನ್ನು ನರಕದಿಂದ ವಿಮೋಚನೆಗೊಳಿಸುವುದು ಅಲ್ಲಾಹನ ಹೊಣೆಯಾಗಿದೆ.'

(ಅಹ್ಮದ್

ಇಬ್ನು ಅಬ್ಬಾಸ್(ರ) ವರದಿ ಮಾಡಿದ್ದಾರೆ: "ಪರನಿಂದೆಯು ಉಪವಾಸಿಗನ ವ್ರತ ಭಂಗಗೊಳಿಸುತ್ತದೆ."

ಅಬೂಹುರೈರಾ(ರ) ವರದಿ ಮಾಡಿದ್ದಾರೆ: ಪ್ರವಾದಿಯವರು(ಸ) ಹೇಳಿದ್ದಾರೆ, "ಓರ್ವ ಶ್ವಾಸಿಯು ಬೇರೊಬ್ಬ ಸತ್ಯವಿಶ್ವಾಸಿಯೊಡನೆ ಮೂರು ದಿನಕ್ಕಿಂತ ಹೆಚ್ಚು ಕೋಪಿಸಿರಬಾರದು. ರು ದಿನ ಕಳೆದರೆ ಆತನನ್ನು ಭೇಟಿಯಾಗಿ ಅಭಿನಂದಿಸಬೇಕು. ಪ್ರತಿ ಅಭಿನಂದಿಸಿದರೆ ರೂ ಪುಣ್ಯದಲ್ಲಿ ಸಹಭಾಗಿಯಾಗುತ್ತಾರೆ. ಅಥವಾ ಅಭಿನಂದನೆಗೆ ರಿಸದಿದ್ದರೆ, ಉತ್ತರಿಸದಾತನು ಪಾಪಿಯಾಗಿ ಇನ್ನೊಬ್ಬನು ದೂರವುಳಿದ ಅಪರಾಧದಿಂದ ನಾಗುತ್ತಾನೆ."

(ಅಬೂದಾವೂದ್)

ಅಬೂಹುರೈರಾ(ರ) ವರದಿ ಮಾಡಿದ್ದಾರೆ: ಪ್ರವಾದಿಯವರು(ಸ) ಹೇಳಿದ್ದಾರೆ, "ಓರ್ವ ಮನು ತನ್ನ ಸಹೋದರನ ಜತೆ ಮೂರು ದಿನಕ್ಕಿಂತ ಹೆಚ್ಚು ಕೋಪಿಸಿರಬಾರದು. ರು ದಿನಕ್ಕಿಂತ ಹೆಚ್ಚು ಅಗಲಿರುವವನು ಮರಣ ಹೊಂದಿದರೆ ಅದರಿಂದಾಗಿ ನರಕದಲ್ಲಿ ಶಿಸುತ್ತಾನೆ."

(ಅಬೂದಾವೂದ್)

ತನ್ನ ಸಹೋದರನಿಂದ ಕೋಪಿಸಿ ದೂರವಿರುವುದು ನರಕ ಪ್ರವೇಶಕ್ಕೆ ಕಾರಣವಾಗು ಂಬ ಈ ಪ್ರವಾದಿ ವಚನದಿಂದ ಮಾನವೀಯ ಸಂಬಂಧಕ್ಕೆ ಇಸ್ಲಾಮ್ ನೀಡುವ ಾನ್ಯತೆ ವ್ಯಕ್ತವಾಗುತ್ತದೆ.

ೀಸ ಮತ್ತು ವಂಚನೆ

ಮೋಸ, ವಂಚನೆ ಇತ್ಯಾದಿ ಪರಹಿಂಸೆಯ ನಡವಳಿಕೆಯನ್ನು ಇಸ್ಲಾಮ್ ಬಲವಾಗಿ ೇಧಿಸುತ್ತದೆ.

"ಸತ್ಯವಿಶ್ವಾಸಿಗಳೇ, ನೀವು ತಿಳುವಳಿಕೆಯಿರುತ್ತಾ ಅಲ್ಲಾಹ್ ಮತ್ತು ಆತನ ಪ್ರವಾದಿಯನ್ನು ಸಬೇಡಿರಿ. ಹಾಗೆಯೇ ನಿಮ್ಮ ಬಳಿಯಿರುವ ಅಮಾನತ್(ವಿಶ್ವಸ್ಥ ನಿಧಿ)ಗಳಲ್ಲಿಯೂ ಸ ಮಾಡಬೇಡಿರಿ." (ಪವಿತ್ರ ಕುರ್‌ಆನ್, 8:27)

ಮಾನವರನ್ನು ವಂಚಿಸುವುದು ಅಲ್ಲಾಹನೊಂದಿಗಿನ ವಂಚನೆಯಂತೆಯೇ ಗಂಭೀರ ನೆ. ಅಲ್ಲಾಹನು ಹೀಗೆ ಹೇಳಿದ್ದಾನೆ, "ಅಲ್ಲಾಹನೊಡನೆ ದೃಢ ಕರಾರು ಮಾಡಿದ ಬಳಿಕ ನ್ನ ಉಲ್ಲಂಘಿಸುವವರು, ಅಲ್ಲಾಹನು ಬೆಸೆಯಲು ಹೇಳಿರುವುದನ್ನು ಕಡಿಯುವವರು ತ್ತು ಭೂಮಿಯಲ್ಲಿ ಕ್ಷೋಭೆ ಹಬ್ಬಿಸುವವರೇ ನಿಜವಾಗಿ ನಷ್ಟಕ್ಕೊಳಗಾಗುವವರು."

(ಪವಿತ್ರ ಕುರ್‌ಆನ್, 2:27)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ನಾಲ್ಕು ವಿಷಯಗಳು ಯಾರಲ್ಲಿವೆಯೋ ಆತ ಅಪ್ಪಟ ವಿಶ್ವಾಸಿಯಾಗಿದ್ದಾನೆ. ಆ ಪೈಕಿ ಯಾವುದಾದರೊಂದು ಒಬ್ಬನಲ್ಲಿದ್ದರೆ ಅದನ್ನು ಯುವ ತನಕ ಆತನಲ್ಲಿ ಕಾಪಟ್ಯದ ಒಂದಂಶವಿರುತ್ತದೆ. ನಂಬಿದರೆ ಮೋಸ ಮಾಡುವುದು,

ಮಾತಾಡಿದರೆ ಸುಳ್ಳು ಹೇಳುವುದು, ಒಪ್ಪಂದ ಮಾಡಿದರೆ ಮುರಿಯುವುದು, ಜಗಳಾ ಬಯ್ಯುವುದು."

(ಬುಖಾರಿ, ಮುಃ

ಪ್ರವಾದಿಯವರು(ಸ) ಹೀಗೆ ಹೇಳಿದ್ದಾರೆ: ಅಲ್ಲಾಹನು ತಿಳಿಸಿದ್ದಾನೆ, "ಅ ದಿನದಲ್ಲಿ ನಾನು ಮೂವರ ವೈರಿಯಾಗಿರುತ್ತೇನೆ. ನನ್ನ ಹೆಸರಲ್ಲಿ ಒಪ್ಪಂದ ಮಾಡಿ ಅ ಅದನ್ನು ಪಾಲಿಸದವನು, ಸ್ವತಂತ್ರನನ್ನು ಮಾರಿ ಅದರ ಬೆಲೆಯನ್ನು ತಿನ್ನುವ ಕಾರ್ಮಿಕರನ್ನು ನೇಮಿಸಿ ಚೆನ್ನಾಗಿ ದುಡಿಸಿ ಸರಿಯಾಗಿ ವೇತನ ನೀಡದವನು."

(ಬು

ಅವರು(ಸ) ಹೀಗೆ ಹೇಳಿದ್ದಾರೆ: "ಕುತಂತ್ರ, ಮೋಸ, ವಂಚನೆಯು ನರಕ ಸೇರುವ

(ಅಬೂದಾ

"ಸತ್ಯವಿಶ್ವಾಸಿಯು ಸಂಪೂರ್ಣವಾಗಿ ಸದ್ಗುಣದಲ್ಲಿ ನಿರ್ಮಿಸಲ್ಪಟ್ಟಿದ್ದಾನೆ. ಸುಳ್ಳು ವಂಚನೆಯಿಂದ ನಿರ್ಮಿಸಲ್ಪಟ್ಟವನಲ್ಲ."

(ಅ

ಮಾನವರ ಮಧ್ಯೆ ಐಕ್ಯ ಮತ್ತು ಸಾಮರಸ್ಯಕ್ಕಾಗಿ, ಕಟುವಾಗಿ ನಿಷೇಧಿಸಲಾದ ಕೂಡಾ ಧರ್ಮಸಮ್ಮತವೆಂದು ಪ್ರವಾದಿಯವರು(ಸ) ಹೇಳಿದ್ದಾರೆ.

ಉಮ್ಮು ಕುಲ್ಸೂಮ್‌ರಿಂದ(ರ) ವರದಿಯಾಗಿದೆ: "ಜನರ ಮಧ್ಯೆ ಸಂಧಾನವೇಷ ಒಳಿತನ್ನು ಪೋಷಿಸಿ ಪ್ರಚಾರ ಮಾಡುವಾತನು ಸುಳ್ಳು ಹೇಳುವವನಲ್ಲವೆಂದು ಪ್ರವಾ ಹೇಳಿರುವುದನ್ನು ನಾನು ಆಲಿಸಿದ್ದೇನೆ."

(ಬುಖಾರಿ, ಮುಃ

ಅಕ್ರಮ ಮತ್ತು ಅನ್ಯಾಯ

ನ್ಯಾಯ ಪಾಲನೆಯಿಂದ ಮಾತ್ರ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಸಬ ಆದ್ದರಿಂದ ನ್ಯಾಯ ಪಾಲನೆಯಾಗಬೇಕೆಂದು ಬಯಸದವರು ತೀರಾ ವಿರಳ. ಅ ವೆಸಗುವವರೂ ತಮಗೆ ನ್ಯಾಯದೊರೆಯಬೇಕೆಂದು ಬಯಸುತ್ತಾರೆ ಮತ್ತು ತಾವು ವಕ್ತಾರರೆಂದು ಸಾಮಾನ್ಯವಾಗಿ ವಾದಿಸುತ್ತಾರೆ.

ನ್ಯಾಯವು, ಇಸ್ಲಾಮ್ ಅತ್ಯಧಿಕ ಮಹತ್ವ ನೀಡಿರುವಂತಹ ಮೌಲ್ಯವಾಗಿದೆ. ಇಸ ಮಾನವೀಯ ಕಲ್ಪನೆಯು ನ್ಯಾಯದ ಬಗೆಗಿನ ಕುರ್‌ಆನ್ ವಚನಗಳಲ್ಲಿ ಧಾರಾ ಕಾಣಸಿಗುತ್ತದೆ.

"ಸತ್ಯವಿಶ್ವಾಸಿಗಳೇ! ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೆ. ಕಕ್ಷಿಯು ಧನಿ

ವಾ ಬಡವನಿರಲಿ ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿ ರುತ್ತಾನೆ. ುದರಿಂದ ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯ ಪರಿಪಾಲನೆಯಿಂದ ಸರಿಯ ಡಿರಿ. ನೀವು ಗೂಢಾರ್ಥದ ಮಾತುಗಳನ್ನಾಡಿದರೆ ಅಥವಾ ಸತ್ಯದಿಂದ ನುಣುಚಿ ಕೊಂಡರೆ, ಯವಾಗಿಯೂ ನೀವು ಮಾಡುತ್ತಿರುವ ಕರ್ಮಗಳ ಅರಿವು ಅಲ್ಲಾಹನಿಗಿದೆ ಯೆಂಬುದು ನ್ನಾಗಿ ನೆನಪಿರಲಿ."

(ಪವಿತ್ರ ಕುರ್‌ಆನ್, 4:135)

"ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆನಿಲ್ಲುವವರೂ ನ್ಯಾಯದ ಕ್ಷ್ಯವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ುಗುಣವಾಗಿರುತ್ತದೆ. ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ. ನೀವು ಮಾಡುತ್ತಿರುವುದನ್ನೆಲ್ಲ ಲ್ಲಾಹನು ಚೆನ್ನಾಗಿ ಅರಿಯುವವನಾಗಿದ್ದಾನೆ."

(ಪವಿತ್ರ ಕುರ್‌ಆನ್, 5:8)

"ನೀವು ತೀರ್ಪು ನೀಡುವುದಿದ್ದರೆ, ಸರಿಯಾಗಿ ನ್ಯಾಯ ಪೂರ್ವಕವಾಗಿ ತೀರ್ಪು ನೀಡಿರಿ. ಲ್ಲಾಹನು ನ್ಯಾಯ ಪರಿಪಾಲಕರನ್ನು ಮೆಚ್ಚುತ್ತಾನೆ."

(ಪವಿತ್ರ ಕುರ್‌ಆನ್, 5:42)

"ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅನ್ಯಾಯ, ಅತ್ಯಾಚಾರಗಳನ್ನು ಷೇಧಿಸುತ್ತಾನೆ. ನೀವು ಜಾಗೃತರಾಗಲಿಕ್ಕಾಗಿ ಆತನು ನಿಮಗೆ ಉಪದೇಶ ನೀಡುತ್ತಾನೆ."

(ಪವಿತ್ರ ಕುರ್‌ಆನ್, 16:90)

ನ್ಯಾಯ ಪಾಲನೆಗೆ ಆಜ್ಞಾಪಿಸಿರುವಂತೆಯೇ ಅಕ್ರಮ ಮತ್ತು ಅನ್ಯಾಯವನ್ನು ನೆಗೊಳಿಸುವಂತೆ ಇಸ್ಲಾಮ್ ಬಲವಾಗಿ ಒತ್ತಾಯಿಸಿದೆ. ಪವಿತ್ರ ಕುರ್‌ಆನ್ ಹೀಗೆ ಳುತ್ತದೆ,

"ಕೇಳಿರಿ, ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ."

(ಪವಿತ್ರ ಕುರ್‌ಆನ್, 11:18)

"ಅಕ್ರಮಿಗಳಿಗೆ ಯಾವ ಸಹಾಯಕನೂ ಇರಲಾರರು."

(ಪವಿತ್ರ ಕುರ್‌ಆನ್, 22:71)

"ಅಕ್ರಮಿಗಳಿಗೆ ಆಪ್ತ ಮಿತ್ರರೂ ಸ್ವೀಕೃತವಾಗುವ ಶಿಫಾರಸುದಾರರೂ ಸಿಗಲಾರರು."

(ಪವಿತ್ರ ಕುರ್‌ಆನ್, 40:18)

"ಹೇಳಿರಿ, ನನ್ನ ಪ್ರಭು ನಿಷಿದ್ಧ ಗೊಳಿಸಿದ ವಿಷಯಗಳಿವು:- ಲಜ್ಜಾಹೀನ ರ್ಮಗಳು - ಅವು ಪ್ರತ್ಯಕ್ಷವಾದವುಗಳಿರಲಿ ಅಥವಾ ರಹಸ್ಯವಾದವುಗಳಿರಲಿ- ಪಾಪ ರ್ಮಗಳು, ಸತ್ಯಕ್ಕೆ ವಿರುದ್ಧವಾದ ಅತಿರೇಕ, ಅಲ್ಲಾಹನು ಯಾರ ಪರವಾಗಿ ಯಾವುದೇ

ಆಧಾರಅವತೀರ್ಣಗೊಳಿಸಿಲ್ಲವೋ ಅಂಥವರನ್ನು ಅವನೊಂದಿಗೆ ಸಹಭಾಗಿಯಾಗಿಸುವ ಮತ್ತು (ವಾಸ್ತವದಲ್ಲಿ ಅಲ್ಲಾಹನೇ ಹೇಳಿರುತ್ತಾನೆಂದು) ನಿಮಗೆ ತಿಳುವಳಿಕೆ ಇಲ್ಲದಿರ ಮಾತನ್ನು ಅಲ್ಲಾಹನ ಹೆಸರಲ್ಲಿ ಹೇಳುವುದು."

(ಪವಿತ್ರ ಕುರ್‌ಆನ್, 7:

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಮರ್ದಿತನ ಪ್ರಾರ್ಥನೆಯ ಬಗ್ಗೆ ಎಚ್ಚರಿಕೆ ವಹಿ ಅದರ ಮತ್ತು ಅಲ್ಲಾಹನ ಮಧ್ಯೆ ಪರದೆಯಿಲ್ಲ."

(ಬುಖಾರಿ, ಮುಸ್ಲಿ

"ಮರ್ದಿತನ ಪ್ರಾರ್ಥನೆಗೆ ಉತ್ತರ ದೊರೆಯುವುದು, ಆತ ಅಧರ್ಮಿಯಾಗಿದ್ದರೂ ಅಧರ್ಮದ ಫಲವೂ ಅವನಿಗೆ ದೊರೆಯುವುದು."

(ಅಹ್ಮ

"ಅಲ್ಲಾಹನು ಹೀಗೆ ತಿಳಿಸಿರುತ್ತಾನೆ, ನನ್ನ ಮಹಾನತೆ ಮತ್ತು ಶೌರ್ಯದಾ ನಿಶ್ಚಯವಾಗಿಯೂ ನಾವು ಅಕ್ರಮಿಗಳಿಗೆ ದಿಢೀರ್ ಮತ್ತು ಸಾವಧಾನವಾದ ಶಿಕ್ಷೆಯ ನೀಡುವೆವು. ಮರ್ದಿತನನ್ನು ನೋಡಿ ಸಾಧ್ಯವಿದ್ದರೂ ಆತನಿಗೆ ನೆರವಾಗದವರನ್ನು ನ ಶಿಕ್ಷಿಸುತ್ತೇವೆ."

(ಅಹ್ಮ

"ಅಕ್ರಮಿಯನ್ನು ನೋಡಿಯೂ ಜನರು ಆತನನ್ನು ತಡೆಯದಿದ್ದರೆ ಅಲ್ಲಾಹ ಅವರನ್ನು ಒಟ್ಟಿಗೆ ಶಿಕ್ಷಿಸುವನು."

(ಅಬೂದಾವೂ

"ನನ್ನ ಸಮುದಾಯವು ತಮ್ಮಲ್ಲಿರುವ ಮರ್ದಕನೊಡನೆ, ನೀನು ಮರ್ದಕನೆಂ ಹೇಳುವುದನ್ನು ನೀನು ನೋಡದಿದ್ದರೆ ಎಲ್ಲ ಒಳಿತುಗಳೂ ಅವರಿಂದ ಹೊರಟು ಹೋಗುವುದ

(ತಿರ್ಮಿ

ಸಾಮಾನ್ಯ ಶಿಷ್ಟಾಚಾರಗಳು

ಸಾಮಾಜಿಕ ಜೀವನವನ್ನು ಸ್ವಸ್ಥ ಮತ್ತು ಸಾರ್ಥಕಗೊಳಿಸಲು ಅಗತ್ಯವಿರುವ ಸಾಮಾ ಶಿಷ್ಟಾಚಾರಗಳನ್ನು ಇಸ್ಲಾಮ್ ಕಲಿಸಿದೆ. ಮಾನವ ಸಂಬಂಧಗಳನ್ನು ಹಾರ್ದಿಕ ಮ ಸುದೃಢಗೊಳಿಸಲಿಕ್ಕಾಗಿ ಅವುಗಳನ್ನು ಪಾಲಿಸಬೇಕೆಂದು ಆಜ್ಞಾಪಿಸಿದೆ.

ಅಲ್ಲಾಹನು ಹೀಗೆ ಆಜ್ಞಾಪಿಸಿದ್ದಾನೆ,

"ಸತ್ಯವಿಶ್ವಾಸಿಗಳೇ, ನಿಮ್ಮ ಮನೆಗಳ ಹೊರತು ಇತರರ ಮನೆಗಳಿಗೆ ಅವರ ಒ ಪಡೆಯದೆ ಹಾಗೂ ಮನೆಯವರಿಗೆ ಸಲಾಮ್ ಹೇಳದೆ ಪ್ರವೇಶಿಸಬೇಡಿರಿ."

(ಪವಿತ್ರ ಕುರ್‌ಆನ್, 24:

ಬರ್‍ರಾಅ(ರ) ವರದಿ ಮಾಡಿದ್ದಾರೆ, "ರೋಗಿಯ ಸಂದರ್ಶನ, ಜನಾಝಾದ ಹೋಗುವುದು, ಸೀನಿದವನಿಗಾಗಿ ಪ್ರಾರ್ಥನೆ, ಮರ್ದಿತನಿಗೆ ಬೆಂಬಲ, ಸಲಾಮ್‌ನ ಪ್ರಸ

ಯ ಈಡೇರಿಕೆಗೆ ನೆರವು ಎಂಬೀ ವಿಷಯಗಳನ್ನು ಪ್ರವಾದಿಯವರು(ಸ) ನಮಗೆ ಸಿದ್ದಾರೆ."

(ಬುಖಾರಿ, ಮುಸ್ಲಿಮ್)

ಅಬ್ದುಲ್ಲಾ(ರ) ವರದಿ ಮಾಡಿದ್ದಾರೆ, "ನೀವು ಸಲಾಮನ್ನು ವ್ಯಾಪಕಗೊಳಿಸಿ, ಆಹಾರ ಕುಟುಂಬ ಸಂಬಂಧವನ್ನು ಜೋಡಿಸಿ, ಎಲ್ಲರೂ ನಿದ್ರಿಸಿರುವಾಗ ನಮಾಝ್ ಮಾಡಿರಿ. ದರೆ ಸುರಕ್ಷಿತವಾಗಿ ಸ್ವರ್ಗಕ್ಕೆ ಪ್ರವೇಶಿಸಬಹುದೆಂದು ಪ್ರವಾದಿಯವರು(ಸ) ವುದನ್ನು ನಾನು ಕೇಳಿದ್ದೇನೆ."

(ತಿರ್ಮಿದಿ)

ಕತಾದಃ(ರ) ವರದಿ ಮಾಡಿದ್ದಾರೆ, "ಪ್ರವಾದಿಯವರು(ಸ) ಅನುಯಾಯಿಗಳ ಮಧ್ಯೆ ಹಸ್ತ ನದ ರೂಢಿಯಿತ್ತೇ ಎಂದು ಅನಸ್‌ರೊಡನೆ(ರ) ಕೇಳಿದಾಗ ಅವರು 'ಹೌದು' ಎಂದು ಸಿದರು."

(ಬುಖಾರಿ)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಇಬ್ಬರು ಮುಸ್ಲಿಮರು ಭೇಟಿಯಾಗುವಾಗ ಫುವ ಮಾಡಿದರೆ ಇಬ್ಬರೂ ಬೇರ್ಪಡುವುದಕ್ಕಿಂತ ಮುಂಚೆ ಅವರ ಪಾಪಗಳು ಲ್ಪಡುತ್ತವೆ."

(ಅಬೂದಾವೂದ್)

ಬೂದರ್‌ರಿಂದ(ರ) ವರದಿಯಾಗಿದೆ, "ಹಸನ್ಮುಖಿಯಾಗಿ ತನ್ನ ಸಹೋದರನನ್ನು ಗುವುದೂ ಸೇರಿದಂತೆ, ಸತ್ಕರ್ಮಗಳ ಪೈಕಿ ಯಾವುದನ್ನೂ ನೀನು ಕ್ಷುಲ್ಲಕವೆಂದು ಸಬಾರದೆಂದು ಪ್ರವಾದಿ(ಸ) ಸೂಚಿಸಿದ್ದಾರೆ."

(ಮುಸ್ಲಿಮ್)

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ನೀನು ನಿನ್ನ ಸಹೋದರನ ಮುಖ ನೋಡಿ ಳ್ನಗುವುದೂ ದಾನವಾಗಿದೆ."

(ಅತ್ತರ್ಗೀಬ್ ವತ್ತರ್ಹೀಬ್)

ಇತರರ ಮನೆಗಳಿಗೆ ಇಣುಕಿ ನೋಡಬಾರದೆಂದು ಕಲಿಸಿದ ಇಸ್ಲಾಮ್, ಅನ್ಯರ ಗಳನ್ನು ಕಾಪಾಡಿ ಕುಂದುಕೊರತೆಗಳನ್ನು ಮರೆಮಾಚಬೇಕೆಂದು ಆದೇಶಿಸಿದೆ. ರೋಗಿಗಳ ನವು ಮಹಾ ಪುಣ್ಯಕರ್ಮವೆಂದೂ ಕಲಿಸಿದೆ. ಮಾತ್ರವಲ್ಲ, ಹಾಗೆ ಸಂದರ್ಶಿಸದಿರುವುದು ಅಪರಾಧವೆಂದೂ ಎಚ್ಚರಿಸಿದೆ. ಹೀಗೆ ಮಾನವೀಯ ಸಂಬಂಧಗಳನ್ನು ಸುದೃಢಗೊಳಿಸಿ, ಜಿಕ ಜೀವನದ ಭದ್ರತೆಗೆ ಅಗತ್ಯವಿರುವ ಆದೇಶಗಳನ್ನೂ ಇಸ್ಲಾಮ್ ನೀಡಿದೆ.

ಕ ಸ್ವಾತಂತ್ರ್ಯ

ಇಸ್ಲಾಮಿನ ದೃಷ್ಟಿಯಲ್ಲಿ ಹಣವು ದೇವನದ್ದಾಗಿದೆ. ಆದ್ದರಿಂದ ಮಾನವನು ಕೇವಲ ನ ಆಜ್ಞೆ ನಿರ್ದೇಶಗಳಂತೆಯೇ ಸಂಪತ್ತನ್ನು ವ್ಯವಹರಿಸಬೇಕು. ಇಸ್ಲಾಮಿನ ಆರ್ಥಿಕ ಯು ವ್ಯಕ್ತಿಯ ಸಂಪಾದನಾ ಸ್ವಾತಂತ್ರ್ಯವನ್ನೂ ಸಮಾಜದ ಸಮಗ್ರ ಬೇಡಿಕೆಗಳನ್ನೂ

ಆರೋಗ್ಯ ಪೂರ್ಣವಾಗಿ ಜೋಡಿಸುತ್ತದೆ. ಸಾಮಾಜಿಕ ಬೇಡಿಕೆಗೆ ವಿರುದ್ಧವಾಗಿ (ಸಮಾಜ ಕಲ್ಯಾಣಕ್ಕೆ ಹಾನಿಕರವಾದ ರೀತಿಯಲ್ಲಿ ಅದು ಸೊತ್ತು ಸಂಪಾದಿಸಲು ಅನುಮತಿಸು ಜನ ಹಿತಕ್ಕೆ ವಿರುದ್ಧವಾದ ಎಲ್ಲ ಸಂಪಾದನಾ ಕ್ರಮಗಳನ್ನೂ ಕಟುವಾಗಿ ವಿರೋಧಿಸ ಶೋಷಣೆ, ಕಳ್ಳತನ, ಭ್ರಷ್ಟಾಚಾರ, ಕಳ್ಳ ದಾಸ್ತಾನು, ಲಂಚ, ಕಾಳಸಂತೆ, ಮೋಸ, ವ ಬಡ್ಡಿ, ಜೂಜಾಟ ಇತ್ಯಾದಿ ಎಲ್ಲ ಸಾಮಾಜಿಕ ಕೆಡುಕುಗಳನ್ನೂ ಆರ್ಥಿಕ ಅಪರಾಧಗ ಅದು ಬಲವಾಗಿ ಖಂಡಿಸುತ್ತದೆ. ಅನ್ಯರ ಶ್ರಮ ಫಲವನ್ನು ಅನುಭೋಗಿಸುವ ಭಕ್ಷಕರು ಇಸ್ಲಾಮಿನ ದೃಷ್ಟಿಯಲ್ಲಿ ಶಾಪಗ್ರಸ್ತರಾಗಿದ್ದಾರೆ.

ಆರ್ಥಿಕ ವ್ಯವಹಾರಗಳಲ್ಲಿ ವಂಚನೆ ನಡೆಸುವುದು, ಬೆಲೆ ಹೆಚ್ಚಿಸಲಿಕ್ಕಾಗಿ ಅ ವಸ್ತುಗಳನ್ನು ಬಚ್ಚಿಡುವುದು, ಇವು ನಿಷೇಧಿತ ಪಾಪ ಕೃತ್ಯಗಳಾಗಿವೆ. ಪ್ರವಾದಿ(ಸ) ಹೇಳಿದ್ದಾರೆ, "ವಂಚನೆ ಮಾಡುವಾತನು ನಮ್ಮವನಲ್ಲ."

(ಅಹ್ಮದ್, ತಿ

"ಅಕ್ರಮ ದಾಸ್ತಾನು ಇರಿಸುವವನು ಪಾಪಿ."

(ಮುಸ್ಲಿಮ್, ಅಬೂದಾ

"ಯಾವನಾದರೂ ಆಹಾರ ವಸ್ತುಗಳನ್ನು 40ದಿನ ಬಚ್ಚಿಟ್ಟರೆ ಅಲ್ಲಾಹನೊಂದಿಗಿರುವ ಮತ್ತು ಅಲ್ಲಾಹನಿಗೆ ಆತನೊಂದಿಗಿರುವ ಹೊಣೆಯು ಕೊನೆಗೊಳ್ಳ

(ಅ

ಅಂತಿಮ ದಿನ ಎಲ್ಲ ವಂಚಕರಿಗೂ ಒಂದೊಂದು ಧ್ವಜವನ್ನು ನೀಡಿ ಹೇಳಲಾಗುವುದು, "ಇದು ನೀನು ಇಂತಿಂತವರನ್ನು ವಂಚಿಸಿದ ಪರಿಣಾಮವಾಗಿದೆ

(ಬುಖಾರಿ, ಮು

"ಕುತಂತ್ರ, ಮೋಸ, ವಂಚನೆಯು ನರಕಕ್ಕೆ ಅರ್ಹವಾಗಿದೆ."

(ಅಬೂದಾ

ಅಲ್ಲಾಹ್ ಹೀಗೆ ಹೇಳಿರುವನು,

"ಓ ಸತ್ಯವಿಶ್ವಾಸಿಗಳೇ! ನೀವು ಪರಸ್ಪರರ ಸಂಪತ್ತನ್ನು ಅನುಚಿತ ರೀತಿ ಕಬಳಿಸಬೇಡಿರಿ. ಲೇವಾ ದೇವಿಗಳು ಪರಸ್ಪರ ಒಪ್ಪಿಗೆಯಿಂದಾಗಬೇಕು. ನಿಮ್ಮನ್ನು ವಧಿಸಿಕೊಳ್ಳಬೇಡಿರಿ. ಅಲ್ಲಾಹನು ನಿಮ್ಮ ಮೇಲೆ ಕೃಪೆಯುಳ್ಳವನೆಂಬುದನ್ನು ಖಾತ್ರಿ ನಂಬಿರಿ."

(ಪವಿತ್ರ ಕುರ್‌ಆನ್,

"ನೀವು ನಿಮ್ಮ ಸಂಪತ್ತನ್ನು ಪರಸ್ಪರ ಅನುಚಿತ ರೀತಿಯಿಂದ ಕಬಳಿಸಬಾರದು ನಿಮಗೆ ಇತರರ ಸಂಪತ್ತಿನ ಒಂದಂಶವನ್ನು ಉದ್ದೇಶಪೂರ್ವಕ ಅಕ್ರಮ ರೂ ಕಬಳಿಸುವ ಸಂದರ್ಭ ಸಿಗುವಂತೆ ಅವುಗಳನ್ನು ಅಧಿಕಾರಿಗಳ ಮುಂದೆ ಸಮರ್ಪಿಸಬಾ

(ಪವಿತ್ರ ಕುರ್‌ಆನ್, :

ವ್ಯಾಪಾರದಲ್ಲಿ ಪರಸ್ಪರ ವಂಚಿಸಬಾರದೆಂದು ಪ್ರವಾದಿ(ಸ) ಆದೇಶಿಸಿದ್ದಾರೆ.

(ಬುಖಾರಿ, ಮು

ಅವರು(ಸ) ಹೀಗೆ ಹೇಳಿದ್ದಾರೆ, "ಲಂಚ ಕೊಡುವವ, ಪಡೆಯುವವ ಮತ್ತು ಅವರ ಧ್ಯೆ ಅದನ್ನು ಕೊಡಿಸುವಾತನನ್ನು ಅಲ್ಲಾಹನು ಶಪಿಸಿದ್ದಾನೆ."

(ಅಹ್ಮದ್)

"ಅನುಕೂಲಕರ ತೀರ್ಪಿಗಾಗಿ ಲಂಚ ಕೊಡುವುದು ಅವಿಶ್ವಾಸವಾಗಿದೆ."

(ತಬ್ರಾನಿ)

ಬಡ್ಡಿ ಮತ್ತು ಜೂಜಾಟವನ್ನು ಇಸ್ಲಾಮ್ ಮಹಾ ಪಾಪವೆಂದು ಪರಿಗಣಿಸುತ್ತದೆ. ರ್‌ಆನ್ ಹೇಳುತ್ತದೆ,

"ಬಡ್ಡಿ ತಿನ್ನುವವರ ಅವಸ್ಥೆಯು ಶೈತಾನನ ಸೋಂಕಿನಿಂದ ಹುಚ್ಚನಾದವನಂತಿದೆ."

(ಪವಿತ್ರ ಕುರ್‌ಆನ್, 2:275)

"ಬಡ್ಡಿಯ ನಿಷೇಧದ ಆದೇಶವು ಬಂದ ಬಳಿಕವೂ ಅದೇ ವ್ಯವಹಾರವನ್ನು ಮುಂದುವರಿಸುವವರು ನರಕವಾಸಿಗಳಾಗಿದ್ದು ಸದಾ ಅಲ್ಲೇ ನರಳುತ್ತಿರುವರು. ಅಲ್ಲಾಹನು ಡ್ಡಿಯ ವ್ಯವಹಾರವನ್ನು ಅಳಿಸಿ ಬಿಡುತ್ತಾನೆ. ದಾನಧರ್ಮಗಳನ್ನು ವೃದ್ಧಿಸುತ್ತಾನೆ. ಲ್ಲಾಹನು ಕೃತಘ್ನ ದುಷ್ಕರ್ಮಿಗಳನ್ನು ಮೆಚ್ಚುವುದಿಲ್ಲ."

(ಪವಿತ್ರ ಕುರ್‌ಆನ್, 2:275, 276)

"ಓ ಸತ್ಯವಿಶ್ವಾಸಿಗಳೇ! ಮದ್ಯ, ಜೂಜು, 'ಬಲಿಪೀಠಗಳು' ಮತ್ತು 'ದಾಳ ಹಾಕುವುದು' ವೆಲ್ಲ ಹೊಲಸು ಪೈಶಾಚಿಕ ಕೃತ್ಯಗಳಾಗಿವೆ. ಅವುಗಳನ್ನು ವರ್ಜಿಸಿರಿ. ನಿಮಗೆ ಯಶಸ್ಸು ಭಿಸಬಹುದೆಂದು ನಿರೀಕ್ಷಿಸಬಹುದು. ಶೈತಾನನು ಮದ್ಯ ಮತ್ತು ಜೂಜಿನ ಮೂಲಕ ಮ್ಮೊಳಗೆ ಹಗೆತನ ಮತ್ತು ದ್ವೇಷವನ್ನುಂಟು ಮಾಡಲಿಕ್ಕೂ ನಿಮ್ಮನ್ನು ಅಲ್ಲಾಹನ ್ಮರಣೆಯಿಂದ ಹಾಗೂ ನಮಾಝ್‌ನಿಂದ ತಡೆಯಲಿಕ್ಕೂ ಇಚ್ಛಿಸುತ್ತಾನೆ. ಇನ್ನಾದರೂ ನೀವು ವುಗಳನ್ನು ತ್ಯಜಿಸುವಿರಾ?"

(ಪವಿತ್ರ ಕುರ್‌ಆನ್, 5:90-91)

ಹೀಗೆ ಸಾಮಾಜಿಕ ಹಿತಕ್ಕೆ ವಿರುದ್ಧವಾದ ಎಲ್ಲ ರೀತಿಯ ಸಂಪಾದನಾ ಮಾರ್ಗಗಳನ್ನೂ ಸ್ಲಾಮ್ ನಿಷೇಧಿಸಿದೆ. ಆ ರೀತಿ ನಿಷೇಧಿಸಲಾದ ನಿಷಿದ್ಧ ಆಹಾರವನ್ನು ತಿನ್ನುವವರು ರಕವಾಸಿಗಳು ಮತ್ತು ನಿತ್ಯ ದುರಂತಕ್ಕೆ ಗುರಿಯಾಗುವರೆಂದು ಎಚ್ಚರಿಸುತ್ತದೆ. ಅಕ್ರಮ ಂಪಾದನೆಯನ್ನು ಬಳಸುವವರ ಪ್ರಾರ್ಥನೆಯು ಸ್ವೀಕೃತವಾಗುವುದಿಲ್ಲವೆಂದು ಪ್ರವಾದಿಯವರು(ಸ) ಳಿಸಿದ್ದಾರೆ.

ಸಾಮಾಜಿಕ ಹಿತಕ್ಕೆ ಬದ್ಧವಾಗಿ ಹಣ ಸಂಪಾದಿಸುವುದನ್ನು ಅನುಮತಿಸಿರುವ ಇಸ್ಲಾಮ್, ದನ್ನು ಸ್ವಾಧೀನವಿರಿಸುವ ಹಕ್ಕನ್ನೂ ವ್ಯಕ್ತಿಗಳಿಗೆ ನೀಡಿದೆ. ಹಣವನ್ನು ನ್ಯಾಯೋಚಿತ ೀತಿಯಲ್ಲಿ ಸಂಪಾದಿಸಬೇಕೆಂದು ಆದೇಶಿಸಿದ ಜತೆಗೆ ಅವರ ಮೇಲಿನ ಎಲ್ಲ ಹಸ್ತಕ್ಷೇಪಗಳನ್ನು ಲವಾಗಿ ನಿಷೇಧಿಸಿದೆ. ಪ್ರಾಣ ಮತ್ತು ಮಾನಗಳಂತೆಯೇ ಸೊತ್ತು ಕೂಡಾ ರಕ್ಷಿತವಾಗಿರಬೇಕೆಂದು ಅದು ಕಲಿಸುತ್ತದೆ.

ಹಣವನ್ನು ಎಷ್ಟೇ ನ್ಯಾಯೋಚಿತ ರೀತಿಯಿಂದ ಸಂಪಾದಿಸಿದರೂ ಅದರ ಪರಮೋ ಒಡೆತನದ ಹಕ್ಕು ವ್ಯಕ್ತಿಗಳ ಬದಲಾಗಿ ಕೇವಲ ಅಲ್ಲಾಹನಿಗೆ ಸೇರಿದೆ. ಒಬ್ಬ ವ್ಯಕ್ತಿ ಒಡೆತನದಲ್ಲಿರುವ ಸಂಪತ್ತಿನ ಹಕ್ಕು ಕೇವಲ ಆತನಿಗೆ ಸೀಮಿತವಾಗಿಲ್ಲ. ಆದ್ದರಿ ಸಂಪತ್ತನ್ನು ಸಂಗ್ರಹಿಸಿ ಶೇಖರಿಸಿಡುವುದು ಕಠಿಣ ಶಿಕ್ಷೆಗೆ ಹೇತುವಾಗಬಹುದೆಂದು ಇಸ್ಲಾ ಕಲಿಸುತ್ತದೆ. ಕುರ್‌ಆನ್ ಹೀಗೆ ಹೇಳುತ್ತದೆ,

"ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವಮಾರ್ಗದಲ್ಲಿ ಖ ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ. ಈ ಚಿನ್ನ-ಬೆಳ್ಳಿಗಳ ಮೆ ನರಕಾಗ್ನಿಯನ್ನು ಉರಿಸಲಾಗುವುದು. ತರುವಾಯ ಅದರಿಂದಲೇ ಅವರ ಹಣೆಗಳಿ ಪಾರ್ಶ್ವಗಳಿಗೂ ಬೆನ್ನುಗಳಿಗೂ ಬರೆ ಹಾಕಲಾಗುವುದು."

(ಪವಿತ್ರ ಕುರ್‌ಆನ್, 9:34-

"ಹಣವು ಕೇವಲ ನಿಮ್ಮ ಶ್ರೀಮಂತರಲ್ಲಿ ಚಲಿಸುವಂತಾಗದಿರಲಿಕ್ಕಾಗಿ (ಹಿ ಮಾಡಲಾಗಿದೆ)."

(ಪವಿತ್ರ ಕುರ್‌ಆನ್, 59:

"ಶ್ರೀಮಂತರ ಸೊತ್ತಿನಲ್ಲಿ ಯಾಚಕರಿಗೂ ನಿರ್ಗತಿಕರಿಗೂ ಪಾಲಿದೆ."

(ಪವಿತ್ರ ಕುರ್‌ಆನ್, 51 :1

"ಸಂಬಂಧಿಕರಿಗೂ ಬಡವರಿಗೂ ಪ್ರಯಾಣಿಕರಿಗೂ ಅವರ ಹಕ್ಕನ್ನು ನೀಡಿರಿ."

(ಪವಿತ್ರ ಕುರ್‌ಆನ್, 17:2

ಹೀಗೆ ಇಸ್ಲಾಮ್ ಸಂಪತ್ತನ್ನು, ಸಾಮಾಜಿಕ ಜೀವನದ ಸುಗಮ, ಸುಭದ್ರ ಮತ ಆರೋಗ್ಯ ಪೂರ್ಣ ಸ್ಥಿತಿಗೆ ಪೂರಕವಾಗಿ ಮಾರ್ಪಡಿಸಿತು. ಮಾನವೀಯ ಸಂಬಂಧಗ ಭದ್ರತೆಗೆ ಅಗತ್ಯವಿರುವ ನಿಯಮ ನಿಬಂಧನೆಗಳನ್ನು ನೀಡಿತು. ಅದಕ್ಕೆ ವಿರುದ್ಧವಾದ ಯಾ ಘಟನೆಯೂ ಸಂಭವಿಸಬಾರದೆಂದು ಆಜ್ಞಾಪಿಸಿತು. ಆದ್ದರಿಂದ ಬಡವರ ಭಾವನೆಗಳನ ನೋಯಿಸುವ ದುರ್ವ್ಯಯ ಮತ್ತು ದುಂದುಗಾರಿಕೆಯನ್ನು ಬಲವಾಗಿ ನಿಷೇಧಿಸಿದೆ. ಅವ ಹಕ್ಕುಗಳನ್ನು ದಮನಿಸುವ ಜಿಪುಣತೆಯನ್ನು ವಿರೋಧಿಸುತ್ತದೆ. ಅಲ್ಲಾಹನು ಹೀಗೆ ಹೇಳಿರುವನ

"ನಿಮ್ಮ ಕೈಯನ್ನು ನಿಮ್ಮ ಕೊರಳಿಗೆ ಕಟ್ಟಿಕೊಳ್ಳಬೇಡಿರಿ ಅಥವಾ ನೀವು ದೀನ ಮತ್ತು ಅಸಹಾಯಕರಾಗುವ ರೀತಿಯಲ್ಲಿ ಸಂಪೂರ್ಣ ತೆರೆದಿಡಲೂ ಬೇಡಿರಿ."

(ಪವಿತ್ರ ಕುರ್‌ಆನ್, 17:2

"ದುಂದು ವೆಚ್ಚ ಮಾಡಬೇಡಿರಿ. ದುಂದುಗಾರರು ಶೈತಾನನ ಸೋದರರಾಗಿರುತ್ತಾ ಮತ್ತು ಶೈತಾನನು ತನ್ನ ಪ್ರಭುವಿಗೆ ಕೃತಘ್ನನು."

(ಪವಿತ್ರ ಕುರ್‌ಆನ್, 17 : 26, 2

"ನೀವು ದುರ್ವ್ಯಯ ಮಾಡಬೇಡಿರಿ. ದುರ್ವ್ಯಯ ಮಾಡುವವರನ್ನು ಅಲ್ಲಾಹನ ಮೆಚ್ಚುವುದಿಲ್ಲ."

(ಪವಿತ್ರ ಕುರ್‌ಆನ್, 6:141

◆◆

ಕಾರುಣ್ಯದ ಧರ್ಮ

ಕರುಣೆಯು ಮಾನವೀಯ ಸಂಬಂಧಗಳನ್ನು ಜೋಡಿಸುವ ಪ್ರಬಲ ಕೊಂಡಿಯಾಗಿದೆ. ರ ಶಕ್ತಿಯು ಅಪಾರ ಮತ್ತು ಅಜೇಯವಾಗಿದೆ. ಕಠೋರ ಹೃದಯಿಗಳನ್ನೂ ಕರುಣೆಯಿಂದ ಸಲು ಸಾಧ್ಯವಿದೆ. ಮಾನವನ ಮುಚ್ಚಿದ ಬಾಗಿಲುಗಳನ್ನು ಅದು ದೂಡಿ ತೆರೆಯುತ್ತದೆ. ಲಿದವರನ್ನು ಪರಸ್ಪರ ಆಪ್ತರಾಗಿ, ವೈರಿಗಳನ್ನು ಪರಸ್ಪರ ಮಿತ್ರರಾಗಿ ಮಾಡುತ್ತದೆ.

ಸಹಾನುಭೂತಿಯ ಮನಸ್ಸುಗಳೇ ನಿಸ್ವಾರ್ಥ ಕರ್ಮಗಳಿಗೆ ಪ್ರೇರಕವಾಗುತ್ತದೆ. ಆಂತರಿಕ ರಣೆಯಿಂದಲೇ ನಿಸ್ವಾರ್ಥ ಸೇವೆಗಳು ಚಿಗುರುತ್ತವೆ. ಅದು ಕರುಣೆಯಿಂದ ಹುಟ್ಟುತ್ತದೆ. ರಿಂದಲೇ ಮನಸ್ಸನ್ನು ಕಾರುಣ್ಯಮಯಗೊಳಿಸಬೇಕೆಂದು ಧರ್ಮವು ಆಜ್ಞಾಪಿಸಿದೆ.

ಅಲ್ಲಾಹನು ದಯಾಮಯನು, ಆತನ ಕರುಣೆಗೆ ಮಿತಿಯಿಲ್ಲ. ಅದು ಇಡೀ ವಿಶ್ವವನ್ನು ಪಿಸಿದೆ. ಅಲ್ಲಾಹನೇ ಈ ರೀತಿ ತಿಳಿಸಿದ್ದಾನೆ:

"ನನ್ನ ಕರುಣೆಯು ಸರ್ವವನ್ನೂ ವ್ಯಾಪಿಸಿಕೊಂಡಿದೆ."

(ಪವಿತ್ರ ಕುರ್‌ಆನ್, 7:156)

ಆಯಿಶಾರಿಂದ(ರ) ವರದಿಯಾಗಿದೆ: ಪ್ರವಾದಿಯವರು(ಸ) ಹೀಗೆ ಹೇಳಿದ್ದಾರೆ, "ಅಲ್ಲಾಹನು ಮ್ಯನು. ಆತನು ಸೌಮ್ಯತೆಯನ್ನು ಮೆಚ್ಚುತ್ತಾನೆ. ಕಠೋರತೆಗೆ ನೀಡುವುದಕ್ಕಿಂತ ಹೆಚ್ಚಿನ ಫಲವನ್ನು ಆತನು ಸೌಮ್ಯತೆಗೆ ನೀಡುತ್ತಾನೆ."

(ಮುಸ್ಲಿಮ್)

ಇನ್ನೊಮ್ಮೆ ಅವರು ಹೀಗೆಂದಿದ್ದಾರೆ, "ಅಲ್ಲಾಹನು ಸೌಮ್ಯನಾಗಿದ್ದಾನೆ. ಆತನು ದರಲ್ಲಿಯೂ ಸೌಮ್ಯತೆಯನ್ನು ಬಯಸುತ್ತಾನೆ."

(ಬುಖಾರಿ, ಮುಸ್ಲಿಮ್)

ಉಮರ್ ಬಿನ್ ಖತ್ತಾಬ್‌ರಿಂದ(ರ) ವರದಿ: ಒಮ್ಮೆ ಪ್ರವಾದಿಯವರ(ಸ) ಬಳಿಗೆ ಇತರ ಗಳ ಜತೆಯಲ್ಲಿ ಗುಲಾಮ ಹೆಣ್ಣೊಬ್ಬಳನ್ನು ಕರೆತರಲಾಯಿತು. ಆ ಹೆಣ್ಣು ಅತ್ತಿತ್ತ ಡುತ್ತಿದ್ದಳು. ಕಣ್ಣಿಗೆ ಕಂಡ ಮಕ್ಕಳನ್ನು ಕೈಗೆತ್ತಿಕೊಂಡು ಎದೆಗಪ್ಪಿ ಮೊಲೆಯೂಡಿಸುತ್ತಿದ್ದಳು. ಪ್ರವಾದಿ(ಸ) ಕೇಳಿದರು, "ಈ ಮಹಿಳೆ ತನ್ನ ಮಗುವನ್ನು ಬೆಂಕಿಗೆ ಎಸೆಯಬಹು ಮ ನೀವು ಭಾವಿಸುತ್ತೀರಾ?" ನಾವು ಹೇಳಿದೆವು, "ಇಲ್ಲ, ಅಲ್ಲಾಹನಾಣೆ! ಅದು ಗೆ ಸಾಧ್ಯವಿಲ್ಲ." ಪ್ರವಾದಿ(ಸ) ಹೇಳಿದರು, "ಈ ಮಹಿಳೆಗೆ ತನ್ನ ಮಗುವಿನೊಂದಿಗಿರುವ

ಕರುಣೆಗಿಂತ ಎಷ್ಟೋ ಪಟ್ಟು ಅಧಿಕ ಕರುಣೆಯು ಅಲ್ಲಾಹನಿಗೆ ತ
ದಾಸರೊಂದಿಗಿದೆ."

(ಬುಖಾ

ಕುರ್‌ಆನ್ ಮಾನವನಿಗೆ ಕಲಿಸಿದ ಮೊದಲ ಪ್ರಾರ್ಥನೆಗಳಲ್ಲೊಂದು ಹೀಗಿದೆ,

"ಪೈಗಂಬರರೇ, ಹೇಳಿರಿ: ನನ್ನೊಡೆಯಾ, ಕ್ಷಮಿಸು ಮತ್ತು ಕರುಣೆ ತೋರು, ನೀ ಸಕಲ ಕರುಣಾಳುಗಳಿಗಿಂತಲೂ ಉತ್ತಮ ಕರುಣಾಮಯಿಯಾಗಿರುತ್ತೀ."

(ಪವಿತ್ರ ಕುರ್‌ಆನ್, 23:1

ಕರುಣೆಯು ದಿವ್ಯಾನುಗ್ರಹವಾಗಿದೆ, **"ನೀವು ಬಹಳ ಸೌಮ್ಯ ಸ್ವಭಾವಿಯಾಗಿರುವು ಅಲ್ಲಾಹನ ಮಹಾ ಕೃಪೆಯಾಗಿದೆ. ನೀವು ಒರಟು ಸ್ವಭಾವಿ ಮತ್ತು ಕ ಹೃದಯದವರಾಗಿರುತ್ತಿದ್ದರೆ ಇವರೆಲ್ಲರೂ ನಿಮ್ಮ ಸುತ್ತಮುತ್ತಲಿನಿಂದ ಹೊರ ಹೋಗುತ್ತಿದ್ದರು."**

(ಪವಿತ್ರ ಕುರ್‌ಆನ್, 3:1

ಅಲ್ಲಾಹನ ಕರುಣೆ ದೊರೆಯಬೇಕಾದರೆ ಜನರೊಡನೆ ಕರುಣೆ ತೋರಬೇಕು. ಜ ವರದಿ ಮಾಡಿದ್ದಾರೆ, ಪ್ರವಾದಿ(ಸ) ಹೇಳಿದರು, "ಜನರೊಡನೆ ಕರುಣೆ ತೋರದವರೊ ಅಲ್ಲಾಹನೂ ಕರುಣೆ ತೋರುವುದಿಲ್ಲ."

(ಬುಖಾರಿ, ಮುಸ್ಲಿ

ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಕರುಣೆಯಿಲ್ಲದವರಿಗೆ ಕಾರುಣ್ಯ ಲಭಿಸಲಾರದ

(ಬುಖಾರಿ, ಮುಸ್ಲಿ

"ಭೂಮಿಯಲ್ಲಿರುವವರಿಗೆ ಕರುಣೆ ತೋರಿಸಿರಿ. ಆಕಾಶದಲ್ಲಿರುವವನು ನಿಮ್ಮ ಮೆ ಕರುಣೆ ತೋರುವನು."

(ತಬ

ಕಾರುಣ್ಯವು ಸೌಭಾಗ್ಯವಾಗಿದೆ. ಅದರ ಅಭಾವವು ದೌರ್ಭಾಗ್ಯವಾಗಿದೆ. ಪ್ರವಾದಿ ಹೇಳಿದ್ದಾರೆ, "ದೌರ್ಭಾಗ್ಯಶಾಲಿಯ ಹೊರತು ಯಾರೂ ಕರುಣೆಯಿಲ್ಲದವರಾಗಲಾರರು

(ಅಬೂದಾವೂ

ಸೌಮ್ಯತೆಯು ಒಳಿತಿನ ಮೂಲವಾಗಿದೆ. ಅದು ಎಲ್ಲವನ್ನೂ ಸುಂದರಗೊಳಿಸುತ್ತ ಜರೀರ್ ಬಿನ್ ಅಬ್ದುಲ್ಲಾ ವರದಿ ಮಾಡಿದ್ದಾರೆ: ಪ್ರವಾದಿಯವರು(ಸ) ಹೇಳುವುದನ್ನು ನ ಕೇಳಿದ್ದೇನೆ, "ಸೌಮ್ಯತೆಯು ಯಾರಿಗೆ ಸಿಗದೇ ಹೋಯಿತೋ ಅವರಿಗೆ ಎಲ್ಲ ಒಳಿತುಗ ತಡೆಯಲ್ಪಟ್ಟಿವೆ."

ಆಯಿಶಾರಿಂದ(ರ) ವರದಿಯಾಗಿದೆ: ಪ್ರವಾದಿಯವರು(ಸ) ಘೋಷಿಸಿದ್ದಾರೆ, "ಸೌಮ್ಯತ ಉಪಸ್ಥಿತಿಯು ಎಲ್ಲವನ್ನೂ ಸುಂದರವಾಗಿಸುತ್ತದೆ. ಅದರ ಅಭಾವವು ಎಲ್ಲವ ವಿರೂಪಗೊಳಿಸುತ್ತದೆ."

(ಮುಸ್ಲಿ

ಸೌಮ್ಯ ಶೀಲರಿಗೆ ನರಕವು ನಿಷಿದ್ಧವಾಗಿದೆ. ಅಲ್ಲದವರು ಅದರ ಹಕ್ಕುದಾರರಾಗುತ್ತಾರೆ.

ಮಸ್‌ಊದ್ ಹೀಗೆ ವರದಿ ಮಾಡಿದ್ದಾರೆ: ಪ್ರವಾದಿಯವರು(ಸ) ಕೇಳಿದರು, "ನರಕ ್ವಾಗಿರುವ ಅಥವಾ ನರಕಕ್ಕೆ ನಿಷಿದ್ಧರಾಗಿರುವವರು ಯಾರೆಂದು ನಿಮಗೆ ತಿಳಿಸಲೇ? ೂಡನೆ ಬೆರೆಯುವವನು, ಸೌಮ್ಯ ಶೀಲನು, ತಾಳ್ಮೆ ವಹಿಸುವವನು ಮತ್ತು ಔದಾರ್ಯ ಸುವವನು." (ತಿರ್ಮಿದಿ)

ಅವರು(ಸ) ಹೀಗೆ ಹೇಳಿದ್ದಾರೆ, "ಅಲ್ಲಾಹನಿಂದ ಅತ್ಯಂತ ದೂರವಿರುವಾತನೇ ಕಠೋರ ಮಿ."

(ತಿರ್ಮಿದಿ)

ಮಹಾ ಕ್ರೂರಿಗಳೊಂದಿಗೂ ಕರುಣೆ ಮತ್ತು ಸೌಮ್ಯತೆಯಿಂದ ವರ್ತಿಸಬೇಕೆಂದು ಮ್ ಆದೇಶಿಸಿದೆ. ಫಿರ್‌ಔನ್, ಜಗತ್ತು ನೋಡಿದ ರಾಜರ ಪೈಕಿ ಮಹಾ ಕ್ರೂರಿ ಮತ್ತು ಕನಾಗಿದ್ದನು. ಪ್ರವಾದಿ ಮೂಸಾ ಮತ್ತು ಸಹೋದರ ಹಾರೂನ್‌ರನ್ನು ಆತನ ಬಳಿಗೆ ಸುವಾಗ ಅಲ್ಲಾಹನು ಹೀಗೆ ಆಜ್ಞಾಪಿಸಿದ್ದನು:

"ಈರ್ವರೂ ಫರೋವನ ಬಳಿಗೆ ಹೋಗಿರಿ, ಆತನು ದುಷ್ಟನಾಗಿದ್ದಾನೆ. ಆತನೊಡನೆ ್ಯವಾಗಿ ಮಾತಾಡಿರಿ."

(ಪವಿತ್ರ ಕುರ್‌ಆನ್, 20:43-44)

ಸತ್ಯವಿಶ್ವಾಸಿಯು ಜನಹಿತಕ್ಕೆ ಪ್ರೇರಕವಾಗುವ ಕರುಣೆಯ ಭಾವನೆಯನ್ನು ಹೊಂದಿರಬೇಕು. ್(ರ) ವರದಿ ಮಾಡಿದ್ದಾರೆ: ಪ್ರವಾದಿಯವರು(ಸ) ಹೀಗೆ ಆದೇಶಿಸಿದ್ದಾರೆ, "ನೀವು ಸುಲಭ ಿಸಿರಿ, ಕಠಿಣಗೊಳಿಸಬೇಡಿರಿ. ಸಂತುಷ್ಟ ಗೊಳಿಸಿರಿ, ಅಸಂತುಷ್ಟಗೊಳಿಸಬೇಡಿರಿ."

(ಬುಖಾರಿ, ಮುಸ್ಲಿಮ್)

ಪ್ರವಾದಿ(ಸ) ಹೇಳಿದರು, "ಆಯಿಶಾ, ನೀನು ಕರುಣೆ ತೋರಿಸು. ಅಲ್ಲಾಹನು ವುದಾದರೂ ಮನೆಯವರಿಗೆ ಒಳಿತನ್ನು ಬಯಸಿದರೆ ಅವರನ್ನು ಕರುಣೆಯುಳ್ಳವರಾಗಿ ತುತ್ತಾನೆ." (ಅಹ್ಮದ್)

ಜಾಬಿರ್(ರ) ವರದಿ ಮಾಡಿದ್ದಾರೆ: ಪ್ರವಾದಿ(ಸ) ಹೇಳಿದರು, "ಅಲ್ಲಾಹನು ವುದಾದರೊಂದು ಜನತೆಗೆ ಒಳಿತನ್ನು ಬಯಸಿದರೆ ಅವರಲ್ಲಿ ಕರುಣೆಯನ್ನು ಮೂಡಿಸುತ್ತಾನೆ."

(ಬಸ್ಸಾರ್)

ಎಲ್ಲಕ್ಕಿಂತ ಮಿಗಿಲಾಗಿ, ಒಬ್ಬನು ಸತ್ಯವಿಶ್ವಾಸಿಯಾಗಬೇಕಾದರೆ ಆತನು ಣ್ಯವಂತನಾಗಿರುವುದು ಕಡ್ಡಾಯವಾಗಿದೆ- "ಪರಸ್ಪರ ಕರುಣೆ ತೋರಿಸದೆ ನೀವು ವಿಶ್ವಾಸಿಯಾಗಲಾರಿರಿ." ಆಗ ಅವರ ಅನುಯಾಯಿಗಳು ಹೇಳಿದರು, "ಅಲ್ಲಾಹನ ಾದಿಗಳೇ(ಸ) ನಾವೆಲ್ಲರೂ ಕರುಣೆಯುಳ್ಳವರಾಗಿದ್ದೇವಲ್ಲವೇ." ಇದನ್ನು ಕೇಳಿ ಾದಿಯವರು(ಸ) ಉತ್ತರಿಸಿದರು, "ಕರುಣೆಯೆಂದರೆ ಕೇವಲ ತನ್ನ ಮಿತ್ರನೊಡನೆ ತ್ರವಲ್ಲ ಎಲ್ಲರೊಡನೆ ತೋರುವ ಕರುಣೆಯಾಗಿದೆ." (ತಬ್ರಾನಿ)

ಭೂಮಿಯಲ್ಲಿರುವ ಎಲ್ಲ ಜೀವಜಾಲಗಳ ಕರುಣೆಯನ್ನು ಒಟ್ಟು ಸೇರಿಸಿದರೂ ಕರುಣೆಯ ಒಂದು ಸಣ್ಣ ಅಂಶವೂ ಆಗಲಾರದೆಂದು ಪ್ರವಾದಿಯವರು(ಸ) ಹೇಳಿ "ಅಲ್ಲಾಹನು ತನ್ನ ಕರುಣೆಯನ್ನು ನೂರು ಪಾಲು ಮಾಡಿ ಅದರ ಒಂದು ಪಾ ಭೂಮಿಯಲ್ಲಿ ಇರಿಸಿದನು. ಅದನ್ನು ಬಳಸಿ ಸೃಷ್ಟಿಗಳು ಇಲ್ಲಿ ಪರಸ್ಪರ ಕರುಣೆ ತೋರಿಸ ಪ್ರಾಣಿಯು ಅದರ ಗೊರಸು ಮರಿಗೆ ತಾಗದಂತೆ ಎತ್ತಿ ಹಿಡಿಯುವುದು ಕೂಡಾ ಆ ಕರು ಭಾಗವಾಗಿದೆ."

(ಬ

ಇನ್ನೊಂದು ಪ್ರವಾದಿ ವಚನದಲ್ಲಿ ಹೀಗಿದೆ, "ಭೂಮಿ ಮತ್ತು ಆಕಾಶ ಸೃಷ್ಟಿಸಿದಾಗ ಅಲ್ಲಾಹನು ನೂರು ತರದ ಕಾರುಣ್ಯವನ್ನು ನಿರ್ಮಿಸಿದನು. ಅವು ಪ್ರತಿಯೊ ಪರಸ್ಪರ ಭೂಮಿ-ಆಕಾಶಗಳಷ್ಟು ವಿಶಾಲವಾಗಿದೆ. ಅವುಗಳ ಪೈಕಿ ಒಂದನ್ನು ಅಲ್ಲಾಹನು ಭೂಮಿಯಲ್ಲಿ ಇರಿಸಿದ್ದಾನೆ. ಅದನ್ನು ಮೈಗೂಡಿಸಿ ತಾಯಿ ತನ್ನ ಮಗುವಿನೊ ಹಾಗೂ ಪ್ರಾಣಿ- ಪಕ್ಷಿಗಳು ಪರಸ್ಪರ ಕರುಣೆ ತೋರಿಸುತ್ತವೆ." (ಮುಸ್ಲಿ

ಹೀಗೆ ಭೂಮಿಗೆ ದೊರೆತ ಕರುಣೆಯಿಂದ ಸತ್ಯವಿಶ್ವಾಸಿಯು ಗರಿಷ್ಠ ಪಾ ಗಳಿಸಿಕೊಳ್ಳಬೇಕೆಂದು ಇಸ್ಲಾಮ್ ಆಜ್ಞಾಪಿಸಿದೆ. ಆದರಿಂದ ಮೂಡುವ ಉದಾರ ನೀತಿಂ ಅವಲಂಬಿಸಬೇಕೆಂದು ಪ್ರವಾದಿ(ಸ) ಕಲಿಸಿದ್ದಾರೆ. ಅಬೂಹುರೈರಾ(ರ) ಹೀಗೆ ವರದಿ ಮಾಡಿ "ಒಮ್ಮೆ ಒಬ್ಬ ಹಳ್ಳಿಗನು ಬಂದು ಮಸೀದಿಯಲ್ಲಿ ಮೂತ್ರ ಶಂಕೆ ಮಾಡಿದ. ಅವನನ್ನು ತಡೆಯಲು ಪ್ರಯತ್ನಿಸಿದರು. ಆಗ ಪ್ರವಾದಿ(ಸ) ಹೇಳಿದರು, 'ನೀವು ಅವ ಮೂತ್ರ ಮಾಡಲು ಬಿಡಿರಿ. ಒಂದು ಬಾಲ್ದಿ ನೀರು ತಂದು ಅಲ್ಲಿಗೆ ಸುರಿಯಿರಿ. ನಿಮ ಸುಲಭಗೊಳಿಸಲಿಕ್ಕಾಗಿ ನೇಮಿಸಲಾಗಿದೆಯೇ ಹೊರತು ಕಷ್ಟಗೊಳಿಸಲಿಕ್ಕಲ್ಲ."

(ಫತ್ಹುಲ್ ಬಾರಿ, ಭಾಗ- 1, ಪುಟ:

ಒಮ್ಮೆ ಉಮರ್ ಫಾರೂಕ್(ರ) ಓರ್ವರನ್ನು ರಾಜ್ಯಪಾಲರಾಗಿ ನೇಮಿಸಲು ನಿರ್ಧರಿಸಿ ಆಗ ಯಾರೋ ಅವರು ಸ್ವಂತ ಮಕ್ಕಳನ್ನು ಮುದ್ದಿಸದವರೆಂದು ತಿಳಿಸಿದರು. ಕೂ ಖಲೀಫರು ತಮ್ಮ ನಿರ್ಧಾರವನ್ನು ಬದಲಿಸಿದರು. ಅವರು ಹೇಳಿದರು, "ನಿನ್ನ ಮನಸ್ಸು ಮಕ್ಕಳ ಮೇಲೆಯೇ ಕರುಣೆ ಸುರಿಸದಿರುವಾಗ ಅದು ಜನರ ಮೇಲೆ ಕರುಣೆ ತೋರಿಸಿ ನಾನು ನಿನ್ನನ್ನು ಎಂದೆಂದಿಗೂ ರಾಜ್ಯಪಾಲನಾಗಿ ನೇಮಿಸಲಾರೆ." ಅನಂತರ ಉಮರ ಆ ನೇಮಕಾತಿ ಪತ್ರವನ್ನು ಹರಿದು ಹಾಕಿದರು.

ಈ ಕಾರುಣ್ಯವನ್ನು ಮಾನವರೊಂದಿಗೆ ಮಾತ್ರವಲ್ಲ ಇತರ ಜೀವಿಗಳೊಂದ ತೋರಿಸಬೇಕಾದುದು ವಿಶ್ವಾಸಿಯ ಕರ್ತವ್ಯವಾಗಿದೆ. ಪ್ರವಾದಿಯವರು ಹೀಗೆ ಹೇಳಿದ "ಅಲ್ಲಾಹನು ಎಲ್ಲ ವಿಷಯದಲ್ಲಿಯೂ ಒಳಿತನ್ನು ನಿರ್ಣಯಿಸಿದ್ದಾನೆ. ಆದ್ದರಿಂದ ಕೊಯ್ಯುವುದಿದ್ದರೆ (ದಿಬಹ್) ಅದನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕು. ವಧಿಸುವುದಿದ್ದ ಒಳ್ಳೆಯ ರೀತಿಯಲ್ಲಿ ವಧಿಸಬೇಕು. ಚೂರಿಯ ಅಲಗನ್ನು ಚೆನ್ನಾಗಿ ಹರಿತಗೊಳಿಸಿ ಪ್ರಾ ಅನುಕೂಲ ಒದಗಿಸಬೇಕು." (ಮುಸ್ಲಿ

ಒಮ್ಮೆ ಒಬ್ಬರು ಪ್ರವಾದಿಯವರೊಡನೆ(ಸ) ಹೇಳಿದರು, "ನಾನು ಆಡನ್ನು ಕೊಯ್ಯುವಾಗ ಸಿ ತೋರಿಸುತ್ತೇನೆ." ಅದನ್ನು ಕೇಳಿ ಪ್ರವಾದಿಯವರು(ಸ) ಹೀಗೆ ಉತ್ತರಿಸಿದರು, "ನೀನು ಕ್ಕೆ ಕರುಣೆ ತೋರಿದರೆ ಅಲ್ಲಾಹನು ನಿನಗೆ ಕರುಣೆ ತೋರಿಸುತ್ತಾನೆ."

(ಹಾಕಿಮ್)

ಒಬ್ಬರು ಕಸಾಯಿಗಾಗಿ ಆಡಿನ ಕಾಲು ಹಿಡಿದು ಎಳೆದೊಯ್ಯುತ್ತಿರುವುದನ್ನು ಉಮರ್ ರೂಕ್(ರ) ನೋಡಿದರು, "ನಿನಗೇನಾಗಿದೆ? ಅದನ್ನು ಉತ್ತಮ ರೀತಿಯಲ್ಲಿ ಸಾಯುವಂತೆ ಡು" ಎಂದರು.

ಅಬೂಹುರ್ಯೆರಾ ವರದಿ ಮಾಡಿದ್ದಾರೆ: ಪ್ರವಾದಿ(ಸ) ಹೀಗೆ ಹೇಳಿದರು, "ಒಬ್ಬರು ರಿಯಲ್ಲಿ ಹೋಗುತ್ತಿದ್ದಾಗ ಬಾಯಾರಿಕೆಯಿಂದ ಬಳಲಿದರು. ಅವರಿಗೆ ಒಂದು ಬಾವಿ ಸಿಸಿತು. ಅದರಲ್ಲಿ ಇಳಿದು ನೀರು ಕುಡಿದರು. ಹೊರಗೆ ಬಂದಾಗ ಒಂದು ನಾಯಿಯು ಹ ತಾಳಲಾಗದೆ ನೆಲ ನೆಕ್ಕುವುದನ್ನು ಕಂಡರು. 'ಈ ನಾಯಿಗೆ ನನ್ನಂತೆಯೇ ಯಾರಿಕೆಯಾಗಿದೆ'ಯೆಂದು ಮನದಲ್ಲಿಯೇ ಹೇಳುತ್ತಾ ಅವರು ಬಾವಿಗಿಳಿದು ತಮ್ಮ ಟಿನಲ್ಲಿ ನೀರು ತುಂಬಿಸಿ ಅದನ್ನು ಬಾಯಿಯಲ್ಲಿ ಕಚ್ಚಿ ಹಿಡಿದು ಮೇಲೆ ಬಂದು ನಾಯಿಗೆ ಸಿದರು. ಇದಕ್ಕಾಗಿ ಅಲ್ಲಾಹನು ಅವರಿಗೆ ಕೃತಜ್ಞತೆ ತೋರಿದನು. ಅವರಿಗೆ ಕ್ಷಮೆ ಿದನು." ಇದನ್ನು ಕೇಳಿದ ಅವರ ಸಂಗಾತಿಗಳು ಹೀಗೆ ಪ್ರಶ್ನಿಸಿದರು, "ಪ್ರಾಣಿಗಳ ಯದಲ್ಲಿಯೂ ನಮಗೆ ಪ್ರತಿಫಲವಿದೆಯೇ?" ಪ್ರವಾದಿ(ಸ) ಉತ್ತರಿಸಿದರು, "ಪ್ರಾಣವಿರುವ ಜೀವಿಗಳ ಬಗ್ಗೆಯೂ ನಿಮಗೆ ಪ್ರತಿಫಲವಿದೆ."

(ಬುಖಾರಿ, ಮುಸ್ಲಿಮ್)

ಇಬ್ನು ಉಮರ್ ವರದಿ ಮಾಡಿದ್ದಾರೆ: ಪ್ರವಾದಿ(ಸ) ಹೇಳಿದರು, "ಬೆಕ್ಕಿನಿಂದಾಗಿ ಓರ್ವ ಂಳೆಯು ದಂಡನೆಗೆ ಗುರಿಯಾದಳು. ಅವಳು ಅದನ್ನು ಹಸಿವೆಯಿಂದ ಸಾಯುವ ತನಕ ಹಾಕಿದಳು. ಅದರಿಂದ ಆಕೆ ನರಕವಾಸಿಯಾದಳು."

(ಬುಖಾರಿ, ಮುಸ್ಲಿಮ್)

ಬೆಕ್ಕಿಗೆ ಆಹಾರ ಪಾನೀಯ ನೀಡದೆ ಕಟ್ಟಿ ಹಾಕಿ ಪೀಡಿಸಿದ್ದೇ ಅದಕ್ಕೆ ಕಾರಣವಾಗಿತ್ತು. ಮಿಯಲ್ಲಿ ಆಹಾರ ಹುಡುಕಲಿಕ್ಕಾಗಿ ಅದನ್ನು ಬಿಡಲೂ ಇಲ್ಲ.

ಪ್ರವಾದಿ(ಸ) ಮತ್ತು ಅನುಯಾಯಿಗಳು ಪಯಣದಲ್ಲಿದ್ದಾಗ ಅವರ ಪೈಕಿ ಒಬ್ಬರು ದು ಪಕ್ಷಿಯ ಮೊಟ್ಟೆಯನ್ನು ತೆಗೆದರು. ತಾಯಿ ಹಕ್ಕಿಯು ಚೀರಾಡುತ್ತಾ ಸುತ್ತಲೂ ರಲಾರಂಭಿಸಿತು. ಈ ಸುದ್ದಿ ತಿಳಿದ ಪ್ರವಾದಿಯವರು(ಸ) ಮೊಟ್ಟೆಯನ್ನು ತೆಗೆದ ದಲ್ಲಿಯೇ ಇರಿಸಿ ಅದರೊಂದಿಗೆ ಕರುಣೆ ತೋರುವಂತೆ ಆದೇಶಿಸಿದರು.

(ಬುಖಾರಿ)

ಅಬೂಹುರ್ಯೆರಾ(ರ) ವರದಿ ಮಾಡಿದ್ದಾರೆ: ಪ್ರವಾದಿ(ಸ) ಹೇಳಿದರು, "ಒಂದು ಯಿಯು ಬಾವಿಯ ಸುತ್ತಲೂ ಓಡಾಡುತ್ತಿತ್ತು. ತೀವ್ರ ಬಾಯಾರಿಕೆಯಿಂದ ಅದು ಸಾಯುವ ಗೆ ತಲಪಿತ್ತು. ಇದನ್ನು ನೋಡಿ ಇಸ್ರಾಈಲ್ ಜನಾಂಗದ ಓರ್ವ ವ್ಯಭಿಚಾರಿಣಿಯು

ತನ್ನ ಬೂಟು ಕಳಚಿ ಅದರಲ್ಲಿ ನೀರು ತಂದು ಅದಕ್ಕೆ ಕುಡಿಸಿದಳು ಮತ್ತು ತಾನೂ ಕುಡಿದ ಅದಕ್ಕಾಗಿ ಅಲ್ಲಾಹನು ಆಕೆಗೆ ಕ್ಷಮೆ ನೀಡಿದನು."

(ಮುಸ್ಲಿ

ಒಂದು ಪ್ರಯಾಣದ ವೇಳೆ ಪ್ರವಾದಿಯವರ(ಸ) ಅನುಯಾಯಿಗಳು ಚಳಿ ಕಾಯಿಸಲಿ ಬೆಂಕಿ ಉರಿಸಿದರು. ಅದು ಅಲ್ಲಿರುವ ಇರುವೆಗಳನ್ನು ಸುಡಬಹುದೆಂಬ ಭಯದಿ ಪ್ರವಾದಿಯವರು(ಸ) ಅದನ್ನು ನಂದಿಸುವಂತೆ ತಿಳಿಸಿದರು. ಹಸಿವೆಯಿಂದ ಕಂಗಾ ರೋದಿಸುತ್ತಿದ್ದ ಒಂಟೆಯ ಕಣ್ಣೀರನ್ನು ಒರೆಸಿರುವಂಥ ಕಾರುಣ್ಯ ತುಂಬಿದ ಕೊಡವಾ ಪ್ರವಾದಿಯವರು(ಸ) ಪ್ರಾಣಿಗಳನ್ನು ಶಪಿಸುವುದನ್ನೂ ಮೆಚ್ಚುತ್ತಿರಲಿಲ್ಲ. ವಿನಾ ಕಾರಣ ಮ ಕಲ್ಲೆಸೆಯಬಾರದು, ಅದರಿಂದ ಮರಕ್ಕೆ ನೋವಾಗುವುದೆಂದೂ ಪ್ರವಾದಿಯವರು(ಸ) ಹೇಳಿದ

ಹೀಗೆ ಎಲ್ಲ ಮಾನವರಲ್ಲಿ ಮತ್ತು ಜೀವ ಜಾಲಗಳಲ್ಲಿ ಮಾತ್ರವಲ್ಲ ಸಪ ಪ್ರಪಂಚಕ್ಕೆ, ಅದರಲ್ಲಿರುವ ಸಕಲ ವಸ್ತುಗಳಿಗೆ ಕರುಣೆ ತೋರಬೇಕೆಂದು ಇಸ್ಲಾ ಆಜ್ಞಾಪಿಸುತ್ತದೆ. ಈ ಕಾರುಣ್ಯದ ಭಾವನೆಯನ್ನು ವಿಶ್ವಾಸದ ಮತ್ತು ಸ್ವರ್ಗ-ನರಕ ಪ್ರಾಪ್ತಿ ಮಾನದಂಡವಾಗಿಯೂ ಇಸ್ಲಾಮ್ ನಿರ್ಣಯಿಸಿದೆ.